

ಬೆಂ. ಶ್ರೀ. ರವೀಂದ್ರ

ಆಟಿಯೂ...
ನೆಟ್‌ನ ಪಾಠವೂ

ಸಮನ್ವಯ ಸಮಿತಿ ಸಾಹಿತ್ಯದಾಸೋಹ
ಎಚ್ಚೆಸ್ವಿ ಅಕ್ಷರನಮನ
ಜನ್ಮ ಶತಾಬ್ದಿ ಸವಿನೆನಪು

ಮಕ್ಕಳ ಕವಿತೆಗಳು

ಆದಿಯೂ ನೆಟ್‌ನ ಪಾಠವೂ

(ಮಕ್ಕಳ ಓದುವ ಕವನಗಳು)

ಬೆಂ.ಶ್ರೀ.ರವೀಂದ್ರ

ಹೂಬಳ್ಳಿ ಪ್ರಕಾಶನ

ತವರು, ನಂ 288, 3ನೆಯ ಮುಖ್ಯ ರಸ್ತೆ,
11ನೆಯ ಅಡ್ಡರಸ್ತೆ ವಸಂತವಲ್ಲಭ ನಗರ,
ಮೊದಲ ಹಂತ, ಬೆಂಗಳೂರು 560 061
ದೂರವಾಣಿ : 9448994199

ಪ್ರಕಾಶಕರು : ಹೂಬಳ್ಳಿ ಪ್ರಕಾಶನ

ಲೇಖಕರ ವಿಳಾಸ : ಶ್ರೀ ಬೆಂ ಶ್ರೀ ರವೀಂದ್ರ
ತವರು, ನಂ 288, 3ನೆಯ ಮುಖ್ಯ ರಸ್ತೆ,
11ನೆಯ ಅಡ್ಡರಸ್ತೆ ವಸಂತವಲ್ಲಭ ನಗರ,
ಮೊದಲ ಹಂತ, ಬೆಂಗಳೂರು 560 061
ದೂರವಾಣಿ : 9448994199

ಮೊದಲ ಮುದ್ರಣ 2021
ಪುಟಗಳು 157 + 10
ಬೆಲೆ : ರೂ. 165/-
ಪ್ರತಿಗಳ ಸಂಖ್ಯೆ : 1000

ಕಾಗದ : 70 ಜಿ ಎಸ್ ಎಮ್ ಎಸ್ ಎಸ್ ಪುಟ ಗಾತ್ರ 1/8 ಡೆಮ್ಮಿ

ರಕ್ಷಾ ಪುಟ : ಶ್ರೀ ಗುರುನಾಥ ಬೋರಗಿ

ಮುದ್ರಣ:
ಶ್ರೀ ಯಂತ್ರೋದ್ಧಾರಕ
ಮುದ್ರಕರು ಹಾಗು ಪ್ರಕಾಶಕರು
10/2, 1ನೇ ಮುಖ್ಯ ರಸ್ತೆ, ಅಶ್ವತ್ಥಕಟ್ಟೆ ರಸ್ತೆ,
ರುದ್ರಪ್ಪ ಗಾರ್ಡನ್, ಬೆಂಗಳೂರು – 560 026.
ಮೊಬೈಲ್ : 94487 95121 / 9886071144
Email: sypp2019@gmail.com

ಆದಿಯೂ ನೆಟ್‌ನ ಪಾಠವೂ
(ಮಕ್ಕಳ ಓದುವ ಕವನಗಳು)

ಅರ್ಪಣೆ

ಅಖಿಲ ಕರ್ನಾಟಕ ಮಕ್ಕಳಕೂಟದ ಸ್ಥಾಪಕರು
ಸಮಾಜಸೇವಾ ಧುರಂಧರೆ
ಶ್ರೀಮತಿ ಆರ್ ಕಲ್ಯಾಣಮ್ಮ
ಅವರ ಧೀಶಕ್ತಿಗೆ

ಕನ್ನಡವನ್ನೇ ಉಸಿರಾಡಿದ ಬಹುಶ್ರುತ
ಪ್ರಾಚಾರ್ಯ ಎಚ್ಚೆಸ್ಕೆ
ಅವರ ಕನ್ನಡ ನಿಷ್ಠೆಗೆ

ಕನ್ನಡನಾಡಿನ ಕಂದಮ್ಮಗಳಿಗೆ

ಬೆಂ ಶ್ರೀ ರವೀಂದ್ರ

ಪರಿವಿಡಿ

ಮುನ್ನುಡಿ

ಬೆಂಗಳೂರಿನ ಕೋಟೆಯೊಳಗೆ ನನ್ನ ಮನೆ. ಹತ್ತಿರವೆ, ಶ್ರೀಮತಿ ಆರ್ ಕಲ್ಯಾಣಮ್ಮ ಮಕ್ಕಳ ಕೂಟ. ಶಾಲೆಯಿಂದ ಬಂದವನೆ ಮಕ್ಕಳ ಕೂಟಕ್ಕೆ ಓಡುತ್ತಿದ್ದೆ. ಆಟ ಪಾಠ ಎರಡೂ ಇತ್ತು. ಶನಿವಾರ ಸಂಜೆಯ "ಬಾಲ ಜಗತ್" ಕಾರ್ಯಕ್ರಮಗಳು ಉತ್ತೇಜನಕಾರಿ. ಆಶುಭಾಷಣ, ಚರ್ಚೆ, ಏಕಾಂಕ ನಾಟಕ, ಕಥೆ ಹೇಳುವುದು. ಸ್ವರಚಿತ ಬರಹಗಳನ್ನು ಓದುವುದು.. ಇತ್ಯಾದಿ ಸಾಹಿತ್ಯಕ, ಸಾಂಸ್ಕೃತಿಕ ಕಾರ್ಯಕ್ರಮಗಳು, ಬಹಳ ಪ್ರೀತಿ ನನಗೆ. ಬೆಂಗಳೂರಲ್ಲಿ, 1967ರಲ್ಲಿ ನಡೆದ "19ನೇ ಅಖಿಲ ಕರ್ನಾಟಕ ಮಕ್ಕಳ ಸಮ್ಮೇಳನ"ದ ಉಪಾಧ್ಯಕ್ಷತೆಯ ಸಂಭ್ರಮ. ಸ್ಮರಣ ಸಂಚಿಕೆಗಳಿಗೆ ಬರೆಯುವ ಆನಂದ.

ಭಾನುವಾರದ ಬೆಳಗ್ಗೆ ಬಸವನಗುಡಿಯ ಶ್ರೀ ರಾಮಕೃಷ್ಣಾಶ್ರಮದ ಭಾನುವಾರದ ವಿಭಾಗದ "ವಿವೇಕಾನಂದ ಬಾಲಕ ಸಂಘ"ಕ್ಕೆ. ಹಾಡುವುದು, ಕಥೆ ಹೇಳುವುದು, ಕೇಳುವುದು, ಸೇವಾ ಕೈಂಕರ್ಯ. ಪ್ರತಿವರ್ಷ ವಾರ್ಷಿಕೋತ್ಸವಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗ. ಬಾಲಕ ಸಂಘದ ಗೋಷ್ಠಿಗಳಿಗೆ ಬರುತ್ತಿದ್ದ ಶ್ರೀ ಜಿಪಿ ರಾಜರತ್ನಂ ಅವರ ಗಂಡುಧ್ವನಿಯ ನುಡಿಗಳನ್ನು ಕೇಳುವ ಸೌಭಾಗ್ಯ. ಓದುತ್ತಿದ್ದ ಬೆಂಗಳೂರು ಕೋಟೆ ಮಾಧ್ಯಮಿಕ, ಬೆಂಗಳೂರು ಪ್ರೌಢಶಾಲೆಗಳಿಂದ, ಸಾಹಿತ್ಯ ಚಟುವಟಿಕೆಗಳಿಗೆ ಇಂಬು.

ಬಹುಷಃ, ನನ್ನ ಮೊದಲ ಕವನ, ಚಾಚಾ ನೆಹರು ಅವರ ಮರಣದ ಸಂದರ್ಭದಲ್ಲಿ ಬಂದಿರಬೇಕು. ಉರಿಯಿತು ನೆಹರು ಪಾರ್ಥೀವ ಶರೀರ ಎಂದು ಆರಂಭವಾಗುತ್ತದೆ. ನನ್ನ ಬಳಿ ಈಗಿಲ್ಲ. ಕಾಲೇಜಿನಲ್ಲಿ ನವ್ಯದೊಲವಿನಲಿ, ಕೆಲವು ಕವಿತೆ ಬರೆದೆ. ಒಂದೆರಡು ಪ್ರಕಟವಾಗಿರಬೇಕು. ಭಾರತೀಯ ಸ್ಟೇಟ್ ಬ್ಯಾಂಕ್ ಸೇರಿದ ಮೇಲೆ ಸಾಹಿತ್ಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡೆನಾದರೂ, ಹೆಚ್ಚಿನ ಗಮನ, ಕಾರ್ಮಿಕ ಸಂಘಟನೆಯತ್ತ.

1996 ರಲ್ಲಿ "ಶೂನ್ಯವಲ್ಲದೆ ಬೇರೆ" ಪ್ರಕಟವಾಯಿತು. ಹೆಚ್ಚಾಗಿ

ನವ್ಯಶೈಲಿಯಿಂದ ಪ್ರಭಾವಿತವಾದವು. ನಂತರವೂ ಕವನ ರಚನೆ ನಿರಂತರವಾಗಿತ್ತು. ಆದರೆ ಪ್ರಕಟಣೆ ಕಡೆ ಗಮನ ಹರಿಸಲು ಸಾಧ್ಯವಾಗಲಿಲ್ಲ. 1999 ರಿಂದ ಆರಂಭವಾದ ಸಮನ್ವಯ ಸಮಿತಿಯ ಸಾಹಿತ್ಯ ದಾಸೋಹ ವೇದಿಕೆಯು, ನನ್ನ ಕಾರ್ಮಿಕ ಸಂಘಗಳ ಜೊತೆಗೆ ಸಾಹಿತ್ಯಕ ಚಟುವಟಿಕೆಗಳಿಗೆ ಇಂಬು ನೀಡಿತು. 2014 ರ ನಂತರ ಚಾಲನೆಯಾದ "ಸಮನ್ವಯ ಸಮಿತಿ ಸಾಹಿತ್ಯ ದಾಸೋಹ", ವಾಟ್ಸಪ್ ವೇದಿಕೆಯು, ಸಾಹಿತ್ಯದ ನಿತ್ಯ ಕಮ್ಮಟವಾಯಿತು. ಹೆಚ್ಚು ಪ್ರತಿಭಾವಂತರು ಈ ಕಕ್ಷೆಗೆ ಬಂದರು. 2015–16ರಲ್ಲಿ ವೇದಿಕೆಯಲ್ಲಿ "ಚುರುಮುರಿ" ಶೀರ್ಷಿಕೆಯಡಿಯಲ್ಲಿ ಒಂದು ವರ್ಷ, ಪ್ರತಿದಿನ ಒಂದು ಕವನದಂತೆ ಪ್ರಸ್ತುತಪಡಿಸಿದೆ. ಕವನ ರಚನೆ ಕ್ರಿಯೆ ಚುರುಕಾಯಿತು.

ಈಗ, ಪ್ರಾಚಾರ್ಯ ಎಚ್ಚೆಸ್ಕೆ ಅವರ ಜನ್ಮ ಶತಾಬ್ದಿಯ ಸಂದರ್ಭದಲ್ಲಿ ನಡೆಯುತ್ತಿರುವ "ಎಚ್ಚೆಸ್ಕೆ ಅಕ್ಷರ ನಮನ" ಕಾರ್ಯಕ್ರಮದಡಿಯಲ್ಲಿ ನಮ್ಮ ಸ್ವಂತಕೃತಿಗಳನ್ನು ಬಿಡುಗಡೆ ಮಾಡಬೇಕೆಂದು ತೀರ್ಮಾನವಾದಾಗ, ನಾನೇನು ಮಾಡಲಿ ಅನ್ನುವ ಜಿಜ್ಞಾಸೆ. ಎಚ್ಚೆಸ್ಕೆ ಅವರು, ನನ್ನ "ಶೂನ್ಯವಲ್ಲದೆ ಬೇರೆ" ಕೃತಿಗೆ ಮುನ್ನುಡಿ ಬರೆದಿದ್ದಾರೆ. ಅವರ ನೂರನೆ ವರ್ಷ ಹಬ್ಬಕ್ಕೆ ನನ್ನ ನಮಸ್ಕಾರ ಇರಲೇ ಬೇಕು. ಕವನ ಸಂಗ್ರಹವನ್ನು ಪ್ರಕಟಿಸುವ ಆಸೆಯಾಯಿತು. ಹಲವು ಸಾಮಾಜಿಕ ರಾಜಕೀಯ, ಪ್ರಸ್ತುತ ಘಟನೆಗಳ ಪ್ರತಿಕ್ರಿಯೆಗಳ ಕವನಗಳಿಗಿಂತ ಭಿನ್ನವಾಗಿರಲಿ ಅಂತ ಮಕ್ಕಳ ಕವನಗಳನ್ನು ಆರಿಸಿಕೊಂಡೆ.

ಈ ಕವನಗಳು, ಹೆಚ್ಚಾಗಿ ಶಾಲೆಗೆ ಹೋಗುತ್ತಿರುವ 4–8 ವರ್ಷದ ಗಂಡು ಮಕ್ಕಳದು. ಹಲವು ಸಂದರ್ಭಗಳಲ್ಲಿ ಮೂಡಿ ಬಂದವು. ಒಂದೊಮ್ಮೆ ಅನ್ನಿಸುತ್ತದೆ, ಇವು ಮಕ್ಕಳು ಓದುವ ಕವನಗಳು. ಕೆಲವು ಗಾಯಕರು ಹಾಡಿದ್ದಾರೆ. ಅವರಿಗೆ ಧನ್ಯವಾದಗಳು.

ಕನ್ನಡನಾಡಿನ ಉಡಿಗೆ. ಕನ್ನಡ ಮಕ್ಕಳ ನುಡಿಗೆ ಇದನ್ನು ಹಾಕುತ್ತಿದ್ದೇನೆ. ನನ್ನ ಬೆನ್ನು ತಟ್ಟುವುದು ಅವರಿಗೆ ಬಿಟ್ಟಿದ್ದು.

ಕವನ ಸಂಕಲನಕ್ಕೆ ಬೆನ್ನುಡಿಯನ್ನು ವಿಶ್ವಾಸಪೂರ್ವಕವಾಗಿ ಬರೆದುಕೊಟ್ಟ ಹಿರಿಯ ಸಾಹಿತಿ ಮಿತ್ರರಾದ ಶ್ರೀ ಬೋಳುವಾರು ಮುಹಮ್ಮದ್ ಕುಂಞ್ ಅವರಿಗೆ ಧನ್ಯವಾದಗಳು. ಶ್ರೀ ಬೊಳುವಾರು ಅವರು ಕನ್ನಡ ಮಕ್ಕಳ ಸಾಹಿತ್ಯಕ್ಕೆ ಎಂದಿಗೆಂದಿಗೂ ಉಳಿಯುವಂತಹ ಕಾಣಿಕೆ ಕೊಟ್ಟವರು. ಅವರ ಮಕ್ಕಳ ಕವನಗಳ ಸಂಗ್ರಹ "ತಟ್ಟು ಚಪ್ಪಾಳೆ ಪುಟ್ಟ ಮಗು" (ವಿವಿಧ ಲೇಖಕರು), ಒಂದು ದಾರಿದೀಪವಾಗುವಂತಹ ಸಂಕಲನ. ಅನೇಕ ತಿಂಗಳು ಅಧ್ಯಯನ ನಡೆಸಿ, ದೇಶ ತಿರುಗಿ ಇಂತಹ ಪುಸ್ತಕ ಕನ್ನಡ ಮಕ್ಕಳಿಗೆ ಕೊಟ್ಟಿದ್ದಾರೆ. ಬೆನ್ನುಡಿಗಾಗಿ ಅವರನ್ನು ಕೇಳಿದಾಗ, "ನಮಸ್ತೆ ರವೀಂದ್ರರಾಯರಿಗೆ, ಈ ಕಾರಣದಿಂದಾದರೂ ಇಲ್ಲಿ ಭೇಟಿಯಾದದ್ದು ಸಂತಸ ತಂದಿದೆ. ಹೇಗಿದ್ದೀರಾ? ಎಲ್ಲಿದ್ದೀರಾ?". ಅಂತ ವಿಶ್ವಾಸದಿಂದ ಕೇಳಿ, ಮನಮುಟ್ಟುವ ಬೆನ್ನುಡಿ ಬರೆದು ಕೊಟ್ಟಿದ್ದಾರೆ. ನಾನು ಅವರಿಗೆ ಆಭಾರಿ.

ಕವನ ಸಂಕಲನವನ್ನು ಹೊರತರಲು ಪ್ರೋತ್ಸಾಹಿಸಿ, ಬೆನ್ನುತಟ್ಟಿದ ಸಹಕರಿಸಿದ ಶ್ರೀ ಎಚ್ ಎಲ್ ಗುರುಪ್ರಸಾದ್ ಅವರಿಗೆ ಏನೂ ಹೇಳಲು ತೋಚುತ್ತಿಲ್ಲ. ಅವರ ಗೆಳೆತನ, ಸೋದರಭಾವ ಚಿರವಾಗಿರಲಿ, ಶ್ರೀ ಎಚ್ ಆರ್ ಗುರುರಾಜ್, ಶ್ರೀ ಗಿರಿಧರ ಕಾರ್ಕಳ ಅವರ ಸಹಕಾರವನ್ನು ನೆನೆಯುತ್ತೇನೆ. ಶುಭಹಾರೈಕೆ ನೀಡಿದ ಕವಿಮಿತ್ರರಾದ ಶ್ರೀ ಕೆಎನ್ ಮಹಾಬಲ, ಶ್ರೀ ಬಿಎಸ್ ಚಂದ್ರಶೇಖರ್, ಶ್ರೀಮತಿ ರತ್ನಾಮೂರ್ತಿ, ಶ್ರವಣ ಕುಮಾರಿ ಅವರಿಗೆ ಕೃತಜ್ಞತೆಗಳು.

ಈ ಸಂಗ್ರಹವನ್ನು ಚಿತ್ರವತ್ತಾಗಿಸಿದವರು ನನ್ನ ಆತ್ಮೀಯ ಮಿತ್ರರಾದ ಶ್ರೀ ವೈ ಸುದರ್ಶನ, ಶ್ರೀ ಎಂ.ಆರ್ ಶ್ರೀರಂಗರಾಜನ್ ಮತ್ತು ಕುಮಾರಿ ವೈಷ್ಣವಿ ಗೋಪಿನಾಥ್. ಭಾರತೀಯ ಸ್ಟೇಟ್ ಬ್ಯಾಂಕ್ ಅಧಿಕಾರಿಗಳ ಒಕ್ಕೂಟದ ಪ್ರಧಾನ ಕಾರ್ಯದರ್ಶಿಯಾಗಿದ್ದ ಶ್ರೀ ಸುದರ್ಶನ ಅವರಂತೂ ಬಹಳಷ್ಟು ಚಿತ್ರಗಳನ್ನು ರಚಿಸಿದ್ದಾರೆ. ಮೂರೂ ಜನ ಕಲಾವಿದರಿಗೆ ನನ್ನ ಧನ್ಯವಾದಗಳು.

ಭಾರತೀಯ ಸ್ಟೇಟ್ ಬ್ಯಾಂಕ್ ಕನ್ನಡ ಸಂಘಗಳು, ನನ್ನ ಕನ್ನಡ ಚಟುವಟಿಕೆಗಳ ಆಡುಂಬೊಲ. ಅವು ನನ್ನ ಕನ್ನಡ ಅಸ್ಮಿತೆಯನ್ನು

ರೂಪಿಸಿದವು. ಮೊದಲ ಕವನ ಸಂಕಲನ "ಶೂನ್ಯವಲ್ಲದೆ ಬೇರೆ", ಸಮನ್ವಯ ಸಮಿತಿಯ ವತಿಯಿಂದ ಪ್ರಕಟವಾಯಿತು. ಈಗಲೂ ಕನ್ನಡ ಸಂಘಗಳು, ಸಮನ್ವಯ ಸಮಿತಿ, ಹಿಂದಿನ ಮತ್ತು ಇಂದಿನ ಸದಸ್ಯರು ಹಾಗೂ ಪದಾಧಿಕಾರಿಗಳ ಪ್ರೋತ್ಸಾಹವಿದೆ. ಅವರೆಲ್ಲರಿಗೂ ನನ್ನ ವಿನಯಪೂರ್ವಕ ನಮಸ್ಕಾರಗಳು.

ಈ ಪುಸ್ತಕವನ್ನು ಪ್ರಕಟಿಸುತ್ತಿರುವ "ಹೂಬಳ್ಳಿ ಪ್ರಕಾಶನ" ಮತ್ತು ಮುದ್ರಕರಾದ "ಶ್ರೀ ಯಂತ್ರೋದ್ಧಾರಕ" ಹಾಗೂ ಸುಂದರವಾಗಿ ಮುಖಪುಟವನ್ನು ರಚಿಸಿದ ಶ್ರೀ ಗುರುನಾಥ ಬೋರಗಿ ಅವರುಗಳಿಗೂ ಕೃತಜ್ಞತೆಗಳು.

ನನ್ನ ಬರವಣಿಗೆಯನ್ನು ಉತ್ತೇಜಿಸುತ್ತಿರುವ ಸಮನ್ವಯ ಸಮಿತಿ ಸಾಹಿತ್ಯ ದಾಸೋಹ ವೇದಿಕೆಯ ಗೆಳೆಯರಿಗೆ ಮತ್ತು ನನ್ನ ಶ್ರೀಮತಿ ಪುಷ್ಪಲತಾ ಮತ್ತು ಕುಟುಂಬವರ್ಗದವರಿಗೆ ಕೃತಜ್ಞತೆಗಳು.

ಬೆಂಶ್ರೀ ರವೀಂದ್ರ.
ಬೆಂಗಳೂರು.

14–04–2021
ಯುಗಾದಿ, ಪ್ಲವನಾಮ ಸಂವತ್ಸರ

01. ಪುಟ್ಟನ ಪಾಕ



ಎಚ್ಚರವವಗೆ ಬೆಳಗಿನ ಜಾವಕೆ
ಮನದಲ್ಲೇನೋ ಪುಳಕ
ಹೊಸತಿದು ಕಣ್ಣಿನ ನೋಟಕೆ
ಜಗಕಾಗಿದೆಯೇ ಜಳಕ

ಅಂಗಳದಲ್ಲಿ ಗಿಡಮರ ಬಳ್ಳಿ
ತೂಗಿವೆ ಅಕ್ಷರ ಗೊಂಚಲು
ಹಣ್ಣು ತರಕಾರಿ ಹೂವಿನೊಳಗೆ
ಚಿನ್ನಾಟದಕ್ಷರ ಮಿಂಚು

ದೇವಗಿತ್ತು ಹೂವಿನ ಮುಕುಟ
ಅಡಿಗೆಗೆ ಪಾಯಸ ಪಳದ್ಯ
ರುಚಿಕಟ್ಟಿದೆ ಅಕ್ಷರ ಬೆರಗು
ಅಮ್ಮಗೆ ಪುಟ್ಟನ ಪಾಕಪದ್ಯ.

02. ಗುಬ್ಬಚ್ಚಿ ಪಾಪಚ್ಚಿ



ಬಾರೋ ಇಲ್ಲಿ ಪಾಪು
ಏಕೋ ಹಿಡಿದೆ ರಚ್ಚೆ
ಮಾಡಿಕೊಂಡು ಕೊಚ್ಚೆ

ಮೈಯ ತಿಕ್ಕಿ ತೊಳೆದು
ಒಳ್ಳೆ ಪೌಡರು ಬಳಿದು
ಹಾಲುಗೆನ್ನೆಗೆ ಕಪ್ಪುಸಾದು

ದಿನಕೆ ಎಷ್ಟು ಚೆಡ್ಡಿ
ಒಗೆದಾದೆ ನಾನು ಕಡ್ಡಿ
ಮಾಡ್ಕೋಬೇಡ ಮಡ್ಡಿ

ಪಕ್ಕದಮನೆಯ ಗುಬ್ಬಚ್ಚಿ
ನಗಾಳೆ ನೋಡಿ ಪಾಪಚ್ಚಿ
ಬೇರೇದು ಹಾಕ್ತಿನಿ ಬಿಚ್ಚಿ

03. ಕೋಮಲವಲ್ಲಿಯ ಚೆಲ್ಲಾಟಗಳು



ಎಲ್ಲಿ ಹೋದಳು ತ್ರಿಪುರಸುಂದರಿ
ಹುಡುಕಿ ಹೋದಳೆ ಮಾರಸುಂದರನ

ಚೆಂದವೀ ಗುಂಡು ಹುಡುಗಿ
ಚುರುಕುಗಣ್ಣಿನ ಚದುರಬಿಲ್ಲಿ

ದಾರಿತಪ್ಪಿ ಜಾರಿ ಹೋದಳೇ
ಗಡವನೊ, ಬೀದಿನಾಯಿಯೊ

ಏಕೆ ಹೋದಳು ಮನೆಯ ಬಿಟ್ಟು
ರಾತ್ರಿ ಸಮಯದಿ ಕೈಯ್ಯಕೊಟ್ಟು

ಹಗಲಿರಳು ಮಿಯಾಂವ್ ಅನ್ನುತ
ಕಾಲಬಳಿಯೇ ಸುತ್ತು ನುಲಿವಳು

ಚೆಲ್ಲು ರಮಣಿ ಚಮಕು ಸುಂದರಿ
ಕಾಳು ಉಣ್ಣುತ ನಿದ್ರೆ ಹೊಡೆವಳು

ತಿರುಗುವ ದಾರಿಯಲಿ ಸಿಕ್ಕನೆ
ಹೊಸ ಗೆಳೆಯ ಗಡವಗೂಳಿ

ಇವಳ ಹೆಸರೋ ಕೋಮಲವಲ್ಲಿ
ಕುಣಿವ ಸೆಳೆವ ಜಾಣಬಿಲ್ಲಿ

ಚಿಂತೆಯಲ್ಲಿ ಮನೆಯಮಂದಿ
ಇವಳ ಆಟವೊ ಚೆಲ್ಲು ಚಿಂದಿ

ತಪ್ಪಿಸಿಕೊಂಡಳು ಮರಳಿ ಬಂದಳು
ಹರಷ ತುಂಬಿತು ಎಲ್ಲ ಕುಣಿದರು

04. ಜೋಯಂತಾ ನಾಯಿ



ಜೋಯಿಯೆಂಬ ನಾಯಿ
ನಾಲಿಗೆ ಹೊರಗೆ ಚಾಚಿ
ಉಂಗುರಬಾಲವನೆತ್ತಿ
ಎರಡೇ ಕಾಲಲಿ ನಿಂತು
ಆದಿಯನ್ನ ಕರೆಯತ್ತೆ
ಬಾರೋ ಪುಟ್ಟ ಅನ್ನತ್ತೆ


ಇಷ್ಟು ಪುಟ್ಟ ನಾಯಿ
ಅಷ್ಟು ಎತ್ತರ ಬೆಳೆದು
ಎಷ್ಟು ಜೋರು ಬೊಗಳತ್ತೆ
ಕುದುರೆ ಹಂಗೆ ಓಡತ್ತೆ
ಕೊಟ್ಟದ್ದೆಲ್ಲ ತಿನ್ನತ್ತೆ
ಮಾವನ ಮಾತು ಕೇಳತ್ತೆ

ರಾಜಾಠೀವಿ ನಡಿಗೆ ನೋಡಿ
ಪಿಳಿಪಿಳಿ ಕಣ್ಣೊ ಹೊಂಬಣ್ಣ
ಮಧ್ಯೆ ಸಣ್ಣ ಬೆಣ್ಣೆನಾಮ
ಯಾವ ದೇವರೊ ತಮ್ಮಣ್ಣ
ಚಿನ್ನದ ಬಣ್ಣ ಬೆಳ್ಳಿಯ ಮೆರಗು
ಬಾಗಿದ ಕಿವಿ ಬಲು ಚುರುಕು

ಬಾಗಿಲ ಬಳಿಯೆ ಹಾಕಿ ಠಿಕಾಣಿ
ಕತ್ತನು ಚಾಚಿ ಹುಡುಕುವ ರಾಣಿ
ಮಕ್ಕಳಿಗೆಲ್ಲ ಶೇಕ್ ಹ್ಯಾಂಡಿತ್ತು
ಬಿಸ್ಕತ್ ಬ್ರೆಡ್ಡು ತಿನ್ನುವ ಮಾಣಿ
ಒಂದು ಎರಡು ಹೊರಡುವ ವಾಕು
ಸ್ವಚ್ಛ ಭಾರತದ ಜಾಣ ಸಿಪಾಯಿ

ಜಾಣೆ ಅಮ್ಮ ನಾಯಿಯ ತಾರೆ
ಆಡಲು ಓಡಲು ಕುಣಿಯಲು ಭಾಯಿ
ತಂಟೆ ತಕರಾರು ಮಾಡುವುದಿಲ್ಲ
ಹೋಂವರ್ಕನ್ನು ಬಿಡುವುದೆ ಇಲ್ಲ
ಗುಡ್ ಬಾಯ್ ನಾನಾಗುವೆನು
ತಾರೆ ತಾರೆ ಜೋಯಂತ ನಾಯಿ

05. ಶುನಕ ನಾಮಕರಣ



ಮನೆಗೆ ತಂದ ನಾಯಿಗೆ
ಇಡುವುದೇನು ಹೆಸರು
ಅಂತ ಇಂತದಲ್ಲವಿದು
ಕಸಿಯಾದ ಬಸಿರು

ಮನೆಯಲ್ಲಿ ಹತ್ತುಮಂದಿ
ಹದಿನೈದು ಗುಂಪು
ಅದು ಬೇಕು ಇದು ಬೇಕು
ನಡೆವ ಸ್ಟೈಲು ಚೆಂಪೂ

ಕತ್ತೆಂತೂ ಜೂಲು ಜೂಲು
ಶರೀರ ಸಪೂರ ಮಾಲು
ಆಕಾಶಕ್ಕೆ ನಿಗುರಿ ಬಾಲ
ಗಾಳಿಪಟದ ಮೋಹಜಾಲ

'ಜೋಯಿ'ಅಂತ ಕರೆದರಣ್ಣ
ಮಕ್ಕಳಿಟ್ಟ ಹೆಸರು
'ರಾಜಾ' ಅಂತ ಕರೆಯೋ ಅಣ್ಣ
ಕನ್ನಡದ ಹೆಸರು

ಕಣ್ಣು ನೋಡು ಮಾಲುಗಣ್ಣು
'ಮಾಲಿ' ಅಂದ್ರೆ ಚೆಂದ
'ಹನುಮ' ಅಂತ ಅನ್ನೊ ಅಣ್ಣ
ರಾಘವನದು ಈ ಶುನಕವಣ್ಣ

ಹಾಗೂ ಹೀಗೂ ನಾಯಿಗೀಗ
ನೂರಾರು ಹೆಸರು
ಎಲ್ಲಕ್ಕೂ ಕುಯ್ಯಂದು
ಕತ್ತಾಡಿಸೋದೆ ಬೆರಗು

06. ಮುಂಗಾರಂದ್ರೆ ಮುಂಗಾರು



ಂತ್ರೈ ಬಂತ್ರೈ ಮುಂಗಾರು
ಂತ್ರೈ ತೋಟಕೆ ಸಿಂಗಾರು
ಕಥ್ರೈ ರೈತಗೆ ಬಂಗಾರು
ಕ್ರೈ ಕೂಡಿಸಿ ಎಲ್ಲಾರು

ಟಪಟಪ ಸದ್ದು ಹಿತವಾಯ್ತು
ತಪತಪ ಮಾಡಿದ್ದು ಫಲವಾಯ್ತು
ಸಪಸಪ ಗಾನ ಇಂಪಾಯ್ತು
ದಪದಪ ಹೆಜ್ಜೆ ತುಳಿದಾಯ್ತು

ಉರಿಉರಿ ಭೂಮಿ ತಂಪಾಯ್ತು
ಝುರಿಝುರಿ ಕಟ್ಟೆಯು ತುಂಬಾಯ್ತು
ಹರಿಹರಿ ಹಸಿರು ಹರವಾಯ್ತು
ಮರಿಮರಿ ಮಕ್ಕಳು ಕುಣಿದಾಯ್ತು

ಬಾರ್ರೈ ಬಾರ್ರೈ ಭಾರತದುಸಿರ್ರೈ
ತೋರ್ರೈ ತೋರ್ರೈ ನೇಗಿಲ ಸಿರಿಯ್ಯೈ
ತಾರ್ರೈ ತಾರ್ರೈ ಸಂತೃಪ್ತಿ ನಗೆಯ್ಯೈ
ಬಂತ್ರೈ ಬಂತ್ರೈ ಮುಂಗಾರು

07.ಗುರುವಿನ ಮೇಕೆ (ಪಂಚತಂತ್ರ)



ಭಕ್ತಿಯಲಿ ಕೊಟ್ಟರು ಗುರುವಿಗೆ
ಮೇಕೆಯೊಂದನು ಶಿಷ್ಯರು
ಸಂತಸದಲಿ ಹೊತ್ತು ಅದನು
ಮಠದ ಕಡೆಗೆ ನಡೆದನು

ಮೇಕೆಗಾಗಿ ಜೊಲ್ಲು ಸುರಿಸಿ
ಕುತಂತ್ರ ಹೂಡಿ ಮೂವರು
ಎಂತಾದರು ಮೇಕೆ ಕದಿಯಲು
ಬೆನ್ನುಬಿದ್ದರು ಗುರುವಿಗೆ

ಗುರುವೆ ನೀನು ಹೆಗಲಲೇಕೆ
ಹೊತ್ತಿರುವೆ ನಾಯಿಯ
ಛೇಡಿಸಿದ ಪುಂಡಗೆ
ಸಿಟ್ಟಲಿ ಗುರು ಬೈದನು

ಕುರುಡನೇ ಇದು ನಾಯಿಯೇ
ಸಿಡುಕಲು ಪುಂಡ ನುಡಿದ
ಗುರುಗಳೆ ಅದು ನಾಯಿಯೇ
ಮುನಿದು ಗುರು ನಡೆದನು

ನಾಕು ಹೆಜ್ಜೆಗೆ ಇನ್ನೊಬ್ಬನು
ಸತ್ತಕರುವನು ಏಕೆ ಹೊತ್ತಿಹೆ
ಎನೆಲು ಕನಲಿ ಗುರುವು ಸಿಡಿದನು
ಹೆಣ ಹೊರಲು ನಾ ಹುಚ್ಚನೇ


ಸತ್ತಕರುವೇ ಎಂದು ನೋಡಿ
ಅನುಮಾನದಿ ಮೇಕೆಮುಟ್ಟಿ
ಸುಳ್ಳುಮಾತು ಪೊಳ್ಳು ಮನುಜರು
ಗೊಣಗಿ ಗೊಂದಲಗೊಂಡನು

ದಾರಿಗಡ್ಡವು ಮತ್ತೋರ್ವ ಠಕ್ಕನು
ಗುರುವೆ ಕತ್ತೆ ಹೊರುವುದು ತರವೇ
ಭಯಗೊಂಡೆ ಗುರುವು. ಬೇರೆ ಬೇರೆ
ತರದಿ ಕಾಣುವುದೇ ಈ ಮೇಕೆಯು

ಓ ದೆವ್ವ ಭೇತಾಳ ರಾಕ್ಷಸನೆ
ಇದು ಎಂದೆಸೆದ ಮೇಕೆಯ ದೂರಕೆ
ಒಯ್ದು ಉಂಡರು ಮುಂಡರು
ಮಠಕೆ ಮರಳಿದ ಬೆಪ್ಪುಗುರುವು

ನಂಬದಿರಿ ಅವರಿವರ ಮಾತು
ಪರಿಶೀಲಿಸಿ ನೀವೇ ಸತ್ಯವನ್ನು
ಮರುಳಾಗದಿರಿ ಮೋಸಗಾರರ
ಬೆರಗು ಬಿನ್ನಾಣ ಕಪಟನುಡಿಗೆ.

08. ಹಾಳೂರಕೊಂಪೆ (ಪಂಚತಂತ್ರ)



ದಟ್ಟ ಕಾಡಿನ ಮಗ್ಗುಲಲ್ಲಿ
ಇತ್ತೊಂದು ಹಾಳೂರ ಕೊಂಪೆಯು
ಹೇಳು ಕೇಳುವರಾರು ಇಲ್ಲದೆ
ಸುಖದಲಿತ್ತು ಇಲಿಯ ರಾಜ್ಯ

ಹಸಿರುಕಾಡಿನ ಹೊಟ್ಟೆಯೊಳಗೆ
ಉಂಡು ತೇಗುತ ತಿರುಗುತಿತ್ತು
ಬಲಷ್ಠವಾದ ಕಾಡಾನೆ ಹಿಂಡು
ಅವಕೊಬ್ಬ ದಯಾಳು ದೊರೆಯು

ಇಂತು ಕಾಲವು ಸವೆಯುತಿರಲು
ಕಾಡನಪ್ಪಿತು ಭೀಕರ ಬರಗಾಲವು
ಕುಡಿಯಲಿಲ್ಲ ತಿನ್ನಲಿಲ್ಲ, ಸೊರಗಿ
ನೀರು ಹುಡುಕಲು ಆನೆಯು

ಹಾಳೂರ ಕೊಂಪೆಯ ಮಗ್ಗುಲಲ್ಲಿ
ಕಂಡಿತೊಂದು ತಿಳಿನೀರ ಕೊಳವು
ಹೋಗೋಣವಲ್ಲಿಗೆ ನಡೆಯಿರೆಂದು
ಆನೆಹಿಂಡಿನ ದೊರೆಯು ನುಡಿದನು

ದಾಪುಗಾಲು ಹಾಕಿ ಓಡುತ
ಹಾಳೂರ ಕೊಂಪೆ ದಾಟುತ
ತುಳಿದು ಇಲಿಗಳ ನೀರಬಳಿಗೆ
ಆನೆಹಿಂಡದು ತೆರಳಿತು

ಸತ್ತವೆಷ್ಟೋ ಇಲಿಯು ಪಾಪ
ಮಂತ್ರಿಯೊಡನೆ ಇಲಿಯ ರಾಜನು
ಆನೆದೊರೆಯ ಬಳಿ ಇಂತೆಂದನು
ಕೊಳಕೆ ಬೇರೆದಾರಿಯು ಅಲ್ಲಿದೆ

ಅತ್ತಹೋದರೆ ಬದುಕಿ ನಾವು
ಎಂದಾದರೊಮ್ಮೆ ನಿಮ್ಮ ಋಣವ
ತೀರಿಸುವೆವು ಆನೆರಾಜನೇ ಮನ್ನಿಸು
ತಲೆಯನಾಡಿಸಿ ಅವನೊಪ್ಪಿದ

ಹಾಳೂರ ಕೊಳದ ಬಳಿ
ಆನೆಹಿಂಡಿಗೆ ಊರದೊರೆಯು
ಹಳ್ಳತೋಡಿ ಹುಲ್ಲುಹಾಸಿ
ಖೆಡ್ಡದಲಿ ಅವುಗಳ ಕೆಡವಿದ

ಸಾಕಿದಾನೆಯು ಬಂದು ಆಗಲೆ
ಹಳ್ಳದಿಂದೆತ್ತಿ ಮರಕೆ ಬಿಗಿದವು
ಚಿಂತೆಯಲಿ ಆನೆರಾಜನು
ಗೆಳೆಯ ಇಲಿರಾಯನ ನೆನೆದನು

ಸುದ್ದಿ ತಿಳಿದು ನೊಂದು ಬೇಗನೆ
ಬಂದಿತಲ್ಲಿಗೆ ಇಲಿಯ ದಂಡು
ಹರಿತ ಹಲ್ಲಲಿ ಹಗ್ಗ ಕಡಿದು
ಆನೆಗಳ ಬಿಡಿಸಿತು ಸರ್ರನೆ

ಚಿಕ್ಕವರೆಂದು ಭ್ರಮಿಸಬೇಡ
ಎಲ್ಲರಿಗುಂಟು ಅಮಿತ ಶಕ್ತಿ
ಸಮಯದಲಿ ಅರಳಿ ಬೆಳಗೆ
ಜಗಕೆ ಹಿತವನು ಮಾಳ್ಪುದು

09. ಕಪಟಿ ಬೆಕ್ಕು (ಪಂಚತಂತ್ರ)



ದಟ್ಟ ಕಾಡಿನ ಮಧ್ಯದಲ್ಲಿ
ದೊಡ್ಡಮರದ ಪೊಟರೆಯಲ್ಲಿ
ಗೂಡುಕಟ್ಟಿ ಸುಖದಲಿತ್ತು
ಪುಟ್ಟ ಟಿಟ್ಟಿಭ ಹಕ್ಕಿಯು

ಹಣ್ಣು ಹಂಪಲ ರುಚಿಯು ಇಲ್ಲಿ
ತಿಂದು ಸಾಕಾಯ್ತು ನನಗೆ
ಬೇರೆಯೂರಿಗೆ ಹೋಗಿ ಉಣ್ಣುವೆ
ಎಂದು ಪುರ್ರನೆ ಹಾರಿತು

ಕೆಲವು ದಿನದಲಿ ಪುಟ್ಟ ಮೊಲವು
ಓಡಿ ಬಂದು ಪೊಟರೆಯೊಳಗೆ
ಮನೆಯ ಮಾಡಿ ಚಂದದಲ್ಲಿ
ಉಂಡು ನಲಿಯುತ್ತಲಿದ್ದಿತು


ತಿರುಗಿ ಬಂದ ಟಿಟ್ಟಿಭವು ತಾನು
ಇಲ್ಲಿಗೇತಕೆ ಬಂದೆ ಮೊಲವೇ
ನನ್ನ ಮನೆಯಿದು ತಿಳಿದು ಹೊರಡು
ಎನುತ ಜಗಳವ ತೆಗೆಯಿತು

ಯಾರು ಇಲ್ಲದ ಗೂಡಿಗೆ ಬಂದೆ
ನಿನ್ನದೆಂದು ಹೇಗೆ ನುಡಿವೆ
ಜಗಳ ತಾರಕಕೇರಿತು, ತೀರ್ಪಿಗೆ
ನಡೆ ಮುದಿಪೂಜಾರಿ ಬೆಕ್ಕಿನೆಡೆಗೆ

ವಾದಿ ಪ್ರತಿವಾದಿಯ ಮಾತ ಕೇಳುತ
ಕಪಟಿ ಬೆಕ್ಕು ಹೂಡಿ ನಾಟಕ
ನಿಮ್ಮ ಮಾತು ಕೇಳದೆನಗೆ.
ಮುದುಕ ನಾನು, ಬನ್ನಿ ಸನಿಹಕೆ

ನಂಬಿ ಬಂದ ಮೊಲ ಟಿಟ್ಟಿಭವನ್ನು
ಒಂದೇ ಹೊಡೆತಕೆ ಕೊಂದು ತಿಂದು
ಕಪಟಿ ಬೆಕ್ಕು ತೇಗಿತು; ತಿಳಿ ಮಗುವೇ
ನಂಬದಿರು ವಿವೇಚಿಸದೆ ಜಗವನು

10. ದೊಡ್ಡವರ ಮಾತು (ಪಂಚತಂತ್ರ)



ದಟ್ಟ ಅಡವಿಯ ಮಧ್ಯದಲ್ಲಿ
ಎಲೆಯು ತುಂಬಿ ಹಣ್ಣು ತುಳುಕಿ
ಇದ್ದಿತೊಂದು ಬಲು ದೊಡ್ಡಮರವು
ರೆಂಬೆಕೊಂಬೆಗಳ ಚಾಚಿ ಆಕಾಶಕೆ

ಮರದ ತುಂಬಾ ಹೆಬ್ಬಾತು ಚಿಲಿಪಿಲಿ
ಹಣ್ಣು ತಿನ್ನುತ ಹಾಡಿ ಕುಣಿಯುತ
ಅತ್ತಲಿತ್ತ ಹಾರಿ ನಲಿಯುತ
ಸಂತಸದಲಿ ಮನೆ ಮಾಡಿದ್ದವು

ಸಣ್ಣದೊಂದು ಕಾಡುಬಳ್ಳಿಯು
ಮರವ ಬಳಸಿ ಬೆಳೆವುದನ್ನು
ಕಂಡ ಜಾಣ ಮುದಿಹಕ್ಕಿಯೊಂದು
ಮರಿ ಹಕ್ಕಿಗಳ ಕರೆದು ಇಂತೆಂದಿತು

ಬಳ್ಳಿಯನೀಗಲೆ ಕಡಿದು ಬಿಡುವ
ಕಾಡುವುದಿದು ಮುಂದೊಂದು ದಿನವು
ಪುಟ್ಟಬಳ್ಳಿ ಏನು ಮಾಡೀತು, ಮುದಿಹಕ್ಕಿಗೆ
ಬುದ್ಧಿಯಿಲ್ಲವೆಂದು ನಕ್ಕವು ಹಮ್ಮಲಿ

ಬಳ್ಳಿ ಬೆಳೆಯುತ ಬಲಿಷ್ಠವಾಗಿ
ರೆಂಬೆಕೊಂಬೆ ಸುತ್ತಿಬಳಸಿ
ಮರದ ಮೇಲಕೆ ತಲುಪಿತು
ಹಮ್ಮುಹಕ್ಕಿಗಳದನ ಮರೆತಿತು


ದೊಡ್ಡಬಲೆಯನು ಹಿಡಿದುಕೊಂಡು
ಬಂದನೊಬ್ಬ ಬೇಟೆಗಾರ
ಗಟ್ಟಿಬಳ್ಳಿಯ ಹಿಡಿದು ಮರವನೇರಿ
ಬಲೆಯನೆಸೆದು ತಾನಿಳಿದನು

ಹಾರಿಬಂದ ಹಕ್ಕಿಯೆಲ್ಲವು
ಬಲೆಯ ಒಳಗೆ ಸಿಕ್ಕಿಬಿದ್ದು
ಉಪಾಯಕೆಂದು ಮುದಿಹಕ್ಕಿಯನ್ನು
ಪರಿಪರಿಯಲಿ ಕೇಳಿದವು

ಅಂದು ಮಾತನು ಕೇಳಲಿಲ್ಲ
ಇಂದಾದರೂ ಕೇಳ್ವಿರೇನು, ಸತ್ತಂತೆ
ಬಲೆಯಲಿ ಮಲಗಿರಿ, ಸತ್ತವೆಂದು
ಬೇಟೆಗಾರನು ಎಸೆವನು ಭೂಮಿಗೆ

ಕೊನೆಯ ಹಕ್ಕಿಯ ಎಸೆದ ಕೂಡಲೇ
ಎಲ್ಲ ಒಮ್ಮೆಲೇ ಹಾರಿ ಹೋದವು
ಅಂತೆ ಮಾಡಿ ಬದುಕಿ ಹಕ್ಕಿಗಳು
ಹಿರಿಯರ ಮಾತು ಕೇಳಿರೆಂದು ಸಾರಿವೆ.

11. ಮಾತನಾಡಿದ ಗುಹೆ (ಪಂಚತಂತ್ರ)



ದಟ್ಟಕಾಡಿನ ನಡುವಿನಲ್ಲಿ
ಇದ್ದಿತೊಂದು ಪುಟ್ಟಗವಿಯು
ವಾಸವಿತ್ತು ಜಾಣನರಿಯು
ಹಾಡಿ ಕುಣಿಯುತ ನಲಿಯುತ

ಹಸಿವಿನಿಂದ ಕಂಗೆಟ್ಟ ಸಿಂಹವು
ಬೇಟೆ ಹುಡುಕಿ ಕಾಡು ತಿರುಗಿ
ಗವಿಯ ಬಳಿಗೆ ಬಂದು ನಿಂತು
ಒಳಗೆ ಬೇಟೆಯ ಬಯಸಿತು

ಪ್ರಾಣಿ ಕಾಣದೆ ಗವಿಯ ಒಳಗೆ
ಕಾಯ್ವೆ ಇಲ್ಲೆ ಅವಿತು ಎಂದು
ಮೌನದಲ್ಲಿ ಹೊಂಚಿದಾಗ
ನರಿಯು ಮೆಲ್ಲನೆ ಬಂದಿತು

ಸಿಂಹದೆಜ್ಜೆಯ ಗುರುತು ಕಂಡು
ನರಿಯು ತಕ್ಷಣ ಎಚ್ಚೆತ್ತುಕೊಂಡು
ಗವಿಯ ಪಕ್ಕದಲವಿತುಕೊಂಡು
ಒಂದು ಯೋಚನೆ ಮಾಡಿತು

ಯಾಕೆ ಗವಿಯೆ ಸುಮ್ಮನಿರುವೆ
ತಿರುಗಿ ಬಂದೆಡೆ ನಿತ್ಯ ನೀನು
ನನ್ನ ಪ್ರೇಮದಿ ಒಳಗೆ ಕರೆವೆ
ಸಿಟ್ಟಿದ್ದರೆ ನಾ ದೂರ ಹೋಗುವೆ

ನರಿಯ ಮಾತು ಕೇಳಿ ಸಿಂಹವು
ನಿಜವೆಂದು ಭ್ರಮಿಸಿ ಮೆಲ್ಲನೆ
ನರಿಯೆ ಬಾ ಒಳಗೆ ಎಂದು ನುಡಿಯಿತು
ನರಿಯ ಭಯವದು ನಿಜವಾಯಿತು

ಜೀವವುಳಿಸಲು ಜಾಣನರಿಯು
ಒಂದೇ ಸಲಕೆ ದೂರ ಓಡಿತು
ಸುತ್ತ ಗಮನಿಸಿ, ಚುರುಕಾಗಿ ಚಿಂತಿಸಿ
ಕಾಪಾಡಿಕೊಳ್ಳಿ ಜೀವವೆಂದು ಸಾರಿತು

12. ವಂಡರ್ ಬಂಡಲ್ ಆದಿ



ಆದಿ ಆದಿ ವಂಡರ್ ಬಂಡಲ್
ಇಲ್ಲಿಗೆ ಹೇಗೋ ಬಂದೆ
ಕಿಲಕಿಲ ಊಟೆ ಸಕ್ಕರೆ ಮೂಟೆ
ಅಜ್ಜಿಗೆ ಅಕ್ಕರೆ ತಂದೆ

ಕಿಲಾಡಿ ಚಾಟು ತರಲೆ ಥಾಟು
ಅಜ್ಜನ ತರವೇ ಥೇಟು
ಪಾಪ ಅಪ್ಪ ಸೌಮ್ಯದ ಸೂಟು
ಸ್ವಲ್ಪವೂ ಇಲ್ಲ ಘಾಟು

ಕ್ರಿಕೆಟ್ಟು ಬ್ಯಾಟು ಫುಟ್ಬಾಲ್ ಚೆಂಡು
ಕಿಟಕಿ ಗಾಜು ಫಳ್ ಫಳ್
ಅಮ್ಮನ ಮೊಬೈಲ್ ಅಪ್ಪನ ಪ್ಯಾಡು
ನೂರೆಂಟು ಗೇಮು ಚಕ್ ಚಕ್

ಮನೆಯಲಿ ತುಂಬಿದೆ ನಿನ್ನದೆ ಸಾಮಾನು
ನಮ್ಗೆ ಗತಿಯಾ ಬಾರಾಕಮಾನು
ಟೀವೀಲಿ ನಿನಗೆ ಚೋಟಾ ಭೀಮು
ಸಿರಿಯಲ್ಗೆ ಅಜ್ಜಿ ಡೊಗ್ಗು ಸಲಾಮು

ಪಾಠಕ್ಕಂದ್ರೆ ಬೀದಿಗೆ ಓಟ
ಆಟಕ್ಕಂದ್ರೆ ಅಲ್ಲೇ ಗೂಟ
ಊಟಕೆ ಸಂಪು ಐಸ್ಕ್ರೀಂ ಪಂಪು
ಅಜ್ಜಿಗೆ ಲಂಚು ಅಮ್ಮಗೆ ಪಂಚು

ಭಲೇಭಲೇ ಆದಿ ಎಂಥಾ ಕಮಾಲು
ಪಿರಿಪಿರಿ ಆದ್ರೂ ಪ್ರೀತಿ ಮಾಲು
ಹಿರಿಕಿರಿ ಎಲ್ಲರಿಗೂ ನಿಂದೆ ಗುಲಾಲು
ಸಾಕಪ್ಪ ಸಾಕಪ್ಪ ನಿನ್ನ ಸವಾಲು

13. ಆದಿಯ ವರಾತ



ಅಮ್ಮ ಅಮ್ಮ ತಾತಾ ಎಲ್ಲಿ
ತುಂಬಾ ದಿನವಾಯ್ತು
ಬಂದೆಯಿಲ್ಲ ನೋಡೋಕ್ಕೆ ನನ್ನ
ಯಾಕೆ ಅವಂಗೆ ಸಿಟ್ಟಾ


ಜೋಬಿನ ತುಂಬಾ ಚಾಕಲೇಟು
ತರತರದ ಪೆಪ್ಪರಮೆಂಟು
ಕರಮ್ ಕುರ್ರಂ ಕಡಲೇಬೀಜ
ಚೂರಮ್ ಚುರ್ರಂ ಚುರುಮುರಿ

ಗರಿಗರಿ ಮೈಸೂರು ಕಡಲೆಪುರಿ
ಚುರುಚುರು ಕಾದ ವಗ್ಗರಣೆ
ಹುರಿದ ಮೆಣಸಿನಕಾಯಿ ಜೋರು
ಮಧ್ಯ ಮಧ್ಯ ಕೊಬ್ಬರಿಚೂರು

ಅಲ್ಲೊಂದು ಇಲ್ಲೊಂದು ಸೀಬತ್ತಾಸು
ಆಹಾ ಹಾಹಾ ಎಂತಹ ರುಚಿಯು
ಹುರಿಹುರಿ ಹುರ್‍ರಾ ಹುರಿಗಡಲೆ
ಗರಿಗರಿ ಕಡಲೆ ಕಾಯಿ

ಯಾಕೆ ತಾತಂಗೆ ಹುಷಾರಿಲ್ವಾ
ಚುರುಮುರಿ ಬೇಕಲ್ಲ ನನಗೆ
ಬೇಗನೆ ಬರಲಿ ಚುರುಮುರಿ ತರಲಿ
ತರಲೆ ಆದಿಗೆ ಸಂತಸ ತರಲಿ

14. ಆದಿಯ ಬೇಸಿಗೆ ದಿನಚರಿ



ಆಹಾ...ಓಹೋ...ಬೇಸಿಗೆ
ಬೇಗನೆ ಬಿಟ್ಟೋಳ ಶಾಲೆಗೆ

ಗೆಳೆಯರು ಆಗಲೇ ಮೈದಾನಕ್ಕೆ
ಹಾಜ್ರಾಗಿದೋಣವ ಆಡಲಿಕ್ಕೆ

ಗೋಲಿ ಬುಗುರಿ ಲಗೋರಿ ನಿಮ್ಮಾಲದ್ದು
ಕ್ರಿಕೆಟ್ಟು ಫುಟ್ಬಾಲ್ ಟೆನ್ನಿಸ್ಸು ನಮ್ಮಾಲದ್ದು

ಬೇಗನೆ ಹೋದ್ರೆ ಬ್ಯಾಟಿಂಗು
ಲೇಟಾದ್ರೆ ಗ್ಯಾರೆಂಟಿ ಫೀಲ್ಡಿಂಗು

ನಾಳೆ ಮ್ಯಾಚಿಗೆ ನಾನೇ ಸ್ಪಿನ್ನರ್ರು
ನನ್ನ ಬಾಲಿಗೆ ಹೊಡಿಯೋರಿಲ್ಲ ಸಿಕ್ಸರ್ರು

ತಿಂಡಿಗೆ ಬರುವ ಹನ್ನೊಂದಕ್ಕೆ
ತಿರುಗಿ ಹೋಗುವ ಹನ್ನೆರಡಕ್ಕೆ

ಟ್ವೆಂಕಲ್ಲಾ ಮನೆಯಲಿ ವಿಡಿಯೊ ಗೇಮು
ಅಂಕಲ್ಲಾ ಕಲಿಸ್ತಾರೆ ಟಿಪ್ಪು ಪಸ್ಟ್ ಕ್ರಮ

[illegible]
[illegible]

[illegible]
[illegible]

[illegible]
[illegible]

[illegible]
[illegible]

15. ಆದಿಯ ಹೋಳಿ



ಅಮ್ಮ ನಿನ್ನೆ ಮಿಸ್ಸು ಅಂದ್ರು
ಇವತ್ತು ಹೋಳಿಯ ಹಬ್ಬ
ಒಬ್ಬರಿಗೊಬ್ಬರು ಬಣ್ಣವನೆರಚಿ
ಹರುಷದಿ ಕುಣಿಯುವ ಹಬ್ಬ

ಯುನಿಫಾರಂ ಬೇಡವಿಂದು
ಹಾಕು ರಂಗುರಂಗಿನ ಬಟ್ಟೆ
ತಂದಿಹನೇ ಅಪ್ಪನು ನನಗೆ
ಆಡಲು ಹೊಸ ಪಿಚಕಾರಿ

ಪಾಠವು ಇಲ್ಲ ಆಟವೇ ಎಲ್ಲ
ಆಹಹಾ ಎಂಥಾ ಮಜವಮ್ಮ
ಮಧ್ಯಾಹ್ನ ಬರುವೆ ಬಣ್ಣವ ತೆರುವೆ
ಮನೆಯಲ್ಲೂ ಹಹ ಹೋಳಿಯ ಹಬ್ಬ

ಹುಡುಗರು ಹುಡುಗೀರು ಬಣ್ಣದ ಬಟ್ಟೆ
ಆಟದ ಬಯಲದು ಓಕುಳಿ ಕಟ್ಟೆ
ಹಸಿರು ಹಳದಿ ಕೆಂಪು ನೀಲಿ ಬಣ್ಣದ
ತರತರ ಓಕುಳಿ ತಯಾರು ಮಾಡಿಹರು

ಪಿಚಕಾರಿಯಲಿ ಬಣ್ಣವನೆಸೆವರು
ಶಾಂತಿಯ ಮುಖವು ಕೆಂಪುಗುಲಾಬಿ
ಅಟ್ಟಿಸಿ ಅವಳು ಓಡುವೆ ನಾನು
ಮರದ ಹಿಂದವಿತು ಮತ್ತೆ ಪಿಚಕಾರಿ

ಹೋಳಿಯನಾಡಿ ತಕರಾರು ಬೇಡಿ
ಅಂದರು ಮಿಸ್ಸು ದೂರವೆ ಕುಳಿತು
ನಮ್ಮದೆ ರಾಜ್ಯ ಹಚ್ಚುವ ಬಣ್ಣ
ಕೆನ್ನೆಯ ಕೆಂಪು ಕಾಣುವುದಮ್ಮ


ಒಬ್ಬರ ಹಿಂದೆ ಒಬ್ಬರು ಓಡುತ
ಪಿಚಕಾರಿ ಸದ್ದು ಪಿಚಕ್ ಪಿಚಕ್
ಬಣ್ಣದ ಹುಡಿಯನು ಮೆತ್ತುವರು
ಬಿಳಿಚಡ್ಡಿಯ ನೀಲಿಯ ಮಾಡುವರು

ಅಮ್ಮ ನೀನು ಅಪ್ಪನ ನಗಿಸು
ಅವಿತು ಬರುವೆನು ನಾನಲ್ಲಿ
ಹೊಸಬಟ್ಟೆಗೆ ರಂಗನು ಸುರಿದು
ಚಪ್ಪಾಳೆ ಹೊಡೆಯುತ ಓಡುವೆನಲ್ಲಿ

ಹೋಯಿತೋ ಪ್ಯಾಂಟು ತಾತನ ಕೊರಗು
ಹೋದರೆ ಹೋಗಲಿ ಅನ್ನುವಳಜ್ಜಿ
ಹೋಳಿಗೆಗಿಂತ ಹೋಳಿಯು ಸಿಹಿಯು
ಅಮ್ಮನ ತಲೆ ಮೇಲೆ ಬಣ್ಣದ ಹುಡಿಯು

ವರುಷಕೊಮ್ಮೆ ಏಕಮ್ಮ ಹೋಳಿ
ಇರಬಾರದೆ ಅನುದಿನ ಪಾಳಿ
ಕುಣಿಯುತ ನಲಿಯುತ ಮಕ್ಕಳು ನಾವು
ರಂಗುರಂಗಿನ ಆಟ ಆಡುವೆವು

16. ಆದಿಗೆ ಬೆಕ್ಕು ಬೇಕು



ಅಜ್ಜಿ ಅಜ್ಜಿ ಎಂದೋಡುತಲಿ
ಸೆರಗನ್ನೆಳೆಯುತ ಕೇಳಿದ ಆದಿ
ಹೊಟ್ಟೆಯು ಹಸಿವು ಬಾಯಾರಿಕೆ ಎನಗೆ
ಬಿಸಿಬಿಸಿ ತಿಂಡಿ ಏನಿದೆ ಒಳಗೆ

ತಾತಂದಾಯಿತು ಅಪ್ಪಂದಾಯಿತು
ನಿಂದೇನೊ ಕಿರಿಕಿರಿ ಮೊಮ್ಮಗನೆ
ಅಜ್ಜ ವಾಕಿಂಗಿಗೆ ಅಮ್ಮ ಶಾಪಿಂಗಿಗೆ
ನಾ ಉಳಿದೆನೆ ನಿನ್ನಯ ಕೆಲಸಕ್ಕೆ


ಅಜ್ಜಿ ತಿನ್ನಲು ಬೇಕು ಕುರ್ರುಂಬೆಕ್ಕು
ನಿನ್ನೆ ತಿಂದೆನು ಅಳಿಲಿನ ಮರಿಯ
ಕುರಿ ಕೋಳಿ ಹಕಿಪಿಕ್ಕಿ ಕರಕರ
ತಿಂದರು ಶಾಲೇಲಿ ಸಹಪಾಠಿಗಳು

ಅಜ್ಜಿ ನೀನು ತುಂಬಾ ಜಾಣೆ
ಎಷ್ಟೊಂದು ಪ್ರಾಣಿ ಬೇಯಿಸಿಕೊಟ್ಟೆ
ಕ್ಲಾಸು ಟೀಚರ್ ಕುರಿಮರಿ ತಿಂದು
ಖುಷಿಯಲಿ ಹೊಡೆದರು ಬಾಯಿಲೊಟ್ಟೆ

ದಿನದಿನ ನಿಂಗೆ ರುಚಿರುಚಿ ಅಡಿಗೆ,
ಹೊಗಳಿ ಹೊಗಳಿ ಅಟ್ಟಕ್ಕೇರ್ಸು
ತಿಂಡಿತಿಂದು ಹೋಂವರ್ಕ್ ಮಾಡಿ
ಮಾಲಿಂದ ಬಂದ್ಮೇಲೆ ಅಮ್ಮಂಗೆ ತೋರ್ಸು

ಕಾದಿದೆ ಓಲೆ ಮೇಲೆ ಬಿಸಿಬಿಸಿ ಎಣ್ಣೆ
ಚೆನ್ನಾಗಿ ಗರಿಗರಿ ಕರಿಯಲುಬೇಕು
ಡಬ್ಬವ ತೆಗೆದು ಬೇಯಲು ಬೆಕ್ಕು
ಒತ್ತಬೇಕು ಒರಳಲಿ ಚಕ್ಕುಲಿ ಹಿಟ್ಟು

17. ಬ್ಯಾ ಬ್ಯಾ ಕಪ್ಪುಕುರಿ
(ಇಂಗ್ಲೀಷ್ ಶಿಶುಗೀತೆಯ ಅನುವಾದ)



ಬ್ಯಾ ಬ್ಯಾ ಕಪ್ಪುಕುರಿಯೆ
ತುಪ್ಪುಳ ನಿನ್ನಲಿದೆಯೆ?
ಹ್ಞು ಸ್ವಾಮಿ ಹ್ಞು ಸ್ವಾಮಿ
ಮೂರು ಚೀಲ ತುಂಬಿದೆ.

ಯಜಮಾನನಿಗೊಂದು
ಯಜಮಾನತಿಗೊಂದು
ಆ ಪುಟ್ಟ ಹುಡುಗಗೆ ಮತ್ತೊಂದು
ಓಣಿಯ ಕೊನೆಯಲಿ ಇಹನವನು.

ಬ್ಯಾ ಬ್ಯಾ ಕಪ್ಪುಕುರಿಯೆ
ತುಪ್ಪುಳ ನಿನ್ನಲಿದೆಯೆ
ಹ್ಞು ಸ್ವಾಮಿ ಹ್ಞು ಸ್ವಾಮಿ
ಮೂರು ಚೀಲ ತುಂಬಿದೆ.

ಬ್ಯಾ ಬ್ಯಾ ಬಿಳಿಕುರಿಯೆ
ತುಪ್ಪುಳ ನಿನ್ನಲಿದೆಯೆ?
ಹ್ನು ಸ್ವಾಮಿ ಹ್ನು ಸ್ವಾಮಿ
ಮೂರು ಕ್ರೋಶದ ಕಡ್ಡಿ ತುಂಬಿದೆ.

ತೋಳಿಲ್ಲದ ರವಿಕೆ ರಿಪೇರಿಗೊಂದು
ರವಿಕೆ ಲಂಗದ ರಿಪೇರಿಗೆ ಇನ್ನೊಂದು
ಆ ಪುಟ್ಟ ಹುಡುಗಿಗೆ ಮತ್ತೊಂದು
ತೂತಾದ ಕಾಲುಚೀಲ ರಿಪೇರಿಗೆಂದು

ಬ್ಯಾ ಬ್ಯಾ ಬಿಳಿಕುರಿಯೆ
ತುಪ್ಪುಳ ನಿನ್ನಲಿದೆಯೆ?
ಹ್ನು ಸ್ವಾಮಿ ಹ್ನು ಸ್ವಾಮಿ
ಮೂರು ಕ್ರೋಶದ ಕಡ್ಡಿ ತುಂಬಿದೆ.

ಬ್ಯಾ ಬ್ಯಾ ಬೂದುಕುರಿಯೆ
ತುಪ್ಪುಳ ನಿನ್ನಲಿದೆಯೆ?
ಹ್ನು ಸ್ವಾಮಿ ಹ್ನು ಸ್ವಾಮಿ
ಮೂರು ಚೀಲ ತುಂಬಿದೆ

ಬೆಕ್ಕಿನ ಮರಿಗೊಂದು
ಬೆಕ್ಕಿಗೆ ಇನ್ನೊಂದು
ಸಾಹುಕಾರಂಗೆ ಮತ್ತೊಂದು
ಹೆಣೆಯಲು ಉಣ್ಣೆಯ ಟೋಪಿಯನು.

ಬ್ಯಾ ಬ್ಯಾ ಬೂದುಕುರಿಯೆ
ತುಪ್ಪುಳ ನಿನ್ನಲಿದೆಯೆ?
ಹ್ನು ಸ್ವಾಮಿ ಹ್ನು ಸ್ವಾಮಿ
ಮೂರು ಚೀಲ ತುಂಬಿದೆ

ಬ್ಯಾ ಬ್ಯಾ ಕಂದುಕುರಿಯೆ
ತುಪ್ಪುಳ ನಿನ್ನಲಿದೆಯೆ?
ಹ್ಞು ಸ್ವಾಮಿ ಹ್ಞು ಸ್ವಾಮಿ
ಮೂರು ಚೀಲ ತುಂಬಿ

ಅಮ್ಮನಿಗೊಂದು
ಅಪ್ಪನಿಗೊಂದು
ಆ ಪುಟ್ಟ ಹುಡುಗನಿಗೆ ಮತ್ತೊಂದು
ಓಣಿಯ ಕೊನೆಯಲಿ ಇಹನವನು

ಬ್ಯಾ ಬ್ಯಾ ಕಂದುಕುರಿಯೆ
ತುಪ್ಪುಳ ನಿನ್ನಲಿದೆಯೆ?
ಹ್ಞು ಸ್ವಾಮಿ ಹ್ಞು ಸ್ವಾಮಿ
ಮೂರು ಚೀಲ ತುಂಬಿದೆ


ಬ್ಯಾ ಬ್ಯಾ ಬೋಡು ಕುರಿಯೆ
ತುಪ್ಪುಳ ನಿನ್ನಲಿದೆಯೆ?
ಇಲ್ಲ ಸ್ವಾಮಿ ಇಲ್ಲ ಸ್ವಾಮಿ
ಎಲ್ಲ ಚೀಲ ಖಾಲಿ ಆಯ್ತು

ಯಜಮಾನನಿಗೆ ಏನೂ ಇಲ್ಲ
ಯಜಮಾನತಿಗೂ ಇಲ್ಲ
ಮತ್ತಾಪುಟ್ಟ ಹುಡುಗನಿಗೂ ಇಲ್ಲ
ಓಣಿಯ ಕೊನೆಯಲಿ ಇಹನವನು

ಬ್ಯಾ ಬ್ಯಾ ಬೋಡು ಕುರಿಯೆ
ತುಪ್ಪುಳ ನಿನ್ನಲಿದೆಯೆ?
ಇಲ್ಲ ಸ್ವಾಮಿ ಇಲ್ಲ ಸ್ವಾಮಿ
ಎಲ್ಲ ಚೀಲ ಖಾಲಿ ಆಯ್ತು

ಮೂಲ:- 'baa baa black sheep' - Rudyard Kipling (1865-1936)

18. ಕಾಪಾಡ್ಬೇಕು ಆದಿ



ಕಾಗೆ ಗುಬ್ಬಿ ಕಥೆಯು
ಅಮ್ಮ ತುಂಬಾ ಬೋರು
ನಾಯಿ ಬೆಕ್ಕು ಆಟ
ಅಕ್ಕ ಪಕ್ಕ ಚೂರು
ಶಾಲೆಗೆ ಬಂತು ಚಿರತೆ
ಅಬ್ಬಾ ಎಂಥಾ ಜೋರು

ಚಿರತೆ ಮನೆಯು ಕಾಡೇ
ಊರಿಗೆ ಬಂತಾ ಟೂರೇ
ಡಾಕ್ಟರ್ ಗುಬ್ಬಿ ಮೇಲೆ ಹಾರಿ
ಟಿವಿಯಲ್ಲಿ ತೂರಿ
ದೊಡ್ಡ ಸೂಜಿ ಚುಚ್ಚಿ
ಮಲಗಿ ಕಣ್ಣ ಮುಚ್ಚಿ

ಹುಲಿ ಚಿರತೆಯ ಕಾಡೇ
ಕಡಿದು ಮಾಡಿದ ನಾಡೇ
ಊಟಕೆ ಕಷ್ಟದ ಪಾಡೇ
ಹುಡುಕಿ ಹೊಸ ಜಾಡೇ
ಮಾಂಸಾಹಾರಿ ಚಿರತೆ
ಬತ್ತಿದೆ ಬಾಳಿನ ಒರತೆ

ನೋಡು ಅದರ ರೋಷ
ಕೆಂಡಕ್ಕಿಂತ ಕೋಪ
ಹೊಟ್ಟೆ ಹಸಿವು ಪಾಪ
ಮನುಷ್ಯಗ್ಹಾಕಿ ಶಾಪ
ಎಲ್ಲಾ ನಂದೆ ಅನ್ನುವ ಭೂಪ
ದುರಾಸೆ ಸ್ವಾರ್ಥದ ಕೂಪ

ಹುಲಿ ಸಿಂಹ ಕರಡಿಯು
ಕೋಣ ಆನೆ ತರತರವು
ಕಾಪಾಡ್ಬೇಕು ಆದಿ
ಎಂಥಾ ಸುಂದರ ಜಗವು
ಗಿಡವು ಮರವು ಬೇಕು
ಪ್ರಾಣಿ ಪಕ್ಷಿ ಜೊತೆಗಿರಬೇಕು

19. ಆದಿಯ ಅಪೀಲು



ಹಾರಿ ಬಂತು ಬೆಕ್ಕು
ಕಪ್ಪು ಬಿಳುಪು ಕಂದು
ನೋಡು ಕಣ್ಣು ಬಣ್ಣ
ಬಾಲವು ಮೋಜೊ ಅಣ್ಣ

ಶಬ್ದವಿಲ್ಲದ ಹೆಜ್ಜೆಯು
ನೆಟ್ಟಗೆ ನಿಂತ ಕಿವಿಯು
ಸುಳಿವು ಕೊಡದ ಕಳವು
ಖಾಲಿ ಪಾತ್ರೆಯಲಿದ್ದ ಹಾಲು

ಬಾಯಲಿ ಬೆಕ್ಕಿನ ಮರಿಯು
ನೋವಾಗಲ್ವಾ ಅಮ್ಮ
ಸಜ್ಜದ ಮೇಲೆ ನಿನ್ನೆ
ಇಂದು ಎಲ್ಲಿಗೆ ಹೋಯ್ತು

ಇಲಿಯ ಕೊಲುವ ಆಟ
ಬಿಟ್ಟು ಹೊಡೆವ ಹೂಟ
ಪಾಪ ಸಂಕಟ ಇಲಿಗೆ
ಹೊಯ್ತು ಬೆಕ್ಕಿನ ಹೊಟ್ಟೆಗೆ

ನಾಯಿ ಕಂಡ್ರೆ ಓಡತ್ತೆ
ಗುಬ್ಬಿ ಮೇಲೆ ಹಾರತ್ತೆ
ಇಸ್ಸಿ ಮಾಡಿ ಮುಚ್ಚತ್ತೆ
ಮಿಯಾಂವ್ ಅನ್ನತ್ತೆ

ಮಹಡಿ ಸರ್‍ರನೆ ಏರತ್ತೆ
ಮಾಡು ಮಾಡು ಹಾರತ್ತೆ
ನಾಲ್ಗೆಲ್ ಮೂತಿ ಒರಸತ್ತೆ
ನಂಗೆ ಯಾಕೊ ಗುರನ್ನತ್ತೆ

ಕಳ್ಳಗೊಂದು ನಾಯಿ
ಇಲಿಗೊಂದು ಬೆಕ್ಕು
ತಬ್ಬಲು ಟೆಡ್ಡಿಬೇರು
ಕೂಡಲು ಈಸಿಚೇರು

ಬೆಕ್ಕಿಗೆ ಹಾಲು ಕೊಡುವೆ
ನಾಯಿಗೆ ಅನ್ನ ಇಡುವೆ
ನಾಯಿ ಬೆಕ್ಕು ತಾರಮ್ಮ
ನೀನೆ ಜಾಣೆ ನನ್ನಮ್ಮ

20. ಆದಿಗೆ ನಾಯಿಬೇಕು



ಪಕ್ಕದ ಮನೆ ಪುಟ್ಟಿ
ಜೂಲುನಾಯಿ ಕಟ್ಟಿ
ಸವರಿ ಅದರ ನೆತ್ತಿ
ಅಂದದ ಜಂಬಗಿತ್ತಿ

ಕುಚ್ಚು ಕುಚ್ಚು ಬಾಲ
ಕುಣಿ ಕುಣಿ ಕಾಲ
ಹೊರಗೆ ನಾಲಿಗೆ ಚಾಚಿ
ಕೊಟ್ಟ ಕವಳ ಬಾಚಿ

ಸಂಜೆಯಲ್ಲಿ ವಾಕಿಂಗು
ನಾಯಿಜೊತೆ ಟಾಕಿಂಗು
ಇಸ್ಸಿ ಇಸ್ಸಿ ಇಂಗ್ಲೀಷೂ
ಅವಳ ಆಟ ಜಂಗ್ಲೀಷೂ

ಮಲಗಲು ಮೆತ್ತನೆ ಹಾಸಿಗೆ
ಮುದ್ದು ಜೂಲಿ ಜೊತೆಗೆ
ದಿನವೂ ಸ್ನಾನ ನಾಯಿಗೆ
ಬಣ್ಣದ ಬಟ್ಟೆ ಶೋಕಿಗೆ

ಅಪ್ಪ ನಂಗೂ ನಾಯಿಬೇಕು
ಮಧೋಳ ನಾಯಿ ಭೈರವ
ಬೊಗಳು ಕಿವಿಯು ಸೀಳು
ಕಳ್ಳಕಾಕರಿಗೆ ಇವ ರೌರವ

ಪುಟ್ಟಿ ನಾಯಿ ಬೆದರುವುದು
ಮನೆಯ ಒಳಗೆ ಓಡುವುದು
ಪುಟ್ಟಿಯ ನೋಡಿ ನನಗೆ ನಗೆಯು
ಈ ಗೆಳೆತನ ಹೊಸದೇ ಬಗೆಯು

22. ಆದಿಯ ಹುಟ್ಟು ಹಬ್ಬ





ಅಪ್ಪ ತಂದ ಕೇಕು
ಅಮ್ಮ ಹೋಳಿಗೆ ಬೇಕು

ಅಜ್ಜ ತಂದ ಚೆಣ್ಣ
ಕಣ್ಣ ಸೆಳೆವ ಬಣ್ಣ

ಅಡಿಗೆ ಮನೇಲಿ ಅಜ್ಜಿ
ಮಾಡುತಾಳೆ ಬಜ್ಜಿ

ಮನೇಲಿ ತೋರಣ ಹೂವು
ಸೇರಿದೆ ಚಟಾಕು ಪಾವು

ಆಚೆಮನೆ ಅಂಕಲ್ಲು
ಅವರ ಮಗ್ಳು ಟ್ವಿಂಕಲ್ಲು

ಪಕ್ಕದ ಮನೆ ಅಣ್ಣ
ಏನು ತಂದಿಯಣ್ಣ

ಬಣ್ಣದ ಬಟ್ಟೆ ಶಾಲೆಗೆ
ಯೂನಿಫಾರಂ ನಾಳೆಗೆ

ಅಸೆಂಬ್ಲಿಲಿ ಅನೌನ್ಸಮೆಂಟು
ಕ್ಲಾಸ್ಮೇಟ್ಸ್ಗೆ ಪೆಪ್ಪರಮೆಂಟು

ದೇವಸ್ಥಾನಕೆ ಸಂಜೆಗೆ
ಅಪ್ಪ ಅಮ್ಮನ ಜೊತೆಗೆ

ತುಂಬಾ ಜಾಣ ನಾನಮ್ಮ
ಆಟಕೆ ತಂಗಿ ಚೆನ್ನಮ್ಮ

ಈಗ ಮೊಬೈಲು ಕೊಡ್ಸು
ಜಾಸ್ತಿ ಗೇಮು ಹಾಕ್ಸು

ಗೆಳೆಯರೆಲ್ಲಾ ಬನ್ನಿ
ಕೇಕೆ ಹಾಕಿ ಕೇಕು ತಿನ್ನಿ

23. ನಥಿಂಗ್ ಡೂಯಿಂಗ್ ಆದಿ



ಬಂದಿತು ಬಂದಿತು ಕ್ರಿಸ್ಮಸ್ ರಜವು
ಅಜ್ಜಿಯ ಊರಲಿ ಆದಿಗೆ ಮಜವು

ಅಪ್ಪನು ಬಾರನು ರಜ ಅವಗಿಲ್ಲ
ಅಮ್ಮನ ಜೋಡಿಯೆ ತಿರುಗು ಊರೆಲ್ಲ

ಏಳಲು ಬೆಳಗಿನ ಅವಸರವಿಲ್ಲ
ಅಮ್ಮನ ದಾಂಗುಡಿ ಕೇಳುವರಿಲ್ಲ

ಶಾರ್ಟ್ ಟೆಸ್ಟು ಲಾಂಗ್ ಮಾರ್ಕ್ಸ್ ಕಾರ್ಡು
ಶಿಸ್ತಿನ ಸಾಲಿನ ಕಿರಿಕಿರಿಯಿಲ್ಲ ಹೋಂವರ್ಕು

ಅಜ್ಜಿಯ ಊರಲಿ ರಸ್ತೆಯೇ ಫೀಲ್ಡು
ಓಡುವುದಲ್ಲಿಯೇ ಮಕ್ಕಳ ದಂಡು

ಪೋಂ..ಪೋಂ..ಬಸ್ಸು ಧಡಬಡ ಗಾಡಿ
ಕೂಗೋ ಪೋಲಿಸ್ ಅಂಕಲ್ ಇಲ್ಲಿಲ್ಲ


ಕೇಳಿದ್ದೆಲ್ಲಾ ಕೊಡಿಸುವ ತಾತ
ಇವನೇ ನಮ್ಮ ಸಾಂತಾ ತಾತ

ಲೊಚಲೊಚ ಮುತ್ತನು ಕೊಡುವಳು ಅಜ್ಜಿ
ಕೊಚಕೊಚ ಮಾತಿನಮಲ್ಲನು ಆದಿ

ಹೊಸಹೊಸ ಗೆಳೆಯರು ಹೊಸಹೊಸ ತಿಂಡಿ
ಇಲ್ಲೇ ಶಾಲೆಗೆ ಸೇರಲೆ ನಾನು

ನಥಿಂಗ್ ಡೂಯಿಂಗ್ ನಡಿಯೊ ಆದಿ
ಸೆಕೆಂಡ್ ಜನವರಿ ಬೆಂಗಳೂರು ಹಾದಿ

24. ಆದಿ ಪೋಕರಿ



ಆದಿಯೆಂಬ ತುಂಟ ಹುಡುಗ
ತುಂಬಾ ಜಾಣ ಪೋಕರಿ
ಕೂಡಿ ಕಲಿವ ಕುಣಿದು ನಲಿವ
ಮೇಡಂಗೆ ಮೆಚ್ಚು ರೀ

ಕೊಚಕೊಚ ಮಾತು ಗೆಳೆಯರ ಸಾತು
ಕ್ಲಾಸಲ್ಲಿ ಒಮ್ಮೊಮ್ಮೆ ಕಿರಿಕಿರಿ
ಕೂದಲು ಎಳೀತಾನೆ ನೋಡಿ ಮೇಡಂ
ಅನ್ನೋ ದೂರು ಚೋಕರಿ

ಅಪ್ಪ ಮಾಡಿದ ಹೋಂವರ್ಕು ನೋಡಿ
ಅಂದ್ರೆ ಎಂಥಾ ಜೋಕು ರೀ
ಟೆಕ್ಕಿ ಗಣಿತ ಅಗಣಿತ ತಪ್ಪು
ಮೇಡಂಗೆ ಎಂಥ ಶಾಕೂ ರೀ

ಹೊಟ್ಟೆ ಕಡಿದ್ರೆ ಅಳ್ದೆಪಳ್ದೆ
ತಾನೇ ಊಟಾ ಮಾಡ್ತಾನ್ರೀ
ನ್ಯಾಪ್ಕಿನ್ನು ತೆಗೆಯೋದ ಮರತ್ರೆ
ಮಾತ್ರ ರಾಮಯಣ ಖಾತ್ರಿ ರೀ

ಮನೇಲಿ ಚಕ್ಕುಲಿ ಮುಚ್ಚೋರೆ ಕೊಟ್ರೆ
ಊಹುಂ..ಅಂತ ಅಂದಾನ್ರೀ
ಹೊಟೆಲ್ಲಿಗೆ ಹೋಗೋಣ ನಡಿ ಅಂತ
ಪಾನಿಪೂರಿ ಕೇಳ್ತಾನ್ರೀ

ತಾತನ ಮೊಬೈಲು ಕೈಯ್ಯಲ್ಲಿ
ಹಿಡಿದು ಹೇಳ್ತಾನೆ ನಂದೇ ರೀ
ಸದ್ದುಗದ್ದಲ ಇಲ್ದೆ ಕೂತು
ಮೊಬೈಲು ಗೇಮು ಆಡ್ತಾನ್ರೀ

ತಾತ ಅಜ್ಜಿ ವಾಕಿಂಗ್ ಹೊರಟ್ರೆ
ನಾನೂ ಬರ್ತೀನಿ ಅಂತಾನ್ರೀ
ಅಪ್ಪ ಅಮ್ಮ ಜಗಳಾಡಿದ್ರು
ಅನ್ನೋ ಕಂಪ್ಲೇಂಟ್ ಹೇಳ್ತಾನ್ರೀ

ಮುರ್ಕಾಲು ಸೈಕಲ್ಲು ನಿನ್ನೆ ತಂದ್ರು
ಎಲ್ಲರ ಕಾರೂ ಗೊತ್ತೂ ರೀ
ಆದಿ ಬಾರೋ ಅಂದ್ರೆ ನಕ್ಕು
ಅಮ್ಮನ ಸೆರಗು ಹಿಡಿತಾನ್ರೀ

25. ಇಲ್ಲಿ ಬಾರೆ ಪುಟ್ಟಿ



ಇಲ್ಲಿ ಬಾರೇ ಪುಟ್ಟಿ
ಬಂದೇ ತಾಳು ಪುಟ್ಟ

ಪಟ್ಟದ ರಾಜ ನಾನು
ಪಟ್ಟದ ರಾಣಿ ನೀನು

ಆನೆ ಕುದುರೆ ಪದಾತಿ
ಒಂಟೆ ಫಿರಂಗಿ ಸಂಗಾತಿ

ಅರಮನೆ ತೋಟ ಉದ್ಯಾನ
ಹಣ್ಣು ಹಂಪಲು ಬಾಗಿನ

ಸೆಟ್ಟರ ಅಂಗಡಿ ನೋಡು
ಭಟ್ಟರ ಹೊಟೆಲ್ಲು ಮಾಡು

ಊರ ಮಕ್ಕಳು ಬರಲಿ
ಅಕ್ಷತೆ ಹಾಕಿ ನಮಿಸಲಿ

ಪೂಜೆ ಮಾಡೋದು ಅಕ್ಕ
ಚರ್ಪು ಮಾಡೋದು ಅಮ್ಮ

ಸರಸ್ವತಿ ಪ್ರಾರ್ಥನೆ ಮಾಡೋಣ
ದುರ್ಗಾದೇವಿಗೆ ಬಾಗೋಣ

ಆಯುಧವೆಲ್ಲಾ ಜೋಡಿಸಿ
ಕಡಲೇಪುರಿ ಬತ್ತಾಸು ತಿನ್ನಿಸಿ

ವಿಜಯದಶಮಿಗೆ ಬನ್ನಿ
ಮೆರವಣಿಗೆ ಸಂತಸ ತನ್ನಿ

ಅಂಬಾರಿಯಲ್ಲಿ ನಾನು
ಅರಮನೆಯಲ್ಲಿ ನೀನು

ಎಂಥಾ ಚಂದ ದಸರಾ
ಬರಲಿ ಬೇಗ ಸರಸರಾ

26. ಇಲಿಯ ಪಲ್ಟಿ



ನುಸುಳುತ ಕಾಣದೆ
ಸದ್ದನು ಮಾಡದೆ
ಮನೆಯೊಳು ಬಂದಿತು
ಇಲಿಯೊಂದು

ಸರ್ರನೆ ಓಡುತ
ಥಂಗನೆ ನೆಗೆಯುತ
ಏಟಿಗೂ ಸಿಕ್ಕದ
ತುಂಟನದು

ಪ್ಯಾಂಟಲಿ ತೂತು
ಇದೊಂದು ಬಂತು
ಸಿಡಿಮಿಡಿಗುಟ್ಟಿತು
ಅಪ್ಪನ ಮಾತು

ಅಕ್ಕಿ ಚೀಲಕೆ
ಹಾಕಿತು ತೂತು
ಅಡಿಗೆ ಮನೆಯಲಿ
ದಾಂದಲೆ ಹೇತು

ಬೆಕ್ಕನು ಸಾಕುವ
ಪಾಷಾಣವಿಕ್ಕುವ
ಬಡಿಗೆಲಿ ಬಡಿಯುವ
ಅಣ್ಣನ ಮಾತು

ದಾದಾ ನಾನೇ
ಎನ್ನುವ ಅಣ್ಣ
ನಿದ್ದೆಲಿ ಕೂಗಿ
ಬೆಚ್ಚಿದನಣ್ಣ

ಎಲ್ಲರ ನೋಡಿ
ನಕ್ಕಳು ಪುಟ್ಟಿ
ಕೊಟ್ಟಳು ಐಡಿಯಾ
ಅಣ್ಣನ ಕುಟ್ಟಿ

ಘಮಘಮ ವಡೆಯ
ಕೊಕ್ಕಿಗೆ ಸಿಕ್ಕಿ
ಪಂಜರವಿಕ್ಕಿ
ಕಾದಳು ಪುಟ್ಟಿ

ಬೆಳಗಾಗೇಳಲು
ಪಂಜರದೊಳಗೆ
ಕುಂಯ್ ಕುಂಯ್
ಇಲಿಯು ಪಲ್ಟಿಹಾಕಿ

ಚೀಲದಲಿಟ್ಟಳು
ದೂರದಿ ಬಿಟ್ಟಳು
ಜಾಣೆ ಪುಟ್ಟಿಯು
ಸಂತಸಪಟ್ಟಳು

27. ದಸರಾ

ಬಂತು ಬಂತು ದಸರ
ಗೊಂಬೆ ತನ್ನಿ ಸರಸರ

ರಾಜ ರಾಣಿ ಇರಲಿ
ಚಾಮುಂಡಮ್ಮ ಬರಲಿ

ರಂಗನ ಕಾಡು ಬೆಳೆಸೋಣ
ಹುಲಿ ಸಿಂಹ ಬಿಡೋಣ

ಕಬ್ಬಿಗೆ ಬಂತು ಆನೆ
ಕೋತಿಗೊಂದು ಬಾಳೆಗೊನೆ

ಅಂಗಡಿಯಲ್ಲಿ ಶೆಟ್ಟರು
ಅಡಿಗೆಯಲ್ಲಿ ಭಟ್ಟರು

ಚೆನ್ನಪಟ್ಟಣದ ಗೊಂಬೆ
ಚಾಚಿ ಮರದ ಕೊಂಬೆ

ಗೆಳೆಯರನ್ನು ಕರೆಯೋಣ
ಪ್ರಸಾದವನ್ನು ಹಂಚೋಣ

ಸರಸ್ವತಿ ಪೂಜೆ ನಡೆಸೋಣ
ದುರ್ಗಾಪೂಜೆ ಮಾಡೋಣ

ಆಯುಧವೆಲ್ಲ ತನ್ನಿ ಬನ್ನಿ ಹಂಚುವ ಬನ್ನಿ
ಒಳ್ಳೆಯ ಮಾತು ಆಡೋಣವೆನ್ನಿ

28. ಗೌರಿಯ ಮಗ



ಗಾಂಧಿ ಬಜಾರಿಗೆ ಹೋಗೋಣಪ್ಪ
ಬಂದಿಹನಂತೆ ಗಣಪ
ಎಂತಾ ವಿಚಿತ್ರ ಗಣಪನ ರೂಪ
ಹೇಗಾಯ್ತು ಹೇಳಪ್ಪ

ಡೊಳ್ಳಿನ ಹೊಟ್ಟೆ ಆನೆ ಕಿವಿಯು
ಟೊಂಕದಿ ಹಾವು ವಾಹನ ಇಲಿಯು
ನಾಕು ಕೈ ಮುರಿದ ದಂತವು
ತಲೆಯಲಿ ದೊಡ್ಡ ಕಿರೀಟ


ಅಂಗಡಿ ಮುಂಗಟ್ಟೆಯಲಿ
ಅವನದೇ ಆಟಾಟೋಪ
ತರತರ ಬಣ್ಣ ಸಣ್ಣನೆ ಕಣ್ಣ
ಮೋದಕ ಕಡುಬು ಎಲ್ಲಪ್ಪ

ಹೂವಿನರಾಶಿ ಪತ್ರೆ ಗರಿಕೆ
ಹಣ್ಣು ಹಂಪಲು ಮೇರು
ಕಬ್ಬು ಕಂದು ಬಾಗಿನ ತೋರಣ
ತೂಗಾಡಲು ಫಲವಸ್ತು

[illegible]

[illegible]

29. ಯಾಕಳತಾಕುಂತಿ



ಅಮ್ಮ ನಿನ್ನೆ ಸೀ ಕೊಟ್ಯಲ್ಲ
ಇಂದು ಯಾಕ ಅಳತಾಕುಂತಿ
ಕುಂತ್ಕುಂತಂಗೆ ಅದೇ ಲಂಗ್ದಾಗೆ
ದೊಡ್ಡ ಶಹಗ್ರ್ಯಾಕ್ ಬಂದ್ವಿ
ಬೇರೆಲ್ಲಿ ಐತಿ ಹೇಳು
ದಿಲ್ಲಿಗಿಂತ ದೊಡ್ಡ ಬಿಲ್ಡಿಂಗು

ಜುಬ್ಬಾ ಮಂದಿ ದಾಡಿ ಮಂದಿ
ನಿಂಗೇನೇನೋ ಹೇಳಿದ್ರು
ಸೆರಗ್ನಾಗ್ ನೀನು ಕಣ್ಣೊರ್ಸ್ಕೊತ
ಸುಮ್ಮೆ ಯಾಕ ಕುಂತಿ

ಅಮ್ಮಾ ಇವರು ಯಾರೀ ಮಂದಿ
ಅಪ್ಪನಂಗೆ ಬಟ್ಟೆ ಟಕ್ಕಟಕ್ಕ ನಡಿಗೆ
ಅವಂದೆ ಎಲ್ಲ ಸ್ಟೈಲೇ
ಹೊಟ್ಟೆ ಹಸಿವಂದ್ರು ಹಾಲೂಕೊಡದೆ
ಅತುಕೋತ ಊರಿಗ್ಯಾಕ ಹೊಂಟಿ

ನಮ್ಮೂರ್ ತುಂಬಾ ಇದೇನಮ್ಮ
ಇಷ್ಟೊಂದ್ಮಂದಿ ಎಲ್ಲಿದ್ರಮ್ಮ
ರಸ್ತೆಲಿ ಆಕಾಶದ್ವರ್ಗೂ ಧೂಳು
ಅಪ್ಪನ ಫೋಟೊ ತೂಗ್ಯಾಕ್ರಲ್ಲ
ಯಾಕಮ್ಮಾ ನಿಂಗೊತ್ತಾ

ಸಾಲಿ ಮಕ್ಕಳು ಸಾಲಾಗ್ಬಂದ್ರು
ಕಣ್ತುಂಬಾ ನೀರು ತುಂಬ್ಕಂಡ್ರು
ಆ ಡಬ್ಬದಾಗೆ ಏನೈತೆ ಹೇಳು
ನನ್ನೆತ್ಕೊಂಡು ಸೆಲ್ಯೂಟ್ ಹೊಡಸದ್ರು
ಆಗೊಷ್ಟು ತಿಂಗ್ಳ ಬಾವುಟ ಬಟ್ಟೆ
ಡಬ್ಬದ್ ಮ್ಯಾಲ್ಯಾಕೆ ಐತಿ ಹೇಳು

ಟಾಕು..ಟೀಕು..ಗನ್ನಾಕಾಶಕ್ಕೆ
ಇಪ್ಪತ್ತೊಂದು ಢುಂ...ಢುಂ...
ಅಪ್ಪನ್ ಫೋಟೋ ಅಲ್ಲ್ಯಾಕಿಟ್ರು
ಎದ್ಹೋಗಿ ಕೇಳು

ಈ ಪಾಟಿ ಮಂದಿ ಇಂಥಾ ಅಳುವು
ನಾನೆಂದೂ ಕಾಣೆ
ಅಪ್ಪ ಬಂದಾಗ ಕೇಳ್ತೀನಿ ನಾನು
ನೀನಿರು ಸ್ವಲ್ಪ ಸುಮ್ಮೆ

ಸಿಯಾಚಿನ್ನು ಕೂಗ್ತಾವರಲ್ಲ
ಅದು ಯಾವ ಊರು
ಧಾರವಾಡ್ಕಿಂತ ದೊಡ್ಡೇನದರ ಸೂರು
ಅಪ್ರತಿಮ ಯೋಧ ಅಂತ ಕಣ್ಣೊರ್ಸ್ಕೋಂಡ್ರಲ್ಲ
ಅಂಗಂದ್ರೆ ಯಾರು

ಗಂಡ್ನಾಡು ಧಾರವಾಡಂತ ಹುಡುಗ್ರದ್ದು ಹಾಡು
ಕುಂದಿಲ್ಲದ್ಹೋಳದಾಗೆ ಬೆಟದೂರೆಂದ್ರೆ
ನಮ್ದಲ್ವಾ ತಾವು

ಢುಂ..ಢುಂ...ಮಾಡಿ ಸಲ್ಯೂಟ್ ಹಾಕಿ
ಆ ಡಬ್ಬದಿಂದೇನೋ ಹೊತ್ರು
ಅಪ್ಪ ಬಂದಾಗವ್ನೇ ಕೇಳ್ತಿನಿ
ಗಿಡವಡಿಯುತ್ತಾ ಅಲ್ಲಿ

ಅಳ್ಬ್ಯಾಡಮ್ಮ ಸುಮ್ಕೆ ಸುಮ್ಕೆ
ನೀನೆಂಥಾ ದಡ್ಡಿ
ಸೈನ್ಯಕ್ ಹೊರಟ ಅಪ್ಪ ಅಂದಿಲ್ವಾ
ನೀ ಬಾಳಾ ಧೈರ್ಯಸ್ಥೆ


ಕೆನ್ನೆಸವರಿ ನಾವಿದೀವಂತ
ಅವರ್ಯಾಕೆ ನನಗೆ ಹೇಳುದ್ರು
ಅವರ್ತ್ಲೆ ಕೆಡತಾ ಕೇಳು
ನಮ್ಮಪ್ಪಿಲ್ವಾ ನಂಗೆ

ಅಮ್ಮ ನೀನು ಅಳ್ಬ್ಯಾಡಿನ್ನು
ಬರ್ತಾನಪ್ಪ ತಿಂಗ್ಳಿಗೆ
ನಾನು ನೀನು ಅವನೂ ಕೂಡಿ
ಹುಬ್ಲಿಪ್ಯಾಟಿ ಸುತ್ತಿ
ಮುದ್ದುಮಾಡಿ ನನ್ನ ಕೇಳ್ತಾನೆ
ಮಗಳೇ ನಿನ್ಯಾರವ್ವ
ಎದೆಎತ್ತಿ ಹೇಳ್ತಿನವಂಗೆ
ಹನುಮಪ್ಪನ ಮಗಳು

ನಡೆಯವ್ವ ಮನೆಗೆ ಯಾಕೋದುಃಖ
ಎದಿವದರ್ತ್ರ್ಯತಿ; ಅಪ್ಪಗೊಂದು
ಫೋನ್ಮಾಡಿ ಇಲ್ಲಿ ಕಥೆ ಹೇಳ್ತಿನಿ

ಟಿಪ್ಪಣಿ : ಲಾನ್ಸ್‌ನಾಯಕ್ ಶ್ರೀ ಹನುಮಂತಪ್ಪ ಕೊಪ್ಪದ್ ಅವರು, (01–6–1983 ರಿಂದ 11–2–2016) ಸಿಯಾಚಿನ್ ನೀರ್ಗಲ್ಲಿನಲ್ಲಿ, 19600 ಅಡಿ ಎತ್ತರದಲ್ಲಿ ಹಿಮಪಾತಕ್ಕೆ 3–2–2016 ರಂದು ಸಿಕ್ಕಿಕೊಂಡರು. ಹಿಮದಲ್ಲಿ 35 ಅಡಿ ಆಳದಲ್ಲಿ ಮೈನಸ್ 45 ಡಿಗ್ರಿ ಶೀತದಲ್ಲಿ ಆರುದಿನ ಬದುಕಿದ್ದರು. 8–2–2016ರಂದು ದೆಹಲಿಗೆ ವರ್ಗಾಯಿಸಲಾಗಿತ್ತು. ಆದರೆ ಅವರು 11–2–2016 ರಂದು ವೀರಮರಣವನ್ನಪ್ಪಿದರು. ಭಾರತ ಸರ್ಕಾರವು ಶ್ರೀ ಹನುಮಂತಪ್ಪ ಅವರ ಶೌರ್ಯಕ್ಕೆ "ಸೇನಾಮೆಡಲ್" ಇತ್ತು ಗೌರವಿಸಿದೆ. ಇವರು ಧಾರವಾಡ ಜಿಲ್ಲೆಯ ಬೆಟದೂರಿನವರು.

30. ಚಾರ್ಲಿಯ ನಾಯ್ಗಳು



ಬೀದಿಲೆರಡು ನಾಯಿ
ಚಾರ್ಲಿ ಅವನ ರಾಣಿ
ಆಕಾಶಕ್ಕೆ ಬೊಗಳ್ತಾವೆ
ರಸ್ತೇಲೆಲ್ಲಾ ಓಡಾಡ್ತಾವೆ

ಪಕ್ಕದ್ಬೀದಿ ನಾಯಿ ಕೂಡ
ಒಂದೇ ಸಮ್ನೆ ಜಗಳಾಟ
ರಾತ್ರಿಯೆಲ್ಲಾ ಬೌವಾಟ
ಬೆಳಗ್ಗೆಯಲ್ಲಾ ನಿದ್ರಾಟ

ರೋಡಿಗ್ಯಾರು ಬರುವಂತಿಲ್ಲ
ಸ್ಕೂಟ್ರೂ ಆಟೋ ಬಲುಕಷ್ಟ
ಕಾರಿನವ್ರಿಗೂ ಬಿಡೋದಿಲ್ಲ
ಧಮ್ಮನೆ ಧಮಕಿ ಹಾಕ್ತಾವೆ

ಎಲ್ಲರೂ ಕೊಡ್ತಾರೆ ಬಿಸ್ಕಿಟ್ಟು
ಬಾಲದ ಕುಣಿತ ನೋಡ್ಬಿಟ್ಟು
ರಾಣಿಗ್ಯಾಕೊ ಹೊಟ್ಟೆದಪ್ಪ
ಪಾಪುಗಳು ಬರತ್ತೆ ತಾಳಪ್ಪ

ಚಾರ್ಲಿ ಹಿಂದೆ ರಾಣಿ ಮುಂದೆ
ಅವಳ ನಡಿಗೆ ಠೀವಿ ಹಾಗೆ
ಅಲ್ನೋಡಿ ಚಾರ್ಲಿ ಒಬ್ನೆ ಬಂದ
ರಾಣಿ ಎಲ್ಲಂದ್ರೆ ಬೆಪ್ಪನೆ ಭಡವ

ಯಾರೋ ಅಂದ್ರು ಬನ್ರೋ ಇಲ್ಲಿ
ಮಾವಿನ ಮರದ ಬೊಡ್ಡೆಯಲ್ಲಿ
ಎಂಟೋ ಹತ್ತೋ ಮರಿಗಳು
ಒಂದರಮ್ಯಾಲೊಂದ್ ರಾಶಿರಾಶಿ

ಅಲ್ಲಿ ರಾಣಿ ಹಾಕಿ ಠಿಕಾಣಿ
ಹತ್ರಹೋದ್ರೆ ಗುರ್ ಗುರ್ ವಾಣಿ
ದೂರದಲಿ ನಿಂತು ಹಾಕಿದ್ದು ಕೇಕೆ
ಮಕ್ಕಳ್ದೆಲ್ಲಾ ದೊಡ್ಡ ಚಪ್ಪಾಳೆ

ಬೊಡ್ಡೆಯಲ್ಲಿ ಮರಿಯೆಲ್ಲ ಖಾಲಿ
ಅವಿಸಿದ್ದಾಳೆ ಗ್ಯಾರೇಜ್ ಹಿಂದೆ
ಗೋಣಿ ಹಾಸಿ ಹಾಲನಿಟ್ಟು
ಟಾರ್ಪಾಲ್ಹಾಕಿ ಜೈ ಅಂದ್ರು

ಎರಡು ದಿನದಲಿ ಅಲ್ಲೂ ಖಾಲಿ
ಕಚ್ಕೊಂಡ್ಹೋಗಿ ಮತ್ತೆಲ್ಲಿಟ್ಳೋ
ಬಂದ ಬಂತು ಭಾರಿ ಮಳೆಯು
ಮೋರಿಯಲ್ಲಾ ತುಂಬೋಯ್ತು

ಬೀದಿಯೆಲ್ಲ ಮಕ್ಳು ಹುಡುಕಿ
ಯಾರೋ ಅಂದ್ರು ನಾಯಿಮರಿ
ಕೊಚ್ಕೋಯ್ತು ದೊಡ್ಡ ಮೋರೀಲಿ
ಭೋರೆಂದತ್ತರು ಮಕ್ಳು ಬೀದೀಲಿ

ಚಾರ್ಲಿ ಮತ್ತವನ ರಾಣಿ
ಈಗೊ ಬಂದ್ರೊ ನೋಡಿ
ಏನೂ ಇಲ್ಲದಂಗ್ ಬಾಲವಾಡ್ಸಿ
ಬೇಜಾರಿತ್ತಾ ದೇವ್ರಿಗೊತ್ತು

ರಾಣಿ ಆಕಾಶಕ್ಕೆ ಮುಖಮಾಡಿ
ಒಂದೇ ಸಮನೆ ಬೌಬೌ ಅಡಿ
ಕ್ಯುಂಕ್ಯುಂ ಅಂತು ಯಾರಿಗೊತ್ತು
ಮಳೆಯಲ್ಲಾಯ್ತು ಅನರ್ಥ

31 ಅಮ್ಮನೆಂಬ ಹುಲಿ



ಚಳಿಗಾಲದಲಿ ಅಮ್ಮ
ಮುದುಡಿ ಮಲಗಿದರೆ ಚೆನ್ನ
ಮುಸುಕೆಳೆದು ಮುಡಿವರೆಗೆ
ಕನಸು ಕಾಣುವುದು ಚೆನ್ನ

ರಾತ್ರಿ ಬಾರದ ನಿದ್ದೆ
ಬೆಳಗು ಜಾವದಿ ಹಿಡಿದು
ಎಂತಹ ಸುಂದರ ಲೋಕ
ಕನಸು ಮಾಯಾ ಬಜಾರು

ಜಗದ ಅಂಗಳ ಸುತ್ತಿ
ಚಂದ್ರಮನ ಬಳಸಿ
ಜಿಗಿದಿಹೆನು ಆಗಸಕೆ
ಹೊಂಬಾನ ಸೋಬಾನಕೆ


ಅಲ್ಲಿ ಶಾಲೆಯು ಇಲ್ಲ
ಹೋಂವರ್ಕ್ ಮಿಸ್ಸಿಲ್ಲ
ಆಟ ಚಾಕೋಲೇಟು ಬೇಕು
ಸಹಪಾಠಿಯ ಕೇಕೆಯು ಎಲ್ಲ

ಹೊದ್ದಿಕೆಯ ಸರ್ರನೆಳೆದು
ಅಂಗಾಲ ಕೆರೆಯುವೆ ಏಕೆ
ಮುಖಕೆ ಎರಚಿ ತಣ್ಣೀರು
ಹೋಂವರ್ಕ್ ಜ್ಞಾಪಿಸುವೆಯಲ್ಲೆ

ಚಳಿಗಾಲ ಬಲು ಚೆನ್ನ
ಕತ್ತಲು ಬಲು ಬೇಗ
ಬಿಸಿಸಾರು ಬಿಸಿಅನ್ನ
ಸವಿಸುಖದ ನಿದ್ದೆಯಮ್ಮ

ಏಕೆ ಮಾಡಿದನು ಭಗವಂತ
ಅಮ್ಮನೆಂಬ ಹುಲಿಯನ್ನ
ಖುಷಿ ಸುಖವ ಕದಡಿ
ಕಳೆವಳೆನ್ನ ನಿದ್ದೆಯಮ್ಮ

32. ದಸರೆಗೆ ಹೋಗೋಣ ಬಾ



ಅಮ್ಮನಿಗಾಯಿತು ಬಲು ಬೇಸರವು
ಆದಿಗೆ ಬಂದಿತು ದಸರೆಯ ರಜವು
ಬಂದನು ಓಡಿ ಚೀಲವ ಬಿಸುಡಿ
ಟೂರಿಗೆ ಹೋಗೋಣ ನಾನು ರೆಡಿ

ಚೆನ್ನೈ ಮುಂಬಯಿ ಕಲ್ಕತ್ತ ದೆಹಲಿ
ಹೋಗುವುದೆಂದರೆ ಯಾರಿಹರಲ್ಲಿ
ಅಜ್ಜಿಯು ಇರುವಳು ಮೈಸೂರಲ್ಲಿ
ಹೋಗುವ ಈಗ ಅಪ್ಪನ ಕೂಡಾ

ಅಜ್ಜಿಯು ಕತೆಯನು ಹೇಳುವಳು
ತರತರ ಬೊಂಬೆಯ ಇಟ್ಟಿಹಳು
ಅಂಬಾರಿಯಾನೆ ಪಟ್ಟದ ದೊರೆಯು
ಕನ್ನಂಬಾಡಿ, ನೀನೇಕಮ್ಮ ಇಟ್ಟಿಲ್ಲ

ಸಂಜೆಯ ಪೂಜೆಗೆ ರುಚಿರುಚಿ ಚರಪು
ತಾತನ ಮಂತ್ರವು ಮಾಯಾಮಾಟ
ಮಾವನು ಕರೆವನು ಚಾಮುಂಡಿಗೆ
ಅತ್ತೆಯು ಕರೆವಳು ಎಕ್ಸಿಬಿಷನ್ನಿಗೆ

ಅರಮನೆಯಲ್ಲಿ ಝಗಮಗ ಬೆಳಕು
ವೃತ್ತವೃತ್ತಕೂ ಬಣ್ಣದ ಗಿಲೀಟು
ಎಲ್ಲೆಡೆ ಕುಣಿತವು ಹಾಡುಹಬ್ಬವು
ತುಳುಕುವ ನಗರವು ಮೈಸೂರಂತೆ

ಯಾರಿವರಮ್ಮಾ ಪೇಟದ ದೊರೆಯು
ಮುಮ್ಮಡಿ, ನಾಲ್ವಡಿ, ಜಯಚಾಮೇಂದ್ರ
ಕನ್ನಂಬಾಡಿ ಕಟ್ಟಿದ ವಿಶ್ವೇಶರಾಯ
ಹೇಳಮ್ಮ ತೋರಮ್ಮ ಈ ಜಗ ಜನರಾ

ಕಾಟವ ಕೊಡೆನು ಮೊಬೈಲು ಬೇಡೆನು
ಬೆಂಡು ಬತ್ತಾಸು ತಿಂಡಿಯ ಕೇಳೆನು
ಅಜ್ಜಿಯ ಲಾಲಿಗೆ ತಾತನ ಪ್ರೀತಿಗೆ
ಜಗದೊಳಗೆಲ್ಲಿ ಸರಿಜೋಡಮ್ಮ

ಬೇಸರ ಬೇಡ ಕಾಡುವುದಿಲ್ಲ
ರಚ್ಚೆಪಚ್ಚೆ ಹಿಡಿಯುವುದಿಲ್ಲ
ಜಾಣ ಆದಿಯು ತಂಟೆಯೇ ಇಲ್ಲ
ನನ್ನಂಥ ಮಗನೀ ಜಗದೊಳಗಿಲ್ಲ

ಟಾಕುಟೀಕಲಿ ನಾನಂತೂ ಸಿದ್ಧ
ಮಾವನಿಗೀಗಲೆ ಫೋನನು ಮಾಡು
ಬೇಗನೆ ಹೊರಡುವ ಮೈಸೂರ್ಕಡೆಗೆ
ದಸರೆಯ ಖುಷಿಯಲಿ ಕುಣಿಯುತಲಿ.

33 ಕಪ್ಪೆಗಳ ಮದುವೆ



ಬಾರೋ.. ಬಾರೋ.. ಮಳೆರಾಯ
ಕುಡಿಯಲು ಹನಿಯೂ ನೀರಿಲ್ಲ
ಬತ್ತಿದ ಕರೆಗಳು ಬಾಡಿದ ಗಿಡಗಳು
ಬಸವಳಿದಿದೆ ಬದುಕು ನೋಡಿಲ್ಲಿ

ಬಂದನು ಗುಡುಗುಡು ಪೂಜಾರಿ
ಗಂಟೆಯ ಬಾರಿಸಿ ನುಡಿದಿಹನು
ಕಪ್ಪೆಯ ಮದುವೆ ಮಾಡಿಸಿರಿ
ಹರಸುವ ವರುಣ ಹನಿಯಾಗಿ

ಹೆಣ್ಣಪ್ಪೆ ಗಂಡ್ಗಪ್ಪೆ ಹುಡುಕಿದರು
ಕಪ್ಪನೆ ಕಪ್ಪೆ ಗಪ್ಪನೆ ಹಿಡಿದು
ಢೋಲು ತುತ್ತೂರಿ ಊದಿದರು
ತಾವೇ ತಾಳಿಯ ಕಟ್ಟಿದರು

ಬಂದೇ ಬಂದನು ಮಳೆರಾಯ
ಜಗಕೆ ವರುಣನ ಪದಾಘಾತ
ಕೊಚ್ಚಿತು ಗದ್ದೆ ಮನೆ ಮಾರು
ಹುಚ್ಚಲಿ ಕುಣಿಯಿತು ನದಿನದವು

ಮಳೆಗಾಗಿ ಕಾದಿತ್ತು ಕಪ್ಪೆಗಳು
ಮಳೆ ಬಂದೊಡನೆ ಕೂಡಿದವು
ವಟರ್ ವಟರ್ ಎನುತ ಹಾಡಿದವು
ಮನುಜರ ಮದುವೆಗೆ ನಕ್ಕೆನಕ್ಕವು.

ಸಾಕೋ ಸಾಕೋ ಮಳೆರಾಯ
ನಿಲ್ಲಿಸು ನಿನ್ನೀ ಆರುಭಟವ
ನುಡಿಯುತ ಬಂದನು ಪೂಜಾರಿ
ಕಪ್ಪೆಯ ಮದುವೆ ಮುರಿದುಬಿಡಿ

ಶಿವಶಕ್ತಿ ಮಂಡಲಿ ಜನ ಭಕ್ತರು
ಕೆರೆ ಕುಂಟೆಲಿ ಹುಡುಕಿದರು
ಭಾವಿ ನದಿಯನೆ ಬಗೆದಿಟ್ಟರು
ಸಿಕ್ಕಲೆ ಇಲ್ಲ ಕಪ್ಪೆಯ ಜೋಡಿ

ಪ್ರವಾಹದಲಿ ಮುಳುಗಿದ ಮಂದಿ
ದಂಪತಿ ಕಪ್ಪೆ ಕಾಣದೆ ಕೊರಗಿದರು
ಮಣ್ಣಿನ ಗಂಡ ಹೆಂಡತಿ ಮಾಡಿಕೊಡಿ
ವಿಚ್ಛೇದನ ಮಂತ್ರವ ಗುಣಿಸಿಬಿಡಿ

ನೀರಿಗೆ ಮದುವೆಯ ಮಾಡಿದವರು
ನಿಲ್ಲಲು ಮದುವೆಯ ಮುರಿದಿಹರು
ಮೌಢ್ಯಕೆ ಮೌಲ್ಯವ ಕಟ್ಟಿ ಹಾಡಿಹರು
ವಟರ್ ವಟರ್ ಎನ್ನುತ ಕುಣಿದಿಹರು

ಮಂತ್ರಕೆ ಉದುರದು ಮಾವಿನಕಾಯಿ
ಬುದ್ಧಿ ವಿವೇಕಕೆ ಸರಸ್ವತಿ ಸಹಕಾರಿ
ವೈಜ್ಞಾನಿಕ ಚಿಂತನೆ ಬೆಳೆಯಲಿ ನಾಡಲಿ
ವಿಶ್ವದಿ ಬೆಳಬೆಳಗಲಿ ಭಾರತ ಜಾಗೃತಿ

34. ಅಬ್ಬುತನ ಹಾಡು

('ಪುಣ್ಯಕೋಟಿ' ಜಾನಪದ ಕವಿಗೆ ನಮಿಸಿ ಮತ್ತು ಕ್ಷಮೆಕೋ



ಧರಣಿ ಮಂಡಲ ಮಧ್ಯದೊಳಗೆ
ಇರುವ ಕರ್ನಾಟ ದೇಶದೊಳು
ಇನ್ನೂ ಇರುವ ಪುಣ್ಯಕೋಟಿಯೆ
ನನ್ನ ಕಥೆಯಿದು ನೆನಪಿಗೆ

ಸತ್ಯದೇವನ ಅರ್ಚಿಸುತಾ
ಮಗುವಿಗೆ ಮೊಲೆಯ ಕೊಡುತಲಿ
ಚನ್ನಕೃಷ್ಣನ ಭಜಿಸುತಿರಲಿ
ಇರುವುದೆನಗೆ ಸಂತಸವು ಅಕ್ಕನೆ

ಎಂತು ಇಹನು ನಿನ್ನ ಕಂದನು
ಚಂದವಿಹನೆ ಗೊಲ್ಲಗೌಡನು
ಇರುವರೆಂತು ಅಮ್ಮ ಅಕ್ಕರು
ನಿನ್ನ ತಾಯೊಡಹುಟ್ಟಿದವರು

ಹಬ್ಬಿದಾಮಲೆ ಮಧ್ಯದಲ್ಲಿ
ಹಸಿದು ನಾ ಕಾದಿದ್ದೆನಂದು
ಅಪ್ಪ ತರುವನು ಆಹಾರವೆಂದು
ಕಾದಿದ್ದರು ಹಸಿದ ನನ್ನ ಮರಿಗಳು

ಹಸಿದ ಹೊಟ್ಟೆಗೆ ಸ್ವಲ್ಪದೇಹವಿದೆಯ
ಹಸುವು ಹಾಲ್ಗಳ ಹಸಿದ ಇದ್ದರೂ
ನಿನ್ನ ಕರುವ ಹಸಿವ ತಾಳಲು
ಸಿದ್ಧಳಿದ್ದವೆ ಒಪ್ಪಿಸುವುದಕೆ

ಹಸಿದ ಹೊಟ್ಟೆಯು ಮರೆಯಬಲ್ಲು
ನಿನ್ನ ಮಾತನು ನಂಬಿದವನೆ
ಸತ್ಯವಾಗಿ ನೀ ತಿರುಗಿ ಬಂದೆ
ನೀನು ನನಗಿತ್ತ ಉಡುಪು


ಎಂತು ಕರೆದೆ ನೀನು ನನ್ನನು
ಸಂತವ್ಯಾಘ್ರನು ಅಂದೆಯಲ್ಲವೆ
ನಿನ್ನ ಸತ್ಯಕೆ ನಾನು ಮೆಚ್ಚಿ
ಬೇರೆ ಹುಲಿಯಂತಲ್ಲದೆ ಬಿಟ್ಟೆನು

ಇನ್ನು ನಿನ್ನ ಕೊಂದು ತಿಂದರೆ
ಮೆಚ್ಚನು ಪರಮಾತ್ಮನೆಂದು
ಕಣ್ಣನೀರು ಸುರಿಸಿ ನೊಂದು
ಹಾರಿ ಪ್ರಾಣವ ಬಿಟ್ಟೆನು

ತಬ್ಬಲಿಗಳನ್ನ ಮಡದಿ ಮಕ್ಕಳು
ಮಕ್ಕಳಾಟವ ಕಾಣದಾದೆ
ಬೇಟೆಯಾಟವ ಕಲಿಸುವರಾರು
ಅವರ ಒಡಲಿಗೆ ಅವರೆ ತಂದೆ

ಕವಿಯು ಕಂಡ ಖೂಳವ್ಯಾಘ್ರನು
ಮಕ್ಕಳಿಗೆ ನಾ ದುಷ್ಟವ್ಯಾಘ್ರನು
ನಾನು ಎಂತು ನೀನೆ ಹೇಳೆ
ನಿನ್ನ ಮಾತದು ಸತ್ಯವು

ಕಾಳಿಂಗನೊಂಶದ ಗೊಲ್ಲರೊಳಗೆ
ನಿನ್ನವಂಶದ ಗೋವ್ಗಳೊಳಗೆ
ಚನ್ನಕೃಷ್ಣನ ಹಾಡಿ ಭಜಿಸಿರಿ
ನನ್ನ ನೆನಪು ಮರೆಯಾಯಿತೆ ?



35. ಕೊರೊನ ಜಾಗೃತಿ ಲಾವಣಿ



ಬನ್ನಿ ಬನ್ನಿ ಭಾರತ ಮಕ್ಕಳೆ
ಕೇಳಿರಿ ಕೊರೊನ ಕಥೆಯನು
ನಿಮಗೆ ಜಗಕೆ ಇರಲಿ ಸುಖವು
ಪಾಲಿಸಿ ಸರ್ಕಾರದಾದೇಶವನು

ಮಹಾಮಾರಿ ಕೊರೊನ ಸಾಂಕ್ರಾಮಿಕವು
ಚೀನಾದಿಂದ ಹಬ್ಬಿ ದೇಶದೇಶಕೆ
ತಳ್ಳಿ ಜಗದ ಜನರ ಬಲು ಸಂಕಟಕ್ಕೆ
ಸರ್ಕಾರದ ಸವಾಲು ಏರಿದೆ ಮುಗಿಲಿಗೆ.

ನೆಗಡಿ ಕೆಮ್ಮು ಜ್ವರವು ಬಂದು
ಉಸಿರು ಆಡಲು ಕಷ್ಟವು
ಗಾಳಿಯಿಂದ ಸೋಂಕು ಹರಡಿ
ಕ್ಷಣಕ್ಷಣಕೆ ಜೀವ ಅಪಾಯವು

ಲಸಿಕೆಯಿಲ್ಲದೀ ರೋಗ ತಡೆ ಬಲುಕಷ್ಟವು
ಸೋಂಕಿತರ ದೂರವಿಟ್ಟು ಮಾಡಬೇಕು
ಉಪಚಾರ ಪ್ರತ್ಯೇಕವು; ತಡೆಯಬೇಕು
ಶಂಕಿತರ ಹುಡುಕಿ ಜಾಗ್ರತೆ ಕೊರೊನವು

ಮತ್ತೆ ಮತ್ತೆ ಸಾಬೂನಿಂದ ತೊಳೆಯಿರಿ ಕೈಯನು
ಸ್ವಚ್ಛವಿಡಿ ನಿಮ್ಮ ಸುತ್ತಮುತ್ತಲ ಪರಿಸರವನು
ಮುಟ್ಟಬೇಡಿರಿ ಕಣ್ಣು ಮೂಗು ಬಾಯನು
ಕೆಮ್ಮು ನೆಗಡಿಗೆ ಉಪಯೋಗಿಸಿ ಕರವಸ್ತ್ರವನು

ಹಾದಿಬೀದಿಯ ತಿನಿಸು ಬೇಡವೆನ್ನಿರಿ
ಮಾಲು ಹೋಟೇಲು ಸಿನಿಮಾ ತಿರುಗಬೇಡೆನ್ನಿರಿ
ನಾಟಕ ಗೀಟಕ, ಆಟಕೂಟ ಈಗ ಬೇಡವೆನ್ನಿರಿ
ಮನೆಯಲಿದ್ದು ಓದಿ ಬರೆದು ಯೋಗವನ್ನು ಮಾಡಿರಿ

ನಮಗಾಗಿ ದುಡಿಯುತಿಹರು ವೈದ್ಯರು ಸಿಬ್ಬಂದಿ
ಅಗತ್ಯ ಸೇವೆಯಲ್ಲಿ ಇರುವವರು ಹಲವಾರು ಮಂದಿ
ತಮ್ಮ ಸುಖವ ಪಕ್ಕಕ್ಕಿಟ್ಟು ತಮ್ಮ ಜೀವ ಪಣಕ್ಕಿಟ್ಟು
ಕೊರೊನ ವಿರುದ್ಧ ಶ್ರಮಿಸುತಿಹ ಎಲ್ಲರಿಗೂ ನಮಿಸುವ.

ಪ್ರಧಾನಿಯವರು ಕೂಡಿ ಎಲ್ಲ ದೇಶದ
ಹಿರಿಯರು, ಹಗಲು ಇರುಳು ಕಾಳಜಿಯಿಂದ
ಯೋಜನೆಯ ಮಾಡುತಿಹರು ಮಹಾಮಾರಿಯ
ಓಡಿಸಲು ; ಒಗ್ಗೂಡಿ ನಾವು ಸಹಕರಿಸೋಣ

ಶಿಸ್ತಿನಿಂದಲಿ ಜನ ಜಾಗೃತಿ ಮಾಡೋಣ
ಹಿಂದೆಂದೂ ಕಾಣದ ಈ ಮಹಾಮಾರಿಯನ್ನು
ಸಂಕಲ್ಪ ಸಂಯಮದಿಂದ ಎದುರಿಸೋಣ
ಕೊವಿಡನ್ನು ಜಗದಿ ತೆಗೆದು ಸ್ವಸ್ಥರಾಗೋಣ.

36. ಮೊಗ್ಲಿ ಬಂದನು ಮೈಸೂರ್ಗೆ



ಮೊಗ್ಲಿ ಬಂದನು ಮೈಸೂರ್ಗೆ
ಸ್ಕೌಟು ಜಾಂಬೂರಿ ನೋಡ್ಲಿಕ್ಕೆ
ಕಾಡಿನ ಗೆಳೆಯರ ಕೂಡಿಹನು
ಅಪ್ಪುವಿನ ಸ್ನೇಹವ ಬಯಸಿಹನು

ಚಾಮುಂಡಿಯ ಅರಮನೆ ನಗರಿ
ಬೃಂದಾವನ ಸುಂದರಿ ಕಾವೇರಿ
ಶ್ರೀಕುವೆಂಪು ರಾಮಾಯಣ ಗರಿಯು
ಸಂಗೀತ ಸಾಹಿತ್ಯ ಸಂಸ್ಕೃತಿಸಿರಿಯು

ಅಡಕನ ಹಳ್ಳಿಲಿ ಅರಳುವುದು
ಮಕ್ಕಳ ಕಲರವ ಕೇಳುವುದು
ರಾಷ್ಟ್ರಪತಿಗಳು ಹರಸುವರು
ಜನಜಾತ್ರೆಯೆ ಸೇರುವುದು

ಹದಿನೇಳನೇ ರಾಷ್ಟ್ರೀಯ ಜಾಂಬೂರಿ
ಎಂಟುದಿನದ ಸಂತಸ ಆನಂದದ ಫೇರಿ
ತರತರದಾಟವು ನಿತ್ಯ ಕವಾಯತು
ಕೂಡಿಬಾಳುವ ಕಲಿಕೆ ನಿಜಾಯತು

ಶಿಸ್ತು ಸದ್ಗುಣ ಸೇವಾಭಾವವು
ಮನುಜ ಜಾತಿ ತಾನೊಂದೆವಲವು
ಮೂವತ್ತು ಸಾವಿರ ಮಕ್ಕಳ ಮೇಳ
ಹಿರಿಯರ ಹರಕೆ ಸುಸ್ವರ ತಾಳ

ಕೂಡಿನಡೆವೆವು ನಾಳಿನ ಸುದಿನಕೆ
ಎಲ್ಲರ ಏಳಿಗೆ ನಮ್ಮಯ ಹೆಗಲಿಗೆ
ಕಬ್ಸ್‌ಗಳ ಶತಮಾನಕೆ ಈ ಸಂಮಾನ
ದಿಗಂತದಿ ಭಾರತಧ್ವಜ ಪ್ರಕಾಶಮಾನ

ಮಲ್ಲಿಗೆ ಮಸಾಲೆ ಗಂಧದ ಘಮಘಮ
ಮೊಗ್ಗಿಗೆ ಮಕ್ಕಳಿಗೆ ಜಾಂಬೂರಿ ಸಂಭ್ರಮ
ಕರ್ನಾಟಕ ಸ್ಕೌಟ್ಸ್ ಸಂಸ್ಥೆಗೆ ಜೈಜೈಯೆನ್ನಿ
ಸಂಗಮ ಸಂಚಲನ ಯಶಸಂಚಯವೆನ್ನಿ

ಟಿಪ್ಪಣಿ : ಮೈಸೂರಿನಲ್ಲಿ, ಡಿಸೆಂಬರ್ 27, 2016 ರಿಂದ ಜನವರಿ, 2, 2017 ರ ವರೆಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ 17ನೆಯ ರಾಷ್ಟ್ರೀಯ ಜಾಂಬೂರಿ ನಡೆಯಿತು. 1916 ರಲ್ಲಿ, 5 ರಿಂದ 10 ವರ್ಷದ ಮಕ್ಕಳ ವ್ಯಕ್ತಿತ್ವ ವಿಕಸನಕ್ಕಾಗಿ ಕಬ್ಸ್ ಅನ್ನು ಶ್ರೀ ಬೇಡನ್ ಪಾವೆಲ್ಲ್ ಅವರು ಆರಂಭಿಸಿದರು. ಜಾಂಬೊರಿಯ ಸಂದರ್ಭದಲ್ಲಿ ಕಬ್ಸ್ ಸ್ಥಾಪನೆಯ ಶತಮಾನೋತ್ಸವವನ್ನು ಅಂದಿನ ರಾಷ್ಟ್ರಪತಿ ಶ್ರೀ ಪ್ರಣವ್ ಕುಮಾರ್ ಮುಖರ್ಜಿ ಅವರು ಡಿಸೆಂಬರ್ 28 ರಂದು ಉದ್ಘಾಟಿಸಿದರು.

37. ಇಲಿಯ ಬೇಟೆ



ಸದ್ದು ಗದ್ದಲ ಮಾಡದೆ ಬಂತು ಮನೆಯೊಳಗೆ
ದಪ್ಪ ದೇಹದ ಉದ್ದ ಬಾಲದ ಇಲಿಯೊಂದು
ಉಗ್ರಾಣವು ಅಡಿಗೆಮನೆಯು ಅಕ್ಕಪಕ್ಕದೊಳಗೆ
ನುಸುಳಿತು ಇಲಿ ಹುಡುಕಿ ಸಂದಿಯೊಂದು

ಸದ್ದನು ಮಾಡದೆ ಸರಿದಾಡಿತು ಹುಡುಕುತ ಕಾಳನು
ಚಾಚಿ ಮೂಗನು ಮನೆಯ ಮೂಲೆಮೂಲೆಯೊಳಗೆ
ಅಕ್ಕಿಯ ಚೀಲದಿ ಪಟ್ಟನೆ ಕೂತು ಇಣುಕಿತು ಹೊರಗೆ
ಹೊಟ್ಟೆಯು ಬಿರಿಯಿತು ನಿದ್ದೆಯು ಬಂದಿತು ಆ ಕ್ಷಣಕೆ

ಬೆಳಗಿನ ಜಾವಕೆ ಯಾರೋ ಬಂದರು ರಾಮ ರಾಮ
ಪಾತ್ರೆ ಸದ್ದು ಅಡಿಗೆಗೆ ಸಜ್ಜು ಅಕ್ಕಿಯ ಡಬ್ಬಕೆ ಕೈಹಾಕಿ
ಅಯ್ಯೋ ಅಯ್ಯೋ ಡಬ್ಬದಲ್ಲಿಲಿಯು ಹಾರಿ ಹೊಹಾರಿ
ಡಬ್ಬವು ಉರುಳಿತು ಅಡಿಗೆ ಮನೆಯಲಿ ದಢ ದಢವು

ಗಂಡನು ಬಂದನು ಮಕ್ಕಳು ಬಂದರು ಏನಾಯ್ತು
ಇಲಿಇಲಿ ನೋಡಿ ಓಡಿತು ಅಲ್ಲಿ ಸಂದಿಯ ಸೇರಿತು
ಕೋಲನು ತಂದರು ಪೊರಕೆಯ ತಂದರು ಗೋಣಿ
ಚೀಲವು ಬಗಲೊಳಗೆ, ಹೊಡೆತವು ನೆಲದೊಳಗೆ

ಘಮಘಮ ವಡೆಯು ಬೋನಿನ ಒಳಗೆ ಇಲಿ ಹೊರಗೆ
ಅಲ್ಲಿಂದಿಲ್ಲಿಗೆ ಹುಡುಕುತ ನೆಗೆಯುತ ರಸಕವಳ
ಕೆರೆಯುತ ಕಡಿಯುತ ಬಟ್ಟೆಯ ಹರಿಯುತ ಕಟ್ಟಿತು
ರಾಜ್ಯವ ಮನೆಯೊಳಗೆ ತಿಂಡಿ ರುಚಿಸವಿಯೊಳಗೆ

ಸಿಕ್ಕದು ಇಲಿಯು ಕಳೆಯಿತು ನೆಮ್ಮದಿ ನಿಟ್ಟುಸಿರು
ಅಲ್ಲಿ ಇಲ್ಲಿ ಎಲ್ಲೆಲ್ಲಿ ಇಲಿಯು ಹುಡುಕಿ ಸುಸ್ತೋಸುಸ್ತು
ಪಾಷಾಣ ಬೋನು ದಕ್ಕದು ಬಲಿಯು ನಿಟ್ಟುಸಿರು
ಅಕ್ಕಿ ಕಾಳು ಹಣ್ಣು ಬನ್ನು ಇಲಿಗದುವೇ ಜಬರ್ದಸ್ತು

ಕಾದೆ ಕಾದರು ಇಲಿ ಬಲಿ ಹಾಕಲು ಹಗಲಿರುಳು
ಮುಚ್ಚದೆ ಕಣ್ಣನು ಸಂದಿ ಸಂದಿಗೆ ಕೋಲನು ತದಕುತ
ಚಿಂತನ ಮಂಥನ ಮಾಡುತ ನಡೆಯುತ ಯಜಮಾನ
ಥಟ್ಟನೇ ತುಳಿದನು ಸತ್ತೇಹೋಯಿತು ಇಲಿಯಣ್ಣ

38. ಆದಿ ಸೈಕಲ್ ಕಲಿಕೆ



ಬಾರೋ ಆದಿ
ಸೈಕಲ್ ಕಲಿಸ್ತಿನ್
ಮೂರ್ಕಾಲ್ ಇನ್ಸಾಕು

ದೊಡ್ಡೋನಾದ್ ಮೇಲ್
ನಾಕ್ಕಾಲ್ ತಕ್ಕೊ
ಈಗೆರಡೇ ಸಾಕು

ಸೈಕಲ್ ತಳ್ಕೊದ್
ಮೊದಲ್ ನೀನ್ ಕಲ್ಕೊ
ತಳ್ಳೋ ಬ್ಯಾಲೆನ್ಸ್ ಬರಲೆ

ತಳ್ತಾತಳ್ತಾ ಎಡ್ಗಾಲ್
ಪೆಡಲ್ಗೆ, ಬಲ
ಗಾಲ್ನಲ್ಲಿ ಗಾಡಿ ತಳ್ಳು

ಹೋಗ್ತಾಹೋಗ್ತಾ ಕತ್ತರಿಕಾಲು
ಬಾರ್ನಾರ್ ಭದ್ರವಾಗಿ ಹಿಡ್ಕೋ
ಸ್ವಲ್ಪ ವಾಲಿದ್ರೂ ಬ್ಯಾಲೆನ್ಸ್
ಬರತ್ತೆ ಚಿಂತೆ ಬೇಡ ನಿಂಗೆ

ಎಡಗಾಲ್ ಪೆಡ್ಲಲ್ಲಿಟ್ಟು
ಬಲಗಾಲೆತ್ತಿ ಆ ಕಡೆ ಇಡು
ಮೆಲ್ಗೆ ಮೆಲ್ಗೆ ಹೋಗು

ಬೀಳೋದುಂಟು ತರಚೋದುಂಟು
ಕಾಲೊಮ್ಮೆ ಮುರಿಬೌದು
ಗಾಯಗೀಯ ಆಗ್ದೆ ಹೆಂಗೆ
ಸೈಕಲ್ಲು ತಾನೆ ಬರೋದು

ರೋಡಲ್ ತುಂಬಾ ಗಾಡಿ
ಇರತ್ತೆ ಹುಷಾರು ಮರಿ
ಅಡ್ಡಾದಿಡ್ಡಿ ಓಡಿಸೋರು ಜಾಸ್ತಿ
ಕೈಕಾಲಿರಲಿ ಭದ್ರ

ಹೊಡಿತಾ ಹೊಡಿತಾ
ಪೈಲ್ವಾನ್ ಆಗ್ತಿ
ದಾರಿ ಛಿದ್ರಛಿದ್ರಾ



39. ಆದಿಯ ಡೌಟುಗಳು



ಕಾಗೆಯಾಕೆ ಕಪ್ಪು ಅಮ್ಮ
ಗಿಳಿಯು ಬಣ್ಣ ಬಣ್ಣ
ಒಂಟೆಗೆ ಯಾಕೆ ಉದ್ದಾ....ಕಾಲು
ಜೀರಾಫೇಗೆ ಉದ್ದಾ.........ಕತ್ತು

ಕಾಗೆಹಂಗೆ ಕೋಗಿಲೆ ಕಪ್ಪು
ಕೂಗೋದ್ಯಾಕೆ ಕೂಹೂ..ಕೂಹೂ..
ಕಾಗೆ ಕೂಗೊ ಒರಟು ಕಾವ್..ಕಾವ್..
ಪಾಪ ಅದರದ್ದೇನು ತಪ್ಪು

ಬೆಕ್ಕುಮರಿಯು ಅಳೊದಂತು
ನನ್ನಂಗೆ ಕೇಳ್ತತ್ತಮ್ಮಾ
ಅದು ನನ್ನ ತಮ್ಮಾನಾ

ಕಾಗೆ ಗುಬ್ಬಿ ಕಥೆನಾ ಅಜ್ಜಿ
ಹೇಳಿದ್ಲು ನಿನ್ನೆ ರಾತ್ರೆ
ಕಾಗಕ್ಕನೆಲ್ಲೋ ನೋಡಿದೀನಿ
ಗುಬ್ಬಕ್ಕ ಅಂದ್ರೆ ಯಾರಮ್ಮಾ

ಮರ ಗೊತ್ತು ಕೋತಿ ಗೊತ್ತು
ಮರದ ಮೇಲೆ ಕೋತಿ ಡ್ಯಾನ್ಸು
ತಾತ ಹೇಳಿದ್ ಮರಕೋತಿ
ಆಟ ಅಂದ್ರೆ ಇದೇನಾ ಅಮ್ಮ

ಚೌಲಮಾಡಿ ನನ್ಗೆ ಉದ್ದಾ
ಕೂದಲು ಕಟ್ ಕಟ್....
ಚೌಲಾ ಇಲ್ದೆ ಶಾಂತಿಗೇಕೆ
ಬಾಬ್ ಕಟ್ ಕಟ್..............

ಇಪ್ಪತ್ತು ಗೀಚಿಗೆ ಒಂದು ಆಟ
ಸೋತ್ರೆ ಕೈಕಾಸ್ ಬೇಕು
ಅಂತಾರಲ್ಲ ಮೂಲೆಮನೆ ಆಂಟಿ
ಅವರ ಮನೇಲಿದ್ಯಾ ಒವನ್ನು

ಅಮ್ಮ ಯಾಕೋ ತುಂಬಾ
ಡೌಟು ಅಪ್ಪನ್ನ ಕೇಳೇ ಬಿಡ್ಲಾ
ಅವರಿಗೇನ್ ಗೊತ್ತು ನಿನ್ನಾಗೆ
ಥೇಟು ಡೌಟಪ್ಪ ಅವರಲ್ವಾ

40. ಆದಿ ಕಿತಾಪತಿ



ಅಜ್ಜಿ ನೀ ನಿನ್ನೆ ಕೊಟ್ಟ
ಲಡ್ಡು ತುಂಬಾ ಸ್ವೀಟಾಗಿತ್ತು
ರಾತ್ರಿ ತಾತ ಮತ್ತೆರಡು
ಕೊಟ್ಟ ಬೊ ಪಸಂದಾಗಿತ್ತು
ತಾನೆರಡು ತಿಂದು ಮೆಲ್ಲಗೆ
ಅಜ್ಜಿಗೆ ಹೇಳಬ್ಯಾಡ ಅಂದ
ಯಾಕಜ್ಜಿ ತಾತಂಗೆ ಬಯ್ಯತಿಯಾ .

ಅಮ್ಮ ಅಜ್ಜಿಹಂಗೆ
ನನ್ನ ಹಲ್ಲು ತೆಗೆದು
ಹೊರಗೆ ಫಳಫಳಾಂತ
ಉಜ್ಜು ಬೆಳ್ಳಗೆ ಅಜ್ಜಿದಾಗತ್ತೆ
ನಂದಾಗಲ್ಲ ಏನ್ಮಾಟ್ಟು

ಕಾಗೆ ಏಕೆ ಇಷ್ಟೊಂದು ಕಪ್ಪು
ಪೌಡರ್ ಹಚ್ಕೊಲ್ವ ಅದರಮ್ಮ
ನಾಯಿಬಾಲ ಡೊಂಕೇಕಮ್ಮ
ಸ್ವಲ್ಪ ಇಸ್ತ್ರಿ ಮಾಡೋಣ್ವಾ

ಪಕ್ಕದಮನೆ ಶಾಂತಿಗೇಕೆ
ಅಷ್ಟು ಉದ್ದನೆ ತಲೆಬಾಲ
ಬ್ಯಾಡಾಂದ್ರು ಮಾಡ್ಸಿ ಚೌಲ
ಕತ್ತರಿಸಿಬಿಟ್ಟೆ ನನ್ನ ತಲೆಕೂದ್ಲ

41. ಟಿಪ್ಟಾಪ್ ಆದಿ



ಶಾಲೆಗೆ ಹೊರಟನು ಆದಿ
ಮನೇಲಿ ರಂಪರಾಡಿ
ತಿಂದನು ಬನ್ನನು ಕಾಡಿ
ನಾಳೆ ಹೊಗುವೆ ಹಾಡಿ
ಹೋಂವರ್ಕಿಲ್ಲ ಮಾಡಿ
ಪುಸ್ತಕ ರಾಶಿ ಗಾಡಿ
ಜ್ಞಾನವನೆಲ್ಲ ತೋಡಿ
ತುಂಬ್ತಾರಾ ಮೋಡಿ

ಫೀಸಿಗೆ ಹಣದ ಜಾಡಿ
ಟಿಪ್ಟಾಪ್ ಶಾಲೆ ನೋಡಿ
ಆಟಕೆ ಗೆಳೆಯರ ಜೋಡಿ
ಕೊಚಕೊಚವೆನ್ನುವ ಚಾಡಿ

ಇಂಗ್ಲೀಷನ್ನೇ ಆಡಿ
ಕನ್ನಡ ದೂರಾ ಇಡಿ
ಐಟಿ ಐಐಟಿ ಏಣಿಯಿಡಿ
ವಿದೇಶಿ ಕನಸು ನೋಡಿ

ಇಂದಿನ ರಂಪರಾಡಿ
ನಾಳಿನ ಕಂಪಮಾಡಿ
ಜಾಣ್ಮೆಯ ಹೊನ್ನಕಿಡಿ
ಆದಿಗೀಗ ದಾರಿಕೊಡಿ

42. ಆದಿ ಅನಾದಿ



ತರಲೆ ತಿಮ್ಮಣ್ಣ ಆದಿ
ಕುಣಿದು ಕುಣಿಸೂ ಹಾದಿ

ಕೊಚಕೊಚ ಮಾತಿನ ಮಲ್ಲ
ಸಿಡಿವ ಬಾಗಿದ ಹುಬ್ಬಿನ ಬಿಲ್ಲ

ಕಣ್ಣಂಚಲಿ ಬೀರುವ ನೋಟ
ಕಿರುನಗೆ ಮೋಡಿಯ ಮಾಟ

ಹಸಿದರೆ ಬೇಕು ಅಮ್ಮನ ಸೆರಗು
ತಿರುಗಲು ಬೇಕು ತಾತನ ಮೆರಗು
ಮೊಮ್ಮಗನಾಟ ಅಜ್ಜಿಗೆ ಬೆರಗು
ಮುದ್ದಿನ ಆಟಕೆ ಎಲ್ಲರೂ ಕರಗು

ತಿನ್ನಲು ಬೇಕಂತೆ ಚಾಕೊಲೇಟು
ಮುಖಕೆ ಮೆತ್ತಿರೆ ಅಮ್ಮನ ಏಟು

ಪಟಾಕಿಯೆಂದರೆ ಕುಣಿಯುವನು
ಢಬ ...ಢಬ ..ಸದ್ದಿಗೆ ಓಡುವನು

ಖುಷಿಯಲಿ ಶಾಲೆಗೆ ಹೋಗುವನು
ಆಡಿ ಬಾಡಿ ಮಧ್ಯಾಹ್ನ ಮರಳುವನು

ರಾಮಜ್ಜಿ ಮನೆಯ ಚಿತ್ರದಿ ಸೂರ್ಯನು
ಕೊಡಜ್ಜಿ ಸೂರ್ಯ ಅನ್ನುತ್ತ ಅಳುವನು

ಶುದ್ಧ ತರಲೆ ತುಂಟ ಪೋಕರಿ ಆದಿಯು
ಇವನ ಚೇಷ್ಟೆ ಲೀಲೆಯು ಅನಾದಿಯು

43. ಆದಿಯೂ ನೆಟ್‌ನ ಪಾಠವೂ



ಓಡುತ ಬಂದನು ಆದಿ
ಬ್ಯಾಗು ಬಾಕ್ಸು ಈ ಬದಿಗೆ
ಶೂಸು ಸಾಕ್ಸು ಆ ಬದಿಗೆ

ರಜೆ ಕೊಟ್ಟರು ಶಾಲೆಗೆ
ಹೊಂವರ್ಕಿಲ್ಲ ನಾಳೆಗೆ
ಕೊರೊನವಂತೆ ಊರಿಗೆ

ಅಪ್ಪಂದು ವರ್ಕಫ್ರಂ ಹೋಮು
ಅಮ್ಮನಾಫೀಸು ಬೀಗ ಫ್ರೇಮು
ಅಜ್ಜಿ ತಾತಂಗೆ ಪಗಡೆ ಗೇಮು

ಮಾಡುವರು ದಿನಾ ಹೊಸ ತಿಂಡಿ
ಆದಿಗೆ ತುಂಬಿದ ಹಾಲಿನ ಗಿಂಡಿ
ಕುಣಿತವು ಆಟವು ಚಿನ್ನದ ಬಂಡಿ

ಪಕ್ಕದ ಮನೆಗೆ ಹೋಗುವುದಿಲ್ಲ
ಗೆಳೆಯರು ಯಾರೂ ಬರುವಂತಿಲ್ಲ
ಬೇಸರವಂತೂ ಕಳೆಯುವುದಿಲ್ಲ

ಪರೀಕ್ಷೆ ಇಲ್ಲದೆ ಆದಿ ಪಾಸು
ಬೇಸಿಗೆ ರಜೆಗೆ ಉದ್ದನೆ ಕಾಲು
ಟೂರು ಹೋಟೆಲು ಇಲ್ಲ ಮಾಲು

ಕಟ್ಟಲೇ ಬೇಕು ಶಾಲೆಗೆ ಫೀಸು
ಮಾಡುವರಂತೆ ಜೂಮಿನ ಕ್ಲಾಸು
ಜೊತೆ ಕೂಡುವ ಅಮ್ಮನ ಪೋಸು

ನೆಟ್‌ನ ಕ್ಲಾಸು ಆಗದು ನೆಟ್ಟಗೆ
ಕಾಣದ ಮಿಸ್ಸು ಗಮನ ಸೊಟ್ಟಗೆ
ಫ್ರೆಂಡ್ಸ್ ಇಲ್ಲದ ಬದುಕು ಬಿಮ್ಮಗೆ

ತಲೆಗೆ ಹತ್ತದು ನೆಟ್‌ನ ಪಾಠ
ಮೊಬೈಲಾಟಕೆ ನೆಟ್ಟಿದೆ ನೋಟ
ಯಾಕಪ್ಪಾ ದೇವರೆ ಇಂಥಾ ಕಾಟ

ಕೊರೊನ ವೈರಾಣು ಹೋಗು ಬೇಗ
ಮೆಚ್ಚಿನ ಸ್ಕೂಲು ತೆರೆಯಲಿ ಬೇಗ
ಕುಣಿದು ಆಡೋಣ ಬಯಲಲಿ ಬೇಗ

44. ಹುಡ್ಗೀರು ನೋಡಿದ್ರು ಕದ್ದು



ತುಂಬಾ ಥ್ಯಾಂಕ್ಸು ಅಪ್ಪಾ ನಿನಗೆ
ನಿನ್ನಾಗೆ ನನಗೆ ಪ್ಯಾಂಟು ಇಂದು
ಬಣ್ಣದ ಟೀಶರ್ಟ್ ಬಾಳಾ ಮುದ್ದು
ಹುಡ್ಗೀರು ನೋಡಿದ್ರು ಕದ್ದು

ಅಮ್ಮ ಕೇಕು ಎಲ್ಲಿಂದ ತಂದೆ
ಎಷ್ಟು ಸುಂದರ ಡಿಜೈನು
ನೋಡಿದ್ರೆ ಸಾಕು ಬಾಯಲ್ನೀರು
ಈಗ್ಲೆ ಮಾಡ್ತಿನಿ ಕೇಕ್ಕಟ್ಟು

ಅಜ್ಜಿ ನೀನು ತುಂಬಾ ಜಾಣೆ
ಬೆಳಗ್ಗೆ ಎಣ್ಣೆ ಬಿಸ್ನೀರ್ ಸ್ನಾನ
ಮಾಮಿಗೆ ಹೂವು ಧೂಪದೀಪ
ಕೈಮುಗಿದು ಏನ್ನಾ ಕೇಳ್ದೆ

ತಾತ ನೀನು ಏನೂ ಕೊಡ್ಲಿಲ್ಲಾ
ಕೊಟ್ಟೆ ಮುತ್ತು ಸುಮ್ಮೆ ಸುಮ್ಮೆ
ಜಾಣ ಅದಿ ಇಷ್ಟ ಅಂತೀಯಲ್ಲ
ಕೊಡ್ಸು ಒಳ್ಳೆ ಲೆದರ್ ಬೂಡ್ಸು

ಸ್ಕೂಲಲ್ಲಿ ಕೊಟ್ಟೆ ಚಾಕಲೇಟು
ಹಾಕಿ ಬಣ್ಣದ ಬಟ್ಟೆ; ಗೆಳೆಯರೆಲ್ಲಾ
ಚಪ್ಪಾಳೆ ಹೊಡೆದು ಕೂಗಿದ್ರಪ್ಪ
ಅದಿ ನಿನಗೆ ಹ್ಯಾಪಿ ಬರ್ತಡೇ

45. ತಾಯಿಗೊಂದು ಹಾಡು



ಇಂಗ್ಲೀಷ್ ಆಡಲು ಮುತ್ತನು ಕೊಟ್ಟೆ
ಕನ್ನಡವಾಡಲು ಏಟನು ಕೊಟ್ಟೆ

ಇಂಗ್ಲೀಷ್ ರೈಮನು ಹಾಡಲು ಬಿಟ್ಟೆ
ಕನ್ನಡ ಗೀತೆ ಹೊರಗೆ ಇಟ್ಟೆ

ಅಜ್ಜನ ಕನ್ನಡ ಅಟ್ಟದಲಿಟ್ಟೆ
ಬಣ್ಣದ ಇಂಗ್ಲೀಷ್ ಮೇಜಿನಲಿಟ್ಟೆ

ನಂಜೊತೆ ಮಾತಿಗೆ ಇಂಗ್ಲೀಷ್ ಅಂತೆ
ಬಯ್ಯಲು ಅಪ್ಪಂಗೆ ಕನ್ನಡವಂತೆ

ಅಜ್ಜಿಯ ಜೊತೆಗೆ ಕನ್ನಡ ನಗುವು
ನನಗೆ ಮಾತ್ರಾ ಇಂಗ್ಲೀಷ್ ನೊಗವು

ಮೈಸೂರು ಮಲ್ಲಿಗೆ ನೀನಂತೆ
ಲಂಡನ್ ಲಿಲ್ಲಿ ನಾನಂತೆ

ಅಮ್ಮನ ಬಯಕೆಯ ಹಳಹಳಿಕೆ
ಆಗುವೆನಮ್ಮಾ ಪಳೆಯುಳಿಕೆ

ಅಮ್ಮ ನೀನು ಎಲ್ಲಾ ಕೊಟ್ಟೆ
ಕನ್ನಡ ಮಾತ್ರಾ ಏಕೆ ಬಿಟ್ಟೆ

46. ಆದಿಯ ಪ್ರವಾಸ



ಆದಿಯು ಹೊರಟನು ಮೈಸೂರ್ಗೆ
ಊರೂ ಕೇರಿ ನೋಡೋಕ್ಕೆ
ಬರ್ಮುಡಾ ಕೆಂಪು ನೀಲಿ ಶರಟು
ಕೂಲಿಂಗ್ಲಾಸು ಹಾಕೋಕ್ಕೆ

ಅಮ್ಮ ನೀನು ಹಿಂದಕ್ಕೆ
ನಾನು ಕೂಡುವೆ ಮುಂದಕ್ಕೆ
ಅಪ್ಪಾ ನೀನು ಜಬರ್ದಸ್ತು
ಓಡ್ಸು ಎಲ್ಲಾ ಕಾರು ಹಿಂದಕ್ಕೆ

ಮಳೂರಲಿ ಇರುವನು ಕೃಷ್ಣ
ಅಂಬೆಗಾಲು ಇಡುವವನಂತೆ
ಬೆಣ್ಣೆಯ ಮೈಗೆ ಮೆತ್ತಿಹನಂತೆ
ಧೂಪಾ ದೀಪ ಬೇಕಂತೆ

ಮದ್ದೂರು ವಡೆಯು ರುಚಿಯಂತೆ
ಕಬ್ಬಿನ ಹಾಲು ಸಕ್ಕರೆಯಂತೆ
ಪಿಜ್ಜಾ ತಿಂದು ಕೋಲ ಕುಡಿವೆ
ತಿಟ್ಟಲಿ ಹಕ್ಕಿ ಇಲ್ವಂತೆ

ರಂಗಣ್ಣನ್ಯಾಕೆ ಮಲಗಿಹನಂತೆ
ಕೆಲಸಗಿಲಸಾ ಇಲ್ವಂತ
ಎದ್ದು ಕುಳಿತರೆ ದಿಂಬೇ ಸೇರು
ಭೂಮಿಯನೇ ಅಳೆಯುವನಂತೆ

ಬತ್ತಿದ ತೊರೆಯಿಲ್ಲಿ ಕಾವೇರಿ
ಅಲ್ಲಿಹುದು ಟಿಪ್ಪು ಗೋರಿ
ಬೆಟ್ಟದ ತಾಯಿ ಚಾಮುಂಡಿ
ಗೂಡಿನ ಅಪ್ಪಾ ನಂಜುಂಡಿ

ಎಂಥಾ ಸುಂದರ ಅರಮನೆಯು
ನೋಡಲು ಚಂದ ಪ್ರಾಣಿಯ ಮನೆಯು
ಹುಲಿ ಸಿಂಹ ಚಿರತೆ ಕರಡಿಯು
ಆಫ್ರಿಕಾ ಆನೆ ಘೆಂಡಾಮೃಗವು

ಬತ್ತಿದ ಒಡಲು ಕನ್ನಂಬಾಡಿ
ಕುಳಿತಿಹರ್ಯಾರೊ ಮುಗಿಲನು ನೋಡಿ
ಎಂದಿಗೆ ಬರುವುದು ಬಿರುಮಳೆಯಮ್ಮ
ದುಬಾರೆಲಿ ಆನೆಗೆ ನೀರೆಲ್ಲಮ್ಮಾ

ಉರಿ ಬಿಸಿಲು ಪ್ರವಾಸ ಸಾಕಮ್ಮ
ಕೆಂಪನೆ ಬೊಕ್ಕೆ ಮೈಮೇಲಮ್ಮ
ಬೆಂಗ್ಳೂರಲ್ಲಿ ಐಸ್ಕ್ರೀಂ ಕೊಡಿಸು
ಎಸಿ ರೂಂಮಲಿ ತಣ್ಣಗೆ ಮಲಗ್ಸು

47. ಅವರೆ ಅವರೆ ಯಾರವರೆ



ಅವರೆ ಅವರೆ ಯಾರವರೆ
ಮಾರ್ಕೆಟ್ಟಲ್ಲಿ ಬಂತವರೆ ॥

ಮಾಗಿಯ ಮಂಜಿಗೆ ಸೋನೆಯ ಸೊಗಡು
ಮುಟ್ಟಲು ಸುವಾಸನೆ ಎಂತಹಾ ಸೊಗಸು
ಒಡೆಯುವ ಮೈಯಿ ಕೊರೆಯುವ ಛಳಿಗೆ
ಗಮಗಮ ಅವರೆ ಬೆಡಗಿನ ರಾಶಿಗೆ

ಸುಗ್ಗಿಯ ಕಾಲದ ತರತರದಡಿಗೆ
ಅವರೆ ರುಚಿಯದು ಅಡಿಗಡಿಗೆ
ಸಲ್ಲುವುವು ಉಪ್ಪಿಟ್ಟು ಸಾರು ಪಲ್ಯಕೆ
ಮಿಗಿಲು ಹೊಸ ಮೇಲೋಗರಕೆ

ಹೊಸ ವರ್ಷಕ್ಕೆ ಹೊಸಹೊಸ ಅಡಿಗೆ
ಸಂಕ್ರಾಂತಿಗೆ ಅವರೆಮೇಳದ ಕೊಡುಗೆ
ಸಜ್ಜನರೆ ಬನ್ನಿ ಸಜ್ಜನರಾಯರ ಸರ್ಕಲ್ಲಿಗೆ
ಅವರೆ ತಿಂಡಿಯು ಚಾಟುಸ್ಟ್ರೀಟಲಿ ಮಾತಿಗೆ

ರುಚಿ ಸಾರು ಮಿಕ್ಸ್ಚರು ಅವರೆ ನಾನಾಬಗೆ
ಉಸುಳಿ ಕೋಡುಬಳೆ ಚಿತ್ರಾನ್ನ ಹೋಳಿಗೆ
ಜಾಮೂನು ಪಾಯಸ ನಿಪ್ಪಟ್ಟು ತಿನ್ನಿ ದುಪ್ಪಟ್ಟಿಗೆ
ಹಿತ ನಿಮಗೆ ಹಿತಕವರೆ ಮಾಡಿಹ ಬಗೆಬಗೆ

ಮಸಾಲೆ ದೋಸೆ ವಡೆ ಪೂರಿ ಶಾವಿಗೆ
ಜಾಂಗೀರು ಹನಿ ಜಿಲೇಬಿ ಹನಿ ನಿನಗಾಗೆ
ಹಲ್ವಾಕಾಜು ಬೂಂದಿಲಾಡು ಎಷ್ಟೊಂದು ಭಕ್ಷ
ಏನುಂಟು ಏನಿಲ್ಲ ಇದು ನಿಮ್ಮವರೆ ಕಕ್ಷ

ಬನ್ನಿರೋ ಬನ್ನಿ ರೈತರೆಲ್ಲ ಬನ್ನಿ ಸರಸರನೆ
ಮೈಸೂರು ಮಾಗಡಿ ಕೋಲಾರ ಚಿಂತಾಮಣಿ
ತನ್ನಿರೋ ತನ್ನಿ ಅವರೆಯ ತನ್ನಿ ಭರಭರನೆ
ಬೆಂಗಳೂರು ಮಾಣಿ ಅವರೆ ಜಾಣೆ ಅವ್ವರಾಣಿ

48. ಬಲು ಚಂದ ತಂಗ್ಯವ್ವ ಬಲು ಚಂದ



ಅಚ್ಚು ಸಕ್ಕರೆ ಚಂದ
ಸಲಾಮನ ಗಾಡಿ ಚಂದ
ಎಳ್ಳು ಬೀರೊ ಸಂಕ್ರಾಂತಿ
ಬಲು ಚಂದ ತಂಗ್ಯವ್ವ ಬಲು ಚಂದ

ಸಕ್ಕರೆಯ ಕಾಸುವುದು
ಹಾಲ್ನೊಸರ ಬೆರೆಸುವುದು
ಸಕ್ಕರೆ ಅಚ್ಚಚ್ಚು ಹುಯ್ಯುವುದು
ಬಲು ಚಂದ ತಂಗ್ಯವ್ವ ಬಲು ಚಂದ

ಕರಿಎಳ್ಳು ತೊಳೆದಿಟ್ಟು
ಹುರಿಗಡಲೆ ಆರಿಸಿಕೊಟ್ಟು
ಒಳ್ಳೆ ಕಳ್ಳೆಕಾಯಿ ಬೆರೆಸಿಟ್ಟು
ಬಲು ಚಂದ ತಂಗ್ಯವ್ವ ಬಲು ಚಂದ

ಹದನಾದ ಕಬ್ಬಿನ ತುಂಡು
ದಿವಿನಾದ ಬಾಳೆಹಣ್ಣು
ಎಲಚಿ ಬೊರೆಯ ರುಚಿಯು
ಬಲು ಚಂದ ತಂಗ್ಯವ್ವ ಬಲು ಚಂದ

ಆಡುತ್ತ ಕೂಡುತ್ತ
ಹೊಸಬಟ್ಟೆ ನಲಿಯುತ್ತ
ನಗುತ್ತ ಎಳ್ಳು ಬೀರುತ್ತ
ಬಲು ಚಂದ ತಂಗ್ಯವ್ವ ಬಲು ಚಂದ


ಅಮ್ಮ ಹಚ್ಚಿದ ತಂಬೆಳಕ ಬತ್ತಿ
ಆನಂದದಿ ಸಲಾಮನ ಕುದುರೆ ಹತ್ತಿ
ಬಂಧುಮಿತ್ರರ ಒಲವಿನಾ ಚಿತ್ತಿ
ಬಲು ಚಂದ ತಂಗ್ಯವ್ವ ಬಲು ಚಂದ

ತಂಗಿ ನಿನ್ನ ಮಾತು ಇಡ್ತಾವೆ ತತ್ತಿ
ಬಿಚ್ಚುತ್ತಾ ಹಳೆ ನೆನಪಿನಾ ಬುತ್ತಿ
ಓದುತ್ತಾ ಅರಳಿತ್ತ ನನ ಭಿತ್ತಿ
ಬಲ ಚಂದ ತಂಗ್ಯವ್ವ ಬಲು ಚಂದ.

* ಶ್ರೀಮತಿ ಟಿ.ಎಸ್.ಶ್ರವಣಕುಮಾರಿ ಅವರ ಪ್ರಬಂಧದ ಸ್ಫೂರ್ತಿ



49. ಚಿರತೆ ಹಾರುತಿದೆ ನೋಡಿದಿರಾ?
(ವರಕವಿ ಅಂಬಿಕಾತನಯದತ್ತರ ಕ್ಷಮೆಕೋರಿ)



ಶಾಲೆಯ ಒಳಗೆ ಬೆಳ್ಳಂಬೆಳಗೆ
ಕೊಳದ ಸುತ್ತಲೂ ಒಳಗೆ ಹೊರಗೆ
ಹಿಂದಕೆ ಮುಂದಕೆ ಮೇಲಕೆ ಕೆಳಗೆ
ರೆಪ್ಪೆಯಾಡುವ ಸಮಯದ ಒಳಗೆ
ಚಿರತೆ ಹಾರುತಿದೆ ನೋಡಿದಿರಾ

ಕರಿಬಿಳಿ ಬಣ್ಣದ ಚುಕ್ಕೆಗಳುಂಟು
ಉದ್ದನೆ ನಿಗುರಿದ ಬಾಲವದುಂಟು
ಉರಿ ಉರಿಗಣ್ಣಿನ ಕೆಂಪಿನ ಬಣ್ಣದ
ಮುಗಿಲಿಗೆ ನೆಗೆಯುವ ಪಾದಗಳುಂಟು
ಚಿರತೆ ಹಾರುತಿದೆ ನೋಡಿದಿರಾ

ಸುತ್ತಲು ಮುತ್ತಲು ಗಿಜಿಗಿಜಿ ಜನರು
ಹೋ ಹೋ ಅನ್ನುತಾ ಅರಚುವರು
ಶಾಲೇಲಿ ಗೊಂದಲ ಸಿಕ್ಹಾಕೊಂಡು
ಕಾದು ಕಾದವರ ಮಾಡಿದೆ ಸುಣ್ಣ
ಚಿರತೆ ಹಾರುತಿದೆ ನೋಡಿದಿರಾ

ದುಡ್ಡಿನ ದೊರೆಗಳ ಹಂಮ್ಮನೆ ಒಕ್ಕಿ
ತುಂಡರ ಮುಂಡರ ಸೊಕ್ಕನು ಮುಕ್ಕಿ
ಕಚ್ಚುತ ಕೆಂಪಾಗಿಸಿ ಮಾಂಸಖಂಡಗಳ
ಸ್ವಾರ್ಥಸಾಧಕರ ನೆತ್ತಿಯ ಕುಕ್ಕಿ
ಚಿರತೆ ಹಾರುತಿದೆ ನೋಡಿದಿರಾ

ಝಗಮಗ ರಾಯಗೆ ನೆರಿಗೆಯ ಬರಿಸಿ
ಸುಮನುಜನ ಮನ ಬಾಗಿಲ ತೆರೆಸಿ
ಪಂಜನು ಬೀಸುತ ಹೆದರಿಕೆ ಹುಟ್ಟಿಸಿ
ಹೊಸಗಾಲದ ಹೊಟ್ಟೆಬಾಕರ ಕೆಕ್ಕರಿಸಿ
ಚಿರತೆ ಹಾರುತಿದೆ ನೋಡಿದಿರಾ

ಕಳ್ಳಿಕಾಡಿನ ಮಿತಿಯನು ಮೀರಿ
ಬೆಂಗಳೂರಿನ ಗರಿಯನು ಪಿರಿ
ಹೊಟ್ಟೆಯ ಹೊರಲು ತಾ ಹೋರಾಡಲು
ಬನ್ನೇರ್ಘಟ್ಟದ ಅಂಗಳ ಸೇರಿ
ಚಿರತೆ ಹಾರುತಿದೆ ನೋಡಿದಿರಾ

ಮುಟ್ಟಿದೆ ಕಾಡನು ಹಾರ್ಗೋಡೆಯ ಅಂಚ
ಕಾಡಿಗೆ ಹೊಡೆದಿದೆ ತನ್ನಪಂಜಿನ ಪಂಚ
ಕುಹಕ ಕಾಂಡಗಳನು ಒಡೆಯಲು ಎಂದೊ
ಯಾರುಬಲ್ಲರು ಚಿರತೆಯ ಹೊಂಚ
ಚಿರತೆ ಹಾರುತಿದೆ ನೋಡಿದಿರಾ

50. ಭಾರತವೆಂಬ ಚಿನ್ನದ ಹಕ್ಕಿ



ಗಗನಕೆ ಚಿಮ್ಮಲಿ ಚಿನ್ನದಹಕ್ಕಿ
ಆಕಾಶದೊಡಲಲಿ ರೆಕ್ಕೆಯ ಬಿಚ್ಚಿ
ಹಾರಲಿ ಹಕ್ಕಿ ಜನಮನ ಮೆಚ್ಚಿ
ಎಲ್ಲೆಡೆ ಸಂತಸ ಸಂಭ್ರಮ ಚೆಲ್ಲಿ

ಕಾಳಿಗೆ ಕಾಳು ಜೋಡಿಸಿ ಗುಕ್ಕು
ನೆರೆಹೊರೆ ರಾಕ್ಷಸ ನೋಡುತ ಕೆಕ್ಕು
ಭೇದವ ಮರೆತು ಬೆವರನು ಬಸಿದು
ಚಿನ್ನದ ಹಕ್ಕಿಗೆ ಬೆಚ್ಚನೆ ಗೂಡು

ಏನಿದು ಕಟ್ಟು ಕಾಲಿಗೆ ಪೆಟ್ಟು
ಮುರಿದಿದೆ ಕೊಕ್ಕೆ ಹರಿದಿದೆ ರೆಕ್ಕೆ
ಮಾಸಿತೆ ಮನಸಿನ ಚಿನ್ನದ ಮೆರಗು
ಮುಲಾಮು ಹಚ್ಚುವ ಮಾತಿನ ಬುರುಗು

ಚಿನ್ನದ ಹಕ್ಕಿಗೆ ತಂದರೊ ಚಿನ್ನದ ಕತ್ತಿ
ತತ್ತಿಯ ಹೊಡೆಯಲು ಸ್ವಾರ್ಥದ ಚಿತ್ತಿ
ಕಣ್ಣನು ಮುಚ್ಚಿ ಚಕಚಕ ಕೊಚ್ಚಿ
ತುಂಬಲು ಡೊಳ್ಳಿಗೆ ಚಿನ್ನದ ಕೊಳ್ಳೆ

ನೆತ್ತಿಯ ಸವರಿ ಮೋಡಿಯ ಬಿತ್ತಿ
ಕಟ್ಟಿದರಿಲ್ಲಿ ಮೇಣದ ಮಹಲು
ಭೀಮನ ಶಕ್ತಿ ಶಬರಿಯ ಭಕ್ತಿ
ಇಲ್ಲದೆ ಏರದು ಬದುಕಿನ ಮಜಲು

ಝಾಡಿಸಿ ಜಡವ ಜಾಲಿಸಿ ಮನವ
ರೂಢಿಸಿ ಛಲವ ಕೂಡಿಸಿ ಬಲವ
ಕಟ್ಟೋಣ ಬನ್ನಿ ಬದುಕಿನ ನಂಟು
ಇಲ್ಲವೆ ಜಾರೀತು ಜನುಮದ ಗಂಟು

ಇಂದು ನಾಳೆ ಒಂದು ಎರಡು
ಎನ್ನದೆ ಕಾಯಿರಿ ಎಚ್ಚರವಿರಲಿ
ಚಿನ್ನದ ಹಕ್ಕಿ ನಮ್ಮಯ ಹಕ್ಕಿ
ಕಾಯೋಣ ಬನ್ನಿ ಎಚ್ಚರಾ ಎಚ್ಚರಾ

51. ಕೊರೋನದ ಕಾವಳ

(ಕರೋನದ ನಡುವೆಯೂ ಎಸ್ ಎಸ್ ಎಲ್ ಸಿ ಪರೀಕ್ಷೆ ಕರ್ನಾಟಕದಲ್ಲಿ ನಡೆಯಿತು)





ಪುಟ್ಟ ಪುಟ್ಟ ಮುದ್ದು ಮಕ್ಕಳೆ
ಹೆದರದಿರಿ ಕೊರೊನ ಕಾವಳಕೆ
ಬಂದಿದೆ ಪರೀಕ್ಷೆಯು ಸಮೀಪಕೆ

ಗಟ್ಟಿಯಿರಲಿ ನಿಮ್ಮಯ ಹೃದಯ
ಗಾಭರಿ ಬಿಟ್ಟು ನಿರ್ಭಯ
ಉತ್ತರವಿರಲಿ ಬೇಡ ಸಂಶಯ

ಮುಂಗೋಟಿ ಧರಿಸಿ ಕೈಯನು ಒರಸಿ
ವೈರಾಣುವ ಧೈರ್ಯದಿ ಎದುರಿಸಿ
ಕಾಪಾಡುವ ಆರೋಗ್ಯವ ಬಯಸಿ

ನಾಳಿನ ಪ್ರಜೆಗಳು ಇಂದಿನ ಮಕ್ಕಳು
ನೀವೆ ನಾಡಿನ ಭವಿಷ್ಯದ ಬೆಳಕು
ಕೊರೋನಾ ಗೆಲ್ಲುವ ಸೊಬಗು

ಶುಭವಾಗಲಿ ವಿದ್ಯಾರ್ಥಿಗಳೆ
ಆತಂಕ ಬಿಡಿರಿ ಪೋಷಕರೇ
ಗರಿ ನಮಗೆ ಕನ್ನಡನಾಡಿಗರಿಗೆ

52. ಅಮ್ಮನ ಹುಟ್ಟಿದ ಹಬ್ಬ



ಮಕ್ಕಳು ಹಿರಿಯರು ಕೂಡಿಹರು
ಕುಣಿಯುತ ಹಾಡುತ ನಲಿದಿಹರು
ಅಮ್ಮನು ಹುಟ್ಟಿದ ದಿನವಂತೆ
ಮೇಜವಾನಿಯೂ ಮಜವಂತೆ

ಓಡುತ ಬಂದನು ಅಳಿಮಯ್ಯ
ಅಕ್ಕನು ತಂದಳು ಬಲುಹರುಷ
ಸೀಮಾವಿನ ತಿಂಡಿಯ ತಂದನು
ಕಿಲಕಿಲ ನಗುತಲಿ ಕಿರಿಮಗನು

ಅಂತರಜಾಲದಿ ಮಧ್ಯಮ ನುಡಿವನು
ಅವಸರದಿ ಬಂದನು ಹಿರಿಮಗನು
ಸೊಸೆಯು ಧರಿಸಿದ ಹೊಸಮೂಗುತಿ
ಹೃದಯದ ಖುಷಿಯಲೆ ಮುಗಿಲಿನಲಿ

ಮೊದಲ ಸುತ್ತಿನ ಕಾಫಿಯ ಗಮಗಮ
ಅಡಿಗೆಮನೆಯಲಿ ಸವಿರುಚಿ ಘಮಲು
ಮಾವಿನಕಾಯಿ ಚಿತ್ರಾನ್ನ, ಉಪ್ಪಿನಕಾಯಿ
ಜೊತೆಗಣ್ಣ, ಮೈಸೂರ್ಪಾಕು ಆಂಬೋಡೆ

ಗಟ್ಟಿ ಮೊಸರನ್ನಕೆ ಗೊಡಂಬಿ ದ್ರಾಕ್ಷಿ
ದಾಳಿಂಬೆ ವಗ್ಗರಣೆ ಕೊತ್ತಂಬರಿ ಕರಿಬೇವು
ಬೆಣ್ಣೆಯ ರುಚಿಯು ಬಾಯಲಿ ತೇಲುತ
ಚಂದದ ಮಾತಿನ ಸುರಳಿ ಚಿನಕುರಳಿ

ಹಿಂದಿನ ಕಾಲದ ಮಾತುಗಳು
ಅಜ್ಜಿಯ ಕೈತುತ್ತಿನ ದಿನಗಳು
ಅವರೂ ಇವರೂ ಬಂದಿಹರು
ಕಳೆದ ಕಾಲದ ಸವಿಗನಸು

ಆಡುತ ಮಹಿಳೆಯರು ನಲಿದಿಹರು
ಗಂಡಸರು ಮೆಚ್ಚುತ ಕಾಫೀ ಕುಡಿದರು
ನಗುವ ನಲಿವೂ ಖುಷಿಯಲಿ ಕಲೆಸಿ
ಕನಸಿನ ಅಂಕಕೆ ಮೆಲ್ಲನೆ ಜಾರಿಹರು

ಜಾವದಿ ಏಳುತ ದೇವಗೆ ನಮಿಸಿ
ಅಮ್ಮನಿಗೆಲ್ಲಾ ಶುಭ ಕೋರಿಹರು
ಸಿಹಿತಿಂಡಿಯ ಶುಭಸವಿ ಉಣಿಸಿಹರು
ನೂರ್ಕಾಲವಿರುಯೆನ್ನುತ ನಮಿಸಿಹರು

ಸರಿಸಮಯಕ್ಕೆ ಬಂದನು ಸುಬ್ರಮಣಿ
ಗಂಟಿನ ತುಂಬಾ ಸೀರೆಯು ರಮಣಿ
ಅಮ್ಮನಿಗಕ್ಕನ ಸೀರೆಯ ಉಡುಗೊರೆ
ಮಕ್ಕಳ ಹರುಷಕೆ ಮುಕ್ಕಣ್ಣನ ಹರಕೆ

53. ಗಾಂಧಿಯೆಂದರೆ



ಗಾಂಧಿಯೆಂದರೆ ಇವನೇನಮ್ಮ
ಶಾಂತಿ ಸತ್ಯದ ಸಾಧಕನಮ್ಮ

ಸೂಟುಬೂಟು ಹಾಕಿಲ್ಲಮ್ಮ
ಜುಬ್ಬಾ ಶೆರ್ವಾನಿ ತೊಟ್ಟಿಲ್ಲಮ್ಮ
ಟೊಪ್ಪಿಗೆ ಗುಲಾಬಿ ಇಲ್ಲಿಲ್ಲವಮ್ಮ
ತರತರ ದಿರಿಸು ಗುರುತಿಲ್ಲಮ್ಮ

ಭಾಷಣ ಭೂಷಣ ಇವನಲ್ಲಮ್ಮ
ಮಾಯಾ ಮೋಡಿ ಮಾತಿಲ್ಲಮ್ಮ
ಅಬ್ಬರುಬ್ಬರವಿಲ್ಲದ ಜುಳುಜುಳುವಮ್ಮ
ಸಾದಾಸೀದಾ ತಣ್ಣನೆ ರವವಮ್ಮ

ಗಾಂಧಿತಾತನು ಭಗೀರಥನಮ್ಮ
ಬೊಚ್ಚುಬಾಯಲಿ ನಗುವುದೇಕಮ್ಮ
ಮೊಳಕಾಲ್ಲಂಚೆ ಕೊಕ್ಕರೆ ಕಾಲು
ಬರಿಮೈ ದಟ್ಟಿ ಜೊತೆಯಲಿ ಕೋಲು

ಗುಂಡನೆ ಕನ್ನಡಕ ಬೋಳುತಲೆಯು
ಸೊಂಟಕೆ ವಾಚು ಗಿಣಿಯ ಮೂಗು
ಆಡಿನ ಹಾಲು ನೇಯಲು ಚರಕ
ವೈಷ್ಣವ ಜನತೋ ಹಾಡುವನಮ್ಮ

ರಾಮನ ಭಕ್ತಿ ಹರಿಶ್ಚಂದ್ರನ ಸತ್ಯ
ಎಲ್ಲರಿಗೆ ಸನ್ಮತಿ ಬೇಡುವನಮ್ಮ
ಒರಟು ಎಕ್ಕಡ ಬೀಸುಗಾಲ್ನಡೆಯು
ನಾಡಿನ ಜನಮನ ಪ್ರತಿನಿಧಿಯು

ಬಿದ್ದವರ ಹಕ್ಕು ಕೊಡಿರೆಂದನಮ್ಮ
ರೈಲುಡಬ್ಬಿಯಿಂದ ಹೊರದಬ್ಬಿದರಮ್ಮ
ಸತ್ಯಾಗ್ರಹ ಅಸ್ತ್ರ ಹುಡುಕಿದನಮ್ಮ
ಉಪವಾಸಕೆ ಬ್ರಿಟಿಷರು ಬಾಗಿದರಮ್ಮ

ಪಾಯಖಾನೆಯ ಬಳಿದವನಮ್ಮ
ಮುಟ್ಟದವರನು ತಬ್ಬಿದವನಮ್ಮ
ಸ್ವಚ್ಛತೆ ದೇವರು ಅಂದವನಮ್ಮ
ಈಶ್ವರ ಅಲ್ಲಾ ಒಂದೆನ್ನುವನಮ್ಮ

ಅಹಿಂಸೆಗೆ ಗೆಲವು ತೋರಿದನಮ್ಮ
ಜೈಲಿಗೆ ಅಂಜದ ಆಶ್ರಮವಾಸಿಯು
ಕೃಷ್ಣಗೀತೆಯೆ ಅವನಾಗಿಹನಮ್ಮ
ನಡೆನುಡಿ ಒಂದಾದ ಅದ್ಭುತವಮ್ಮ

ಬ್ರಿಟಿಷರ ಭಾನಗಡಿ ಬಿಡಿಸಿದನಮ್ಮ
ಸ್ವತಂತ್ರ ಭಾರತ ನಮ್ಮದೆಂದನಮ್ಮ
ಹೇಡಿಯ ಗುಂಡಿಗೆ ಗುಂಡಿಗೆಯಿತ್ತು
'ಹೇ ರಾಮ್ ' ಹಾಡಿದ ವೀರನಮ್ಮ

ಗಾಂಧಿ ನಾಟಕ ನಡೆದಿದೆಯಮ್ಮ
ಓಟಿಗೆ ಒಗಟನು ನುಡಿದಿಹರಮ್ಮ
ಮಣ್ಣಿನ ಕಣದಲಿ ಕಣ್ಣಿನ ಮನದಲಿ
ಇರುವನು ತಾತ ಕುರ್ಚಿಗೆ ಕಾಣನಮ್ಮ

ಚಿರಂಜೀವನಿವ ಅನಂತದ ಶಿಶುವು
ಅಮೃತಮಂಥನದಿ ವಿಷಕುಡಿದವನು
ದಾರಿಯೇ ತಾನದ ಹಗಲಿನ ಬಂಡಿ
ಗಾಂಧಿಯೆಂದರೆ ನೀನು ನಾನಮ್ಮ

54. ಸುಬ್ಬುವಿನಮನೆ ದಸರಾ



ಬನ್ನಿ ಎಲ್ಲರೂ ಸುಬ್ಬು ಮನೆಗೆ
ದಸರಾಗೊಂಬೆ ಮೋಡಿ ಬೀಡಿಗೆ
ಪುರಾಣ ಪುಣ್ಯ ವೈಭವ ಕಥನಕೆ
ಏಳುಲೋಕದ ಸ್ವರ ಸಮ್ಮೋಹಕೆ

ಪಟ್ಟದ ಗೊಂಬೆಗೆ ಸಿಲ್ಕಿನ ಸೀರೆ
ತರತರ ಮಿರುಗುವ ಬಣ್ಣದ ದಿರಿಸು
ಠಾಕುಠೀಕು ದಶಮಿಯ ಹುರುಪು
ಅಂಬಾರಿಯಲಿ ನಾಲ್ವಡಿ ರಾಯರು

ಹರಸುವರಿಲ್ಲಿ ಅಷ್ಟಲಕ್ಷ್ಮಿಯರು,
ವೈಕುಂಠ ಪಕ್ಕದಿ ಕೈಲಾಸ, ಓಹೋ
ಗೋಪಿಯರ ಕದಪಿನ ಹೊಳಪೊ
ಇಂಗ್ಲೀಷ್ ನಾರಿಯ ಚಂದದ ಬಳುಕೊ

ಶ್ರೀನಿವಾಸ ಕಲ್ಯಾಣ ಪದ್ಮಾವತಿ ಒಡ್ಯಾಣ
ನಾಚುತ್ತ ಬಂದಿಹಳಿಲ್ಲಿ ಸೀತಾದೇವಿ,
ಆಗಸದೋಲಗದಿ ಗಿರಿಜಾ ಕಲ್ಯಾಣ,
ವಿಷ್ಣು ಗಣಪ ನೃಸಿಂಹ ಶಿವನ ಸಂಸಾರ

ತಿರುಪತಿಯಲ್ಲಿ ಬ್ರಹೋತ್ಸವವು,
ದಸರಾ ಮೆರವಣಿಗೆ ನಗಾರಿ ಸ್ವರವು
ಮುಕ್ಕಿಲ್ಲ ಕೊಕ್ಕಿಲ್ಲ ಸುಂದರ ಗೊಂಬೆ
ರಚಕರ ಮಿಡಿದಿಹ ವಿಸ್ಮಯವೆಂಬೆ

ತ್ಯಾಗರಾಜ ದೀಕ್ಷಿತ ಶಾಸ್ತ್ರಿಗಳ ಸಂಗೀತ
ತುಂಗಾತಟದಿ ಗುರುಕುಲೆ ಶಂಕರಾದ್ವೈತ
ಆಳ್ವಾರರಿತ್ತ, ಮುರುಗಾಲಯ ಪಳನಿಯತ್ತ
ಇಸ್ಕಾನ್ ಬೆಟ್ಟದ ಚೆಲುವ ಸೆಳೆದಿಹ ಚಿತ್ತ

ಮದುವೆಯಲ್ಲಿ ನಡೆದಿದೆ ಆರತಕ್ಷತೆಯು
ಉಣ್ಣಿರಿ ಬಡಿಸುವ ಶುಚಿರುಚಿ ಭೋಜನವು
ಸಂಸಾರ ಸಾಮಾನಿಗೆ ಶೆಟ್ಟರಂಗಡಿಯು
ಪಾತ್ರ ಪಗಡಿಗೆ ಬನ್ನಿ ಪಕ್ಕದಂಗಡಿಯು


ಧನಕನಕಗೆ ಹಾಡಿರಿ ಶಂಕರ ಕನಕಧಾರ
ಶತ್ರುಮರ್ದನಕೆ ವಿಷ್ಣುವಿನ ದಶಾವತಾರ
ತುರಂಗದಿಂದ ಬುಟ್ಟಿಲಿ ದೇವಕಿ ತನಯ
ಹಾದಿ ಬಿಟ್ಟಿತು, ಓ ಯುಮುನಾ ನದಿಯು

ಪಾರ್ಕಲಿ ತೂಗಿವೆ ಹಸುರಿನ ಕುಸುರಿ
ದಾಲ್ ಸರೋವರದಿ ದೋಣಿ ವಿಹಾರಿ
ಕಾರು ಬೈಕು ಟ್ರ್ಯಾಕ್ಟರ್ ವಿಮಾನ ಸೈಕಲ್
ಆನೆಕುದ್ರೆ ಎತ್ತುಬಂಡಿ ಹಳ್ಳಿಮನೆ ಸುಣ್ಕಲ್

ಹುಲ್ಲು ಗೂಡಲಿ ಹುಟ್ಟಿದವ ಏಸು
ಬರಿ ಮೈಯಲಿ ನಡೆದವ ಗಾಂಧಿ
ಬೆಳೆದಿದೆ ಭಾರತ ಗ್ರಾಮ ಸ್ವರಾಜ್ಯವಿಲ್ಲಿ
ಗೋಲಿ ಚಿಣ್ಣಿದಾಂಡು ಮನೆ ಮಗ್ಗುಲಲ್ಲಿ

ತಾಳ್ಮೆಯು ಶ್ರಮವು ಕಲಾ ಕುಸುರಿಯು
ಉಸಿರಲಿ ಅರಳಿದ ಶ್ರದ್ಧಾನಂದವೆ ಬೆಳಕು
ಅಭಿನಂದನೆ; ಅಭಿವಂದನೆ ಜೈ ಜೈ ಸುಬ್ಬು
ಬೇಗನೆ ಸೇರೋಣ ಮುಂದಿನ ದಸರೆಗೆ

55. ಬಂದರು ಸ್ಕೌಟು ಮಕ್ಕಳು



ಬಾಹುಬಲಿಯ ಬೀಡಿಗೆ
ಶ್ರವಣಬೆಳಗೊಳದ ಕ್ಷೇತ್ರಕೆ
ಹೆಗಲು ಕೊಡಲು ಸೇವಾಕಾರ್ಯಕೆ
ಬಂದರೆಲ್ಲರೂ ಸ್ಕೌಟು ಮಕ್ಕಳು

ಸಾವಿರ ವರಷದಿಂ ನಗುತನಿಂದಿಹ
ಗೆದ್ದುದೆಲ್ಲವ ಭರತನಿಗಿತ್ತ, ತ್ಯಾಗಿ
ವಿರಾಗಿ ಮಹಾವೀರ ಬಾಹುಬಲಿಯ
ಮಹಾಮಜ್ಜನದಿ ಜನಸಾಗರವು

ವಿಂಧ್ಯಗಿರಿಯಲಿ ಬಾಹುಬಲಿಗೆ
ಅಟ್ಟಣಿಯ ಕಟ್ಟಿ ಎರೆದರು ಹಾಲು
ಮೊಸರು ಅರಿಶಿನ ಕುಂಕುಮ
ತರತರದ ಸುಗಂಧ ಓ ದೇವ ರಕ್ಷಿಸು

ಎಲ್ಲ ಗೆದ್ದವಗೆಂತಹ ಮಜ್ಜನ
ಮಜ್ಜನವು ಭವಬಂಧನ ಬಿಡುಗಡೆಗೆ
ನಿನಗೆ ಅರ್ಪಿತ ಸಕಲ ವಸ್ತುವು
ಮರಳಿ ಬರುವುದು ಆಶೀರ್ವಾದದಿ

ಸ್ಕೌಟು ಮಕ್ಕಳ ಮನಸು ನೋಡು
ಸೇವಾಭಾವವು ತುಂಬಿಹುದು, ಯಾತ್ರಾರ್ಥಿ
ಹಿರಿಯರು, ಮಕ್ಕಳು, ಕೈಸಾಗದವರು
ದುಡಿವೆವು ಜನಹಿತಕೆ ನಾಡಬೆಳಕಿಗೆ

ಬಾಹುಬಲಿಯೆ ಹರಸು ಎಲ್ಲರನು
ಶಾಂತಿ ತುಂಬಲಿ ಜಗದಲಿ,
ಸತ್ಯ ಅಹಿಂಸೆಯ ನಾಡಲಾಗಲಿ ಪ್ರಗತಿ
ಬೆಳಗಲಿ ಸುಂದರ ಭರತ ಭೂಮಿಯು



56. ಓ ಭಾರತಿ

ಓ ಭಾರತಿ ಬಹುಭಾಷಾ ಸರಸ್ವತಿ
ವಿಧವಿಧ ಸಾಹಿತ್ಯ ಸಂಗೀತ ಭಾಗೀರಥಿ

ಶತಶತಮಾನದಲಳಿಯದೆ ಉಳಿದು
ಬೆಳಗಿಹೆ ನಮ್ಮಯ ಕತ್ತಲ ಕಳೆದು
ಮುನಿವರ ಕೋವಿದ ಪಂಡಿತ ಪಾಮರ
ಅವರಿವರೆಲ್ಲರ ಉಡಿಯಲಿ ಹಿಡಿದು

ಕಡಲಲಿ ಕಾಡಲಿ ಮೇಡಲಿ ಹಿಮಗಿರಿಯಲಿ
ಏಳಲಿ ಬೀಳಲಿ ಧೂಳಲಿ ಧೂಸರದಲಿ
ಕದನದಿ ಕೆಂಡದಿ ಬೇಯದೆ ಬಸಿಯದೆ
ಶಕುತಿಯ ತಂದೆ ನಮ್ಮಯ ಸೌಭಾಗ್ಯಕೆಂದೆ

ಏಕತಾನದ ಮೀಟನು ದಾಟಿ ತರತರ ರಾಗದಿ
ಜನಮನ ಅರಳಿಸಿ ಪುಷ್ಕಲ ನಿನ್ನೀ ಸಂಸ್ಕೃತಿಯು
ಕಾಲವ ಗೆಲಿದ ಬಹುಪ್ರಿಯ ಬಸಿರಿನ ಐಸಿರಿಯು
ನಿತ್ಯ ನಿರಂತರವಿರಲೀ ಉಸಿರಿನ ಬನಿಯು

ನಾ ಮಿಗಿಲೆಂಬ ಅವ ಕೀಳೆಂಬ ಒಂದೇ ಹೂವು ಜಗವೆಂಬ
ದೈನ್ಯಕೆ ನಮ್ಮನು ತಳ್ಳದಿರು ಹಮ್ಮನು ಮನದಲಿ ತುಂಬದಿರು
ಹರಸಿಹ ನಮ್ಮನು ಬ್ರಹ್ಮದೇವನು ಪ್ರಕೃತಿ ವೈವಿಧ್ಯದಿ
ನೀಗಿಸಿ ಕ್ಷುದ್ರತೆ ತೊಲಗಿಸಿ ಛಿದ್ರತೆ ಹರಸು ನಮ್ಮೆಲ್ಲರನು

57. ಮೆಲು ನಕ್ಕಳು ಅನಸೂಯೆ



ಮೆಲು ನಕ್ಕಳು ಅನಸೂಯೆ

ಅವರು ಬಂದರು ಮೂವರು
ಹೊರಗಿಣಕಲೋ ಬೇಡವೋ
ಅನ್ನೊ ಮೀಸೆ ಚಿಗುರು
ಹೊಳೆವ ಕಂಗಳ ಬೆರಗುನೋಟ
ಸುಪುಷ್ಟ ಸೌಷ್ಟವ ಮೆರಗುಕೂಟ

ಕುಣಿತಿಹನು ರಕ್ಕಸನು ಒಳಗೆ
ತಣಿಸು ಬೇಗದಿ ಹಸಿವ ಬೇಗುದಿ
ನೇಮವೊಂದಿದೆ ನಮಗೆ ತಾಯೆ
ಬತ್ತಲಾಗಿಯೆ ಬಡಿಸು ವಟುಗಳಿಗೆ
ಕಾಯಲಾರೆವು ಅತ್ರಿ ಬರವಿಗೆ

ಮೆಲು ನಕ್ಕಳು ಅನಸೂಯೆ

ಆಸೆಬುರುಕನು ದೇವೇಂದ್ರ
ಅಲುಗದಿರಲಿ ಸಿಂಹಾಸನವೆಂದ
ಪದಿಬದೆಯ ಹೊಳಪು ಅನಸೂಯೆ
ಓಡೋಡಿ ಬಂದ ತುಂಬಿ ಅಸೂಯೆ
ಹುಟ್ಟು ಸಾವಿನ ನಡುವೆ ಬದುಕು
ಸೂತ್ರಧಾರ ತ್ರಿಮೂರ್ತಿ ಬಳಿಗೆ

ಮೆಲು ನಕ್ಕಳು ಅನಸೂಯೆ

ಒಲವು ಶ್ರದ್ಧೆ ಕರ್ತವ್ಯಕೊ
ಅಧಿಕಾರ ಅಂತಸ್ತಿಗೋ
ಹುಂಬತನದಿ ಬುವಿಗೆ ಬಂದರೊ
ತೋರಲು ಮಿಥ್ಯ ಮಾರಾಜನೆ
ಸಾಧ್ವಿಯ ಸತ್ವ ಸತ್ಯರಾಮನೆ

ಮೆಲು ನಕ್ಕಳು ಅನಸೂಯೆ

ಅತ್ರಿ ಕಾಲ್ತೊಳೆದ ನೀರು ಚಿಮುಕಿಸಿ
ತುಂಟ ತರುಣರ ಶಿಶುಗಳಾಗಿಸಿ
ಬತ್ತಲಾಗಿಯೆ ಮೊಲೆಯನೂಡಿಸಿ
ತಣಿದು ತಣಿಸಿ ತಟ್ಟಿ ಮಲಗಿಸಿ
ಮರುಗಿದಳು ಶಚೀಂದ್ರನ ಅತ್ಯಾಸೆಗೆ

ಕಂಡು ಮೆಲು ನಕ್ಕನು ಅತ್ರಿ ಮಹರ್ಷಿ
ಜೋಜೋ ಹಸುಮೊಗದ ತ್ರಿಮೂರ್ತಿ
ಹರಸಿ ಹುಟ್ಟಿರಿ ನಮ್ಮ ಹೊಟ್ಟೆಯೊಳಗೆ
ಯಾರು ಗೆದ್ದರು ಲೋಕದೊಳಗೆ
ಅಧಿಕಾರದಮಲೊ ತಾಯಮಡಿಲೊ

ಮೆಲು ನಕ್ಕಳು ಅನಸೂಯೆ

58. ಬಿಲೆಗೆ



ಇವನೆಲ್ಲವಾಗಿ
ತಾನೆ ಜಗವಾಗಿ
ಪ್ರೇಮವೇ ಬದುಕಾಗಿ
ಅವತರಿಸಿ ಬಂದ

ಸಹಸ್ರಮಾನಗಳು
ಬುವಿಯ ತಂಪಲ್ಲಿ
ಮೈಮರೆತ ಬೀಜಕ್ಕೆ
ಚೈತನ್ಯರೂಪಿಯಾದ

ಕತ್ತಲೆಯೊಳಗವಿತವಗೆ
ಬೆಳಕ ಬಾಗಿನವಿತ್ತು
ನೀನೆ ಅವನೆಂದ

ನುಡಿ ಬಾಡದಿರಲಿ
ನುಡಿ ಧವಳವಾಗಿರಲಿ
ಜೀವ ಸತ್ಕಿಡಿಯೆಂದ

ಹೂರಣವೆ ಹಗಲು
ಸಿರಿ ಮನುಜನೊಡಲು
ಸರಿ ಸಮವೆ ಉಸಿರು
ಸರಿಗಮ ಸಂಪದವೆಂದ

ದುಗುಡ ದುಮ್ಮಾನ
ತಾಪ ಶಮನಕೆ
ಮುಗಿಲ ಉದ್ದಕೂ
ಸಂತಸದ ಚಾಮರ
ಬಿಡಿಸಿದ

ಬಿದ್ದವ ತೆವಳುವವ
ನಡೆವವ ಓಡುವವ
ಎಲ್ಲ
ಬುದ್ದ ಬಾಂಧವರೆಂದ
ಬೆಚ್ಚನಪ್ಪುಗೆಯಿತ್ತ

ಇವನೆಲ್ಲಿದ್ದ
ಹಸಿರಹೊನ್ನ ಚೆಲ್ಲಿದವ
ನಗೆಮೊಗೆದು
ಉಡಿತುಂಬಿದವ
ಖಂಡಿತ ಎಲ್ಲೆಯಿಲ್ಲದವ

ಇಂದು ನೆನಕೆಯೆ ನಿನಗೆ
ನಿತ್ಯ ದಾರಿಯ ಬುತ್ತಿ
ನಮಿಪೆಯೆಂದರೆ
ನುಡಿಯ ಬಡಿವಾರ

ಮೌನವಾದೆನು
ಅದುವೆ
ನಿಜದ ನಮಸ್ಕಾರ.

(ಬಿಲೆ= ಸ್ವಾಮಿ ವಿವೇಕಾನಂದರ ತಾಯಿ ಭುವನೇಶ್ವರಿ ದೇವಿಯವರು ಬಾಲಕ ನರೇಂದ್ರನಿಗಿಟ್ಟಿದ್ದ ಮುದ್ದಿನ ಹೆಸರು.)

59. ದೋಸೆ ದೋಸ್ತಿ



ಯಾರಿಗುಂಟು ಯಾರಿಗಿಲ್ಲ ಇಂಥಾ ಭಾಗ್ಯ
ಗರಿಗರಿ ಮಸಾಲೆದೋಸೆ ನಮ್ಮ ಭಾಗ್ಯ

ಅಕ್ಕಿಕಾಳು ಉದ್ದಿನಬೇಳೆ ಎಂಥಾ ಜೋಡಿ
ಕಾಯಿಚಟ್ನಿ ಆಲೂಪಲ್ಯ ಅದ್ಭುತ ಮೋಡಿ

ಕೆಂಪುಚಟ್ನಿ ಸಾಗುಪಲ್ಯ ರುಚಿ ನೋಡಿ
ಗಟ್ಟಿಚಟ್ನಿ ಗೋಲಿಬೆಣ್ಣೆ ಕರಿಗಿತು ಓಡಿ

ರುಬ್ಬುಕಲ್ಲು ಗಡಗಡಂತಾ ಶಬ್ದವೇಧಿ
ಓಡೋಡಿ ಬರುವರಣ್ಣ ಎಲ್ಲಾ ಬೀದಿ

ದೋಸೆ ಹಿಟ್ಟು ಸೌಟಿನಲ್ಲಿ ಕಲಸೋದ್ನೋಡಿ
ಅಡ್ಗೆಮನೆಗೆ ಬಗ್ಗಿ ನೋಡದ್ರೆ ತುಂಬಾ ಗಡಿಬಿಡಿ

ಅಕ್ಕಪಕ್ಕ ಟೇಬಲಲ್ಲಿ ದೋಸೆ ಸಪ್ಲೆ
ಜೊಲ್ಲುಬಾಯಿ ಹಸಿದಹೊಟ್ಟೆ ಕವಕವ ಕಟ್ಲೆ

ಸುತ್ತ ಮುತ್ತ ಹೆಣ್ಣುಗಂಡು ಸಾಲು ಜೋಡಿ
ಅಜ್ಜಅಜ್ಜಿ ಒಂಟಿಬಂಟಿ ಫ್ರೆಂಡ್ಲುಗಿಂಡ್ಸು ಎಲ್ಲಾಕೂಡಿ

ಕಾದಹೆಂಚು ಚುರ್ ಚುರ್ ಅನ್ನೊ ಸದ್ದೇ ಸಂಗೀತ
ಆಹಾ ಬಂತು ಗರಿಮುರಿ ದೋಸೆ ಮನದ ಇಂಗಿತ

ಸೆಟಕೊಂಡ ಹುಡ್ಗಿ ನಗ್ತಾಳೆ ನೋಡಿ ದೋಸೆ ಮ್ಯಾಜಿಕ್ಕು
ತಿನ್ತಾಯಿದ್ರೆ ಇನ್ನೊಬೇಕು ಬೇಕು ಅನ್ನೋದೆ ಟ್ರಿಕ್ಕು

ಎಂಟಿಆರು ಸಿಟಿಆರು ಸಿದ್ದಣ್ಣನಂಗಡಿ
ಅಡಿಗರು ವಿದ್ಯಾರ್ಥಿ ಜನತಾ ದರ್ಬಾರು

ಊರೂರಿಂದ ದೋಸೆ ಹೈಕ್ಳು ಮೆಲ್ಗೆ ಬಂದವ್ರೆ
ರಾಮ ಕೃಷ್ಣ ಶಿವ ಇಂದ್ರ ಭವನ ಕಟ್ಟೌರೆ

ದಾವಣಗೆರೆ ಬೆಣ್ಣೆ ಸೈಜು ಅಬ್ಬಬ್ಬಬ್ಬಾ
ದೋಸೆ ಗುಟ್ಟು ಬಿಡೊವಲ್ರು ತಿನ್ನೋಣ ಬನ್ರಪ್ಪಾ

ಹೆಣ್ತಿ ಬಯ್ದರೂ ಕದ್ದುತಿಂದ್ರೆ ಸ್ವರ್ಗ ಕಣಪ್ಪಾ
ದೋಸೆಮ್ಯಾಲೆ ಪದ್ಯ ಬರದ್ರೂ ತೃಪ್ತಿ ಎಲ್ಲಪ್ಪಾ

60. ಕನ್ನಡತಾಯಿಗೆ ನಮನ




ತಾಯಿ
ನಿನ್ನ ಭಾವಕ್ಕೆ ಎಂತು ಸ್ವರವು ಮೂಡಿತೊ
ಸ್ವರವು ತಾನು ಮನವ ಮೀಟಿ ನಾದ ಹುಟ್ಟಿತೊ
ನಾದಕ್ಕೆ ಗುಕ್ಕು ಸಿಕ್ಕಿ ಪದವು ಹುಟ್ಟಿತೊ
ಪದಕೆ ತಾನು ರೆಕ್ಕೆ ಬಂದು ಅರ್ಥ ಹುಟ್ಟಿತೊ
ಅರ್ಥಕ್ಕೆ ತಣಿದ ಮನವು ಬದುಕು ಬೆಸೆಯಿತೊ

ಬದುಕು ತಾನು ಜ್ಯೋತಿಯಾಗಿ ಹಾಡು ಹಾಡಿತೊ
ಹಾಡಿಗೆಂತು ಭಾಷೆಯೆಂಬ ವಸ್ತು ಸಿಕ್ಕಿತೊ
ಭಾಷೆಯೆಂಬ ಚಕಿತವಸ್ತು ಸೇತುವಾಯಿತೊ
ಸೇತು ತಾನು ಮನುಜ ಕುಲವ ಬೆಸೆದು ಬಿಟ್ಟಿತೊ
ಬೆಸೆದು ಬಂಧ ಸಂಬಂಧ ಅರಳಿ ಬಿಟ್ಟಿತೊ

ಕನ್ನಡವೆಂತು ನನ್ನ ನುಡಿಯ ಜೀವವಾಯಿತೊ
ನುಡಿಯು ತಾಯಿ ಹಾಲುಕನ್ನಡ ತಂಪನೆರೆಯಿತೊ
ತಂಪು ಕೋಟಿ ಜನಮನದ ಮಿಡಿತವಾಯಿತೊ
ಮಿಡಿದು ಸಹಸ್ರಾರು ವರುಷ ನಮ್ಮತನವ ತೋರಿತೊ
ನಮ್ಮತನ ದೈವಲೀಲೆ ಕನ್ನಡವು ಎನ್ನದಾಯಿತೊ

ಒಳಗು ಹೊರಗು ಕನ್ನಡವೆನಗೆ ತೋರಿತೊ
ಕನ್ನಡವೇ ನನ್ನ ಮನದ ಭಿತ್ತಿಯಾಯಿತೊ
ಭಿತ್ತಿಯದು ಮಾತಿಗಂತೂ ದಾರಿಯಾಯಿತೊ
ದಾರಿಯದು ವಿಶ್ವವನ್ನೇ ಬಿಚ್ಚಿ ಇಟ್ಟಿತೊ
ವಿಶ್ವದ ಬೆರಗು ಕಲಿಸಿ ಉಸಿರು ಕನ್ನಡವಾಯಿತೊ

ಶರಣು ನಿನಗೆ ನಮೋ ನಮೋ ಕನ್ನಡ ತಾಯಿ
ನಿತ್ಯ ಮನದಿ ಮಿಡಿದು ಬರುವ ಮಹಾತಾಯಿ
ಲೇಖನಿಯಲಿ ಕನ್ನಡವ ತುಂಬಿ ತರುವೆ ನೀನು
ಬದುಕ ಬಿಂಬವಾಗಿ ಹಾಡು ಬರೆಸುವೆ ನೀನು
ಅಕ್ಷರವ ಜಗಕೆ ಹಂಚಿ ಧನ್ಯ ನಾನು ಧನ್ಯ ನಾನು.



61. ರಂಗಪ್ಪ ಅವನ್ಯಾರಪ್ಪ



ಗುರು ... ಗುರುಕ ... ಗುರುಕಾನ.........
ಗುರು ... ಗುರುಕ ... ಗುರುಕಾನ.........

ಬಿದರಿನ ಸೋಲೆಯ ಮಕ್ಕಳು ನಾವು
ರಂಗಪ್ಪ ಮಾದಪ್ಪ ಜಡೆಯಪ್ಪ ನಂದ್ಯಾವ್ರು
ಕುಣ್ಯೋಣ ಬನ್ನಿ ಕುಣ್ಯೋಣ
ಕೋಟೆ ಮಾರಮ್ಮ, ಕೊಟ್ಟದ ಪುಸ್ತಮ್ಮ
ಚಿಕ್ಕದ್ಯಾವಮ್ಮ ನಮ್ಮಮ್ಮದೀರು
ಬನ್ನಿಕುಣ್ಯೋಣ ಕುಣ್ಯೋಣ
ಪಿನಾಸಿ ಸಬ್ದಕೆ ಮೈಮರೆತು
ಕುಣ್ಯೋಣ ಬನ್ನಿ ಕುಣ್ಯೋಣ

ಮೀಸೆಬಂದ್ ಹೈಕಳದ್ದು ರಂಗುರಂಗಿನಾಟ
ತರತರದ ಮಂತ್ರ ಮೈಮಾಟ
ಮನಸೆಳೆದ ಹುಡ್ಗೀರನ ಸೆಳೆಯೋವಾಟ
ಎಸೆದಳೆಂದರೆ ಕಲ್ಲು ಎತ್ತೋಡು ಕಾಡಿಗೆ
ಬರಬ್ಯಾಡ ಹಾಡಿಗೆ ಇನ್ನೆಂಟು ದಿನ

ಗುರು......ಗುರುಕ.....ಗುರುಕಾನ..
ಗುರು......ಗುರುಕ........ಗುರುಕಾನ.

ಹುಡ್ಗೀಯ ಕೈಹಿಡಿದು
ಯಜಮಾನ್ನತ್ರ ಬಾರೋ
ಕೊಟ್ಟುಬಿಡು ಹನ್ನೆರಡಾಣೆ
ಬೊಮ್ಮಗೌಡರ ಕಿರಿಮಗಳು
ಪುಸಮಾಲೆ ಕೈಹಿಡಿದು ರಂಗಯ್ಯ ಕೊಟ್ಟ
ಮುತ್ತಿನ ಸರದಾಗೆ ಹನ್ನೆರಡು ಮಣಿಯೋ

ದೊಗ್ಗಾಡು ಜಿಗ್ಗಾಡು ತೋಪ್ಗಾಡು ಬೊಳ್ಗಾಡು
ಕಾಡಿನ ಪೋಡಿಯೇ ನಮ್ಮಮನೆ
ಕೋಪಿಲ್ಲ ಕೆಂದಿಲ್ಲ ರೋಷಿಲ್ಲ
ಸೋಲಿಗ ಸೋಲದೆ ಬದುಕ್ಯಾನ
ಕಾಡುಕೊಚ್ಚದೆ ಅದರ ಅಂಗಳದಾಗೆ
ಸುಮ್ಮನದ ಜೀವ ಸುಂದರ ಸಂಸಾರ
ಹಣ್ಣಾದಹಣ್ಣು ನಮಗೀವ ರಂಗಯ್ಯ
ಮೂರುವರ್ಸ ಉತ್ತಭೂಮಿ ಬಿಟ್ಟು
ಹೊರಟೇವು ಏಳ್ವರ್ಸ ರಸತುಂಬ್ಲಿ
ಕೊಟ್ಟದ ಪುಸ್ತಮ್ಮ ಶಕ್ತಿತುಂಬ್ಲಿ

ಗುರು.....ಗುರುಕ.....ಗುರುಕಾನ.........
ಗುರು...ಗುರುಕ......ಗುರುಕಾನ.....

ರಾಗಿರೊಟ್ಟಿ ಮಾಡೇವು ಕುಂತು ಉಂಡೇವು
ರೊಟ್ಟಿಹಬ್ಬ ಕುಣ್ಯೋಣ ಬನ್ನಿ ಕುಣ್ಯೋಣ
ಎಳೆಹಲಸಿನ ಪಲ್ಯವೋ ಪಾಯಸವೋ
ದೊಡ್ಡ ಸಂಪಿಗೆ ಮರದ ಸುತ್ತಾಕಿ ಬೇಡೋಣ
ಜಡೆದೇವ ಕಾಡಿಗೆ ಬೆಂಕಿಬ್ಯಾಡ್ವೋ

ಗುರು......ಗುರುಕ ......ಗುರುಕಾನ.
ಗುರು.......ಗುರುಕ............ಗುರುಕಾನ.....

62. ಅಮೇಜಾನ್ಗೆ ಆರ್ಡರ್



ಬನ್ನಿ ಗಳೆತಿಯರೆ ಬೊಂಬೆ ನೋಡೋಣ
ಮನೆಯಿಂದ ಮನೆಗೆ ಅಕ್ಷತೆಯ ಹಿಡಿದು
ಚಂದದ ಬೊಂಬೆಗೆ ಬಣ್ಣಬಣ್ಣದ ಕರಣ
ಮನದ ಮೂಲೆಯ ಅದ್ಭುತ ಅನಾವರಣ

ನಾವು ಕಾಣದಾ ಕಾಡು ಇಲ್ಲಿದೆ ನೋಡು
ಬಾನೆತ್ತರಕೆ ಬೆಳೆದ ತರತರದ ವನರಾಜಿ
ರಾಗಿ ಪೈರಂತೆ ಇದು, ಅದು ಕೊತ್ತಂಬರಿ
ಮಿಕ್ಕೆಲ್ಲ ಗಿಡಮರ ರಂಗು ಪ್ಲಾಸ್ಟಿಕ್ಕು ಗರಿ

ಹುಲಿ ಸಿಂಹ ಕರಡಿ ಅಲ್ಲಿ ಆನೆಯ ಗರಡಿ
ಹೆಬ್ಬಾವು ಮೊಸಳೆ ಅಕ್ವೇರಿಯಂ ಮೀನು
ಮೋದಿ ತಾತನ ಬುಲೆಟ್ಟು ಟ್ರೈನು ಇಲ್ಲಿ
ಮೈಸೂರುಟಾಂಗಾ ಪಕ್ಕದಲಿ ಗುಜರಿ ಸೈಕಲ್ಲು

ಏನು ಕೊಡುವರೋ ಏನೋ ಗೊಂಬೆತಿಂಡಿ
ಮಕ್ಕಳೆಲ್ಲ ಬರುತಿಹರು ನೋಡಲು ರಾಜಾರಾಣಿ
ಅಜ್ಜ ಅಜ್ಜಿಯ ಮಾತಿಗೆ ಹಾಕಲಿ ಕಡಿವಾಣ
ಪ್ಲಾಸ್ಟಿಕ್ಕು ತೋರಣ ಹತ್ತು ಗ್ರಾಂ ಹೂರಣ

ನೂರೆಂಟು ಮನೆಗೆ ನೂರೆಂಟು ಹಾದಿ, ಹಾರಿಹಾರಿ
ಹೇಗೆ ಹೋಗಲಿ, ರೇಶಿಮೆಯ ಲಂಗ ಜಂಪರ್
ಸುರಿವ ಮಳೆಗೆ ರಸ್ತೆಕಾಲುವೆಯೇ ನಮ್ಮೂರು
ಅಮೇಜಾನ್ಗೆ ತಿಳಿಸು ಬೇಗ ಬೋಟು ಕಳಿಸು

63. ನಾಡಧ್ವಜ

(ಮ ರಾಮಮೂರ್ತಿ ಅವರಿಗೆ ಅರ್ಪಣೆ)



ಚಲ್ಲಿ ಅರಿಸಿಣ ಕುಂಕುಮ
ನಾಡಧ್ವಜವಿದು ಸಂಭ್ರಮ
ಕಳೆದು ಸಂಕಟ ವಿಭ್ರಮ
ಗುಡಿಯರಳಿತು ರಾಮರಾಮ

ತಳೆದು ಕನ್ನಡದ ಅಸ್ಮಿತೆ
ಬೆಳಗು ನಡೆನುಡಿ ಸುಸ್ಮಿತೆ
ಕೂಡಿ ನಡೆಯುವ ಜಾಗ್ರತೆ
ಐಕ್ಯ ಭಾರತವೆ ಸಂಹಿತೆ

ವಚನಕಾರರು ದಾಸ ಕವಿಗಳು
ಕುರಿತೋದದೆಯೆ ಜನಜಾಣರು
ಕಲಿ ಕಲಾವಿದ ಆಟ ಚತುರರು
ಮಣ್ಣಿನಯೋಗಿ ಸಹೃದಯರು

ನಾನು ಅವರೊಳು ಅವರು ನನ್ನೊಳು
ವೈವಿಧ್ಯಮಯವೀ ಸಾರ ತರುಲತೆ
ಬಹುಸಂಸ್ಕೃತಿಯ ಕೃತಿ ನಮ್ಮ ಭಾರತಿ
ಅವಳ ಮಡಿಲ ಮಗುವೆ ಕನ್ನಡತಿ

64. ಆದಿತ್ಯ ಶೆಟ್ಟಿ

ಮೈಸೂರು ಪೇಟವ ಸುತ್ತಿ ಕೆಂಪು ತಿಲಕವನಿಟ್ಟು
ಚಿನ್ನದಸರ ತೊಟ್ಟು ಕಡಕುಗಳ ಕಿವಿಯಲ್ಲಿಟ್ಟು
ಮಿಂಚುಗಣ್ಣನೆ ನೆಟ್ಟು ಇಲ್ಲಿ ಬನ್ನಿರಿ ಇಲ್ಲಿ
ಅನ್ನುತ್ತ ಕರೆಯುವನು ಆದಿತ್ಯ ಶೆಟ್ಟಿ

ಬೇಕಿದ್ದು ಕೇಳಿರಿ ಅಂಗಡಿಯಲುಂಟು
ಹೆಚ್ಚೇನು ಬೆಲೆಯಿಲ್ಲ ಪರಿಶುದ್ಧ ಮಾಲು
ದೇಶ ವಿದೇಶದ ಅಸಲಿ ಸರಕಿನ ಅಂಗಡಿ
ಅನ್ನುತ್ತ ಕರೆಯುವನು ಆದಿತ್ಯ ಶೆಟ್ಟಿ

ಮಕ್ಕಳು ಬನ್ನಿರಿ ಮುದುಕರು ಬನ್ನಿರಿ
ಬೇಕಾದ ವಸ್ತು ಹೆಣ್ಣು ಗಂಡಿಗೆ ಅನ್ನಿರಿ
ಎಲ್ಲೂ ಇಲ್ಲದ್ದು ಇಲ್ಲುಂಟು ನೋಡಿರಿ
ಅನ್ನುತ್ತ ಕರೆಯುವನು ಆದಿತ್ಯ ಶೆಟ್ಟಿ

ಮಾತಿಗೆ ಮರುಳಾಗಿ ನಗುವಿಗೆ ಬೆರಗಾಗಿ
ಅಂಗಡಿಯ ತಳಕಿಗೆ ಸೋವಿಯ ಬೆಲೆಗಾಗಿ
ಸೋತು ಕೊಳ್ಳದಿರಿ ಬೇರೆ ಅಂಗಡಿಯಲ್ಲಿ
ಅನ್ನುತ್ತ ಕರೆಯುವನು ಆದಿತ್ಯ ಶೆಟ್ಟಿ

ಈಗೊಮ್ಮೆ ನೋಡಿರಿ ಮತ್ತೊಮ್ಮೆ ಬರುವಿರಿ
ಕೊಟ್ಟದ್ದು ಕೆಡದು ಕೆಟ್ಟದ್ದು ನಾ ಕೊಡೆನು
ಜಗದಲ್ಲಿ ಸಿಕ್ಕದು ಇಂತಹ ತಾಜಾ ಮಾಲು
ಅನ್ನುತ್ತ ಕರೆಯುವನು ಆದಿತ್ಯ ಶೆಟ್ಟಿ

65. ಮಾಮಿಮನೆ ಕೃಷ್ಣನ ಹ್ಯಾಪಿಬರ್ತ್‌ಡೇ

ಬಾರೋ ಆದಿ ಅಂತ ಪಕ್ಕದ್ಮನೆ
ಮಾಮಿ, ಅವ್ನ ಫ್ರೆಂಡು ಶ್ಯಾಮಿ
ಕರೆದರು ಆದಿನ ಕೃಷ್ಣಾಷ್ಟಮಿಗೆ

ಭರ್ಜರಿ ತಿಂಡಿ ಮಾಡುವರಂತೆ
ಆದಿಗೊಂದು ಗಂಟು ಉಂಟಂತೆ
ಬ್ಯಾಟು ಬಾಲು ಜೊತೆಗಂತೆ

ತರತರ ರುಚಿ ಶುಚಿರುಚಿ ತಿಂಡಿ
ಹಾಡು ಹಸೆಯು ಕೂಡಿಹುದಂತೆ
ಬಣ್ಣದ ಮಂಟಪ ಸುಂದರವಂತೆ

ಹೂವು ಹಣ್ಣು ತೂಗುವುದಂತೆ
ಮನೆಯಲಿ ಅಲಂಕಾರವಂತೆ
ಕೃಷ್ಣಮಾಮಿಗೆ ಹುಟ್ಟುಹಬ್ಬವಂತೆ

ಸಂಜೆಗೆ ಬರುವನು ಪುಟಾಣಿ ಕೃಷ್ಣ
ಮನೆಯಲಿ ಪುಟ್ಟಪಾದದ ರಂಗು
ಕೊಳಲಿನ ಗಾನವು ಸವಿಜೇನು

ಗಂಟೆಯ ಸದ್ದಲಿ ಮಂತ್ರವ ಹೇಳಿ
ಕೃಷ್ಣಸ್ವಾಮಿಗೆ ಆರತಿ ಬೆಳಗಿ
ಮಾಮನು ಪೂಜೆ ಮಾಡುವರು

ನೈವೇದ್ಯಕೆ ಆಹಾ ಚಕ್ಕುಲಿ
ಕೋಡುಬಳೆ ಮುಚ್ಚೋರೆ
ನಿಪ್ಪಟ್ಟು ಮುರುಕು ತೇಂಗೊಳಲು

ಅಂಟಿನ ಉಂಡೆ ರವೆ ಉಂಡೆ
ಬೇಸನ್ ಲಾಡು ಮೈಸೂರ್ ಪಾಕು
ಕೊಬ್ಬರಿ ಬರ್ಫಿ ಪಾಲ್ಪಾಯ್ಸ

ಪುರಿ ಉಂಡೆ, ರವೆ ಉಂಡೆ
ಕಡಲೆಕಾಯಿ ಚಿಗಳಿ ಉಂಡೆ
ಸಜ್ಜಪ್ಪ ಹೋಳಿಗೆ ಓಂಪುಡಿಯು

ಖಾರ ಬೂಂದಿ ಖಾರಾ ಸೇವೆ
ಲಾಡು ಹಲ್ವಾ ಜಿಲೇಬಿ ಜಾಂಗೀರ್
ಪುಳ್ಳಂಗಾಯಿ ಉಂಡೆ ಅತಿರಸವು

ಶಾಲ್ಯಾನ್ನ, ಚಿತ್ರಾನ್ನ, ತುಪ್ಪಾನ್ನ
ಪುಳಿಯೋಗರೆ ಪೊಂಗಲ್
ವಾಂಗೀಬಾತು, ರಾಯತವಮ್ಮ

ಕೆನ್ನೆಯ ಚಿವುಟಿ ಮುದ್ದನೆ ಮಾಡಿ
ತಿನ್ನಲು ತಿಂಡಿ ಊದಲು ಕೊಳಲು
ನವಿಲುಗರಿ ಟೋಪಿ ಕೊಟ್ಟಿಹರು

ಎಂತಹ ಜಾಣೆ ಪುಟಾಣಿ ಶ್ಯಾಮಿ
ಮರೆಯದೆ ನನ್ನನು ಕರೆಯುವಳು
ಕುಣಿಯುತ ಪೂಜೆ ಮಾಡುವಳು

ಪಾಪ ಚಿಕ್ಕವನು ಅಮ್ಮ ಮುದ್ದುಕೃಷ್ಣನು
ಅವನ ಬರ್ತಡೇಗೆ ಅಷ್ಟೊಂದು ತಿಂಡಿ
ನನ್ನ ಬರ್ತಡೇಗೂ ಅಷ್ಟೇ ಮಾಡಮ್ಮ

66 ನಮಿಪೆ ಶಾರದೆಯ




ನಮಿಪೆ ಶಾರದೆಯೆ ನಿನ್ನ ಪದತಲಕೆ
ಹರಸು ಬೊಮ್ಮನ ವಾಣಿಯೆ

ಜಗದ ಮಿಡಿತದ ಬೆಡಗನೊಡೆದು
ಅರಿವ ಬೆಸೆದಿಹ ಅಂತರವಾಣಿಯೆ
ಒಳಗೂ ಹೊರಗೂ ಅರ್ಥ ಬೆಳಗಿದ
ಜ್ಞಾನ ವಿಜ್ಞಾನ ಸುಜ್ಞಾನ ವಾಹಿನಿಯೆ

ಮುಗಿಲಿಗೆಮ್ಮ ಚೇತನವ ಚಿಮ್ಮಿಸಿ
ಜಡತೆ ಕಳೆವ ಸ್ಫೂರ್ತಿ ತರಂಗಿಣಿಯೆ
ಮೇರೆಯರಿಯದ ಸಾಧ್ಯತೆಯನೆಲ್ಲ
ತೆರೆದು ತೋರಿದ ಸಂಜೀವಿನಿಯೆ

ತುಂಬಿ ಶಕ್ತಿಯನು ನಮ್ಮ ಮನಸಿಗೆ
ವಿದ್ಯಾಬುದ್ಧಿಯ ನೀಡುವ ತಾಯಿಯೇ
ಶರಣು ನಿನಗೆ ಶಿರಸಾಷ್ಟಾಂಗವು
ಕೃತಜ್ಞನು ಎಂದೆಂದೂ ಶಾರದೆಯೇ

67. ಚಂದದೂರಿನ ಪಾರಿವಾಳ



ಚಂದದೂರಿನ ಮಧ್ಯದಲ್ಲಿ
ಇದ್ದಿತೊಂದು ಹಳೆಯ ಗುಡಿಯು
ಗುಡಿಯ ಮಾಡಲಿ ಮನೆಯ ಮಾಡಿ
ಹಾಡಿ ಕುಣಿಯುತಲಿದ್ದಿತೊಂದು
ಪಾರಿವಾಳದ ಪರಿವಾರವು

ವರುಷಕೊಮ್ಮೆ ಜಾತ್ರೆ ಬರಲು
ಸುಣ್ಣಬಣ್ಣವ ಮಾಡ ಹೊರಟರು
ಹಕ್ಕಿ ಹಾರಿತು ಹತ್ತಿರದ ಇಗರ್ಜಿಗೆ

ಬಂದೆ ಬಂತು ಕ್ರಿಸ್ಮಸ್ ಹಬ್ಬ
ಗಂಟೆ ಗೋಪುರ ಎಲ್ಲ ಶುಚಿಯು
ಏರಿ ಕ್ರಿಸ್ಮಸ್ ಮರವು ಮುಗಿಲಿಗೆ

ಮನೆಯ ಹುಡುಕುತ ಪಾರಿವಾಳವು
ಮಸೀದಿ ಮಾಡಲಿ ಗೂಡುಕಟ್ಟಿ
ಹು..ಹೂ....ಎನ್ನುತ ಹಾಡಿತು

ರಂದಾನ್ ಹಬ್ಬವು ತಿರುಗಿ ಬರಲು
ನಿತ್ಯ ಪ್ರಾರ್ಥನೆ ಸುಣ್ಣ ಬಣ್ಣ
ಹಕ್ಕಿ ಮರಳಿತು ಹಳೆಯ ಗುಡಿಗೆ

ಗೋಪುರದಲಿರಲು ಒಂದು ದಿನವು
ನಡೆಯಿತೂರಲಿ ದೊಡ್ಡಗಲಭೆ
ರಕುತ ಬಾನಿಗೆ ಚಿಮ್ಮಿತು

ಯಾಕೆ ಅಮ್ಮ ? ಏನು ಆಯ್ತು?
ಆರಾಧನೆಗೆ ಆಕ್ರಂದನವೇ


ದೇವಸ್ಥಾನದ ಹಿಂದುಗಳು
ಇಗರ್ಜಿಯ ಕಿರಿಸ್ತಾನರು
ಮಸೀದಿಯ ಮುಸಲ್ಮಾನರು
ನಡೆದಿದೆ ಮಿಗಿಲು ಮೇಲಾಟವು

ಅಮ್ಮ ನಾವು ದೇವಸ್ಥಾನದಿ
ಇಗರ್ಜಿ ಮಸೀದಿಯಲಿ
ಆಗಿದ್ದೆವು ಬರಿಯ ಪಾರಿವಾಳ
ಮನುಜರಲ್ಲವೆ ಇವರು ಏಕೆ
ಹಿಂದೂ ಕ್ರೈಸ್ತ ಮುಸಲ್ಮಾನರು

ನಾವು ದೇವಗೆ ಬಲು ಸಮೀಪ
ಅದಕೆ ಇಹೆವು ಇಷ್ಟು ಮೇಲೆ
ಮನುಜರೆಮ್ಮ ಕಾಲ ಕೆಳಗೆ
ಎಂದು ಕಲಿವರು ಕೆಳೆತನ
ಕಳೆದು ಬದುಕಲು ಹಗೆತನ

(ವಾಟ್ಸಪ್ ಪ್ರಸ್ತುತಿಯೊಂದರ ಸ್ಫೂರ್ತಿಯಿಂದ)

68. ಅಜ್ಜಿಯ ಸಂಚಿ



ಬೆರಗು ಮೂಡಿದೆ ಮಕ್ಕಳಿಗೆ
ಅಜ್ಜಿಯ ಸಂಚಿಯ ಒಳಗೇನಿದೆ

ಎಲೆ ಅಡಿಕೆ ಸುಣ್ಣವೋ
ನಶ್ಯದ ಪುಟಾಣಿ ಡಬ್ಬವೋ
ತಾಮ್ರದ ತೂತು ಕಾಸೋ

ಅಜ್ಜ ಅಜ್ಜಿಯ ಹಳೆ ಚಿತ್ರವೋ
ಅವರಮ್ಮನ ಕಾಲುಂಗುರವೋ
ಮಾರಮ್ಮನ ತಾಯತವೋ

ಬೊಚ್ಚು ಬಾಯಿ ಜಾಣೆ ಅಜ್ಜಿ
ಮಕ್ಕಳ ಕಣ್ಣಿನ ಬೆರಗು ಕಂಡು
ಕುಟ್ಟಾಣಿ ಕುಟ್ಟುತ್ತ ಹೇಳುವಳು

ದೆವ್ವದ ಕಥೆಯೊ ದೇವರ ಕಥೆಯೊ
ರಾಜ ರಾಣಿ ಪ್ರೇಮದ ಕಥೆಯೊ
ಹುಡುಗಿ ತಾನಾಗಿದ್ದ ಕಥೆಯೊ

ಕೆನ್ನೆಯ ಚಿವುಟಿ ಮುತ್ತನಿಟ್ಟು
ಬತ್ತಾಸು ಕೊಟ್ಟು ಹೇಳುವಳು
ಚಿತ್ರವಿಚಿತ್ರದ ಕಥೆ ತರತರದಿ

ಅಜ್ಜಿಯ ಸಂಚಿಯಲಿ ಕಾಲನು ಬಂಧಿ
ಅವಳ ಕಥೆಯೊ ಬಣ್ಣದ ಬೂಂದಿ

69. ಸ್ಕೂಲಿಗೆ ಹೋಗಲ್ಲ

ಸ್ಕೂಲಿಗೆ ಹೋಗಲ್ಲ ಅಮ್ಮ
ಕೊರೊನ ತುಂಬಿದೆ ಜಗವೆಲ್ಲ
ಪೀಡಿತರು ಮನೇಲಿ ಕೋಟಿ ಜನ
ಸತ್ತಿಹರಂತೆ ಸಾವಿರಾರು ಜನ

ವ್ಯಾನಲ್ಲಿ ತುಂಬ್ತಾರೆ ಮಕ್ಳೇ ಮಕ್ಳು
ಒಬ್ಬರ್ಮ್ಯಾಲೊಬ್ಬರು ಕಡಕ್ ಸವಾರಿ
ಅಜ್ಜ ಬರಲ್ವಂತೆ ವ್ಯಾನಿನ ಹತ್ರಕೆ
ಅಜ್ಜಿಗೆ ಟೈಮಿಲ್ಲ ನೀನೇ ಹೇಳು

ಆಟಕೂಟ ಇಲ್ಲ ಮುಖಕ್ಕೆ ಮಾಸ್ಕಮ್ಮ
ಡ್ಯಾನ್ಸು ಡ್ರಾಮ ಇಲ್ಲದ ಸ್ಕೂಲಮ್ಮ
ಅಸೆಂಬ್ಲಿ ಬರ್ತಡೇ ಇಲ್ಲದೆ ಬೇಜಾರಮ್ಮ
ನೊ ಶೇಕ್ ಹ್ಯಾಂಡು ದೂರ ನಿಲ್ಲಮ್ಮ

ಕ್ಲಾಸಲ್ಲಿ ಬೆಂಚಲ್ಲಿ ಸೋಷಿಯಲ್ ಡಿಸ್ಟೆನ್ಸು
ಲೈಬ್ರರಿಲಿ ಸಿಲ್ವರ್ ಫಿಶ್ಶೂ ಸ್ಯಾನಿಟೈಸು
ಕ್ಯಾಂಟಿನು ಡಬ್ಬ ಖಾಲಿ ಇಲ್ವಂತೆ ಸ್ವೀಟ್ಸು
ಟೂರಿಲ್ಲ ಗೇಮ್ಸಿಲ್ಲ ಡಿಬೇಟು ಟುಸ್ಸುಪುಸ್ಸು

ಅಜ್ಜ ಮನೇಲಿ ಅಜ್ಜಿ ಮನೇಲಿ
ಅಪ್ಪ ಅಮ್ಮನ ಕೆಲ್ಸ ಮನೇಲಿ
ತಂಗಿ ಕಮಂಗಿ ಇರ್ತಾಳೆ ಮನೇಲಿ
ನಾನೊಬ್ನೆ ಹೋಗ್ಬೇಕಾ ಸ್ಕೂಲ್ಗೆ

ನೆಟ್‌ನಲ್ಲೆ ಪಾಠ ಹೊಂನಲ್ಲೆ ವರ್ಕು
ಹಾಲಲ್ಲಿ ಕಬಡ್ಡಿ ಅಪ್ಪನ ಸಾತು
ಮುಂದಿನ ವರ್ಷ ಶಾಲೆ ಗ್ಯಾರೆಂಟಿ
ಈ ವರ್ಷ ಮಾಡ್ಸಿ ಸುಮ್ಮೆ ಪಾಸು

70. ದೀಪಗಳ ದೊರೆಯೇ



ಹೆದರಿಸದಿರು ಕಾವಳವೇ
ಹೆಚ್ಚು ಸಮಯ ನಿನಗಿಲ್ಲ
ಇನ್ನೇನು ಬರಲಿಹನು
ದೀಪಗಳ ದೊರೆಯು

ಕಪ್ಪು ಬಿಳುಪಿನ ದ್ವಂದ್ವ
ಇನ್ನು ನಡೆಯದು ಕಂಡ್ಯಾ
ಸರತಿಯನು ನಡೆಸುವನು
ದೀಪಗಳ ದೊರೆಯು

ನಿನಗೆ ನೀನೇನೆಂದು ಕೊಂಡಿಹೆ
ಅವನ ಬೆಳಕಲಿ ನಿನ್ನ ಬೊಂಬೆ
ಜಗದ ಶ್ವಾಸಕ್ಕೆ ವಿಶ್ವಾಸವಿತ್ತವನು
ದೀಪಗಳ ದೊರೆಯು

ಉಸಿರು ನೀನುಂಡು ತೇಗಲಾರೆ
ಹಸಿರು ಅವನಿತ್ತ ಈ ಬದುಕು
ಜಗ ಝುಗಿಸಿ ಕಾಯುವನು
ದೀಪಗಳ ದೊರೆಯು

ಮನುಕುಲಕೆ ಶಾರ್ವರಿಯು
ಕಲಿಸಿಹಳು ವಿನಯದ ಪಾಠ
ಶರಣಾಗತಿಯಲಿ ನಾ ಕರೆವೆ
ಬಾರೋ ದೀಪಗಳ ದೊರೆಯೆ

ಸಾಹಿತ್ಯರಾಜಿಯ ಸುಂದರ ಸುಮಗಳು

ಸ್ನೇಹಶೀಲ, ಕ್ರಿಯಾಶೀಲ, ಒಳ್ಳೆಯ ಮಾತುಗಾರ ಕವಿಮಿತ್ರ ಬಿ.ಎಸ್. ರವೀಂದ್ರರ ಇನ್ನೊಂದು ಕವನ ಸಂಕಲನ ಬೆಳಕು ಕಾಣುತ್ತಿರುವುದು ಸಂತೋಷದ ಸಂಗತಿ. ಈ ಮೊದಲು ತಮ್ಮ ಸಾಕಷ್ಟು ಪ್ರಬುದ್ಧ ಕವನಗಳ ಚೊಚ್ಚಲ ಕೃತಿಯ ಮೂಲಕ ಭರವಸೆ ಮೂಡಿಸಿದ್ದ ರವೀಂದ್ರರು ಸುಮಾರು ಮೂರು ದಶಕಗಳ ನಂತರ ಈಗ ಮಕ್ಕಳಿಗಾಗಿ ಕೃತಿಯೊಂದನ್ನು ರಚಿಸಿದ್ದಾರೆ.

ನಡುವಿನ ಸುದೀರ್ಘ ಕಾಲದಲ್ಲಿ ಅವರೇನು ಸುಮ್ಮನಿದ್ದರೇ? ಬ್ಯಾಂಕ್ ಅಧಿಕಾರಿಗಳ ವಿವಿಧ ಸಂಘಟನೆಗಳ ನೇತೃತ್ವ ವಹಿಸಿ ಅವನ್ನು ಮುನ್ನಡೆಸಿದರು. ಎಚ್ಚೆಸ್ಕೆಯವರ ಮಾರ್ಗದರ್ಶನದಲ್ಲಿ ಬ್ಯಾಂಕಿಂಗ್ ಕಮ್ಮಟ, ಬ್ಯಾಂಕಿಂಗ್ ಪತ್ರಿಕೆ, ನಿಘಂಟು, ಬ್ಯಾಂಕಿಂಗ್ ಸಾಹಿತ್ಯ ಕೃತಿಗಳ ಪ್ರಕಾಶನವೇ ಮೊದಲಾದ ಕಾರ್ಯದಲ್ಲಿ ಕೈಜೋಡಿಸಿದರು. ನಿವೃತ್ತಿಯ ನಂತರ ತಮ್ಮ ಸಾಹಿತ್ಯ ರಚನೆಯ ಗರಿಗೆದರಿಸಿ ಪುಂಖಾನುಪುಂಖವಾಗಿ ಕವಿತೆಗಳನ್ನು ಸೃಜಿಸಿದರು. ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ವಿಡಂಬನೆ, ವಿನೋದ, ವಿಷಾದ ಹೀಗೆ ವಿವಿಧ ಹಿನ್ನೆಲೆಯ ನಾಲ್ಕು ನೂರಕ್ಕೂ ಹೆಚ್ಚು ಕವಿತೆಗಳನ್ನು ದಿನಕ್ಕೊಂದರಂತೆ ವಾಟ್ಸಪ್ ವೇದಿಕೆಗಳಲ್ಲಿ ಹಂಚಿ ಮಿತ್ರರನ್ನು ಬೆರಗುಗೊಳಿಸಿದರು. ವಿಶಿಷ್ಟ ಕಾರ್ಯಕ್ರಮಗಳ ಆ ವಾಟ್ಸಪ್ ವೇದಿಕೆಗೆ ಶಿಸ್ತಿನ ಸಿಪಾಯಿಯಾದ ಅವರದೇ ನೇತೃತ್ವ. ಐದು ಸಾಲಿನಿಂದ ವರ್ಷಕ್ಕೊಮ್ಮೆ 'ಎಚ್ಚೆಸ್ಕೆ ಬೆಳಕು' ಹೆಸರಿನಲ್ಲಿ ಗೆಳೆಯರನ್ನು ಹಿಂದಿಟ್ಟುಕೊಂಡು ಪ್ರಾಚಾರ್ಯರ ಸವಿನೆನಪಿನ ಬುತ್ತಿ ಉಣಬಡಿಸುತ್ತ, ಮಿತ್ರರ ಸೃಜನಶೀಲ ರಚನೆಗಳಿಗೆ, ಪ್ರಕಾಶನಕ್ಕೆ ಸ್ಫೂರ್ತಿ ತುಂಬುತ್ತ ಸಾಹಿತ್ಯಪ್ರಿಯರ ಮನಗೆದ್ದರು. ಒಳ್ಳೆಯ ಸಂಘಟನಕಾರರಾದ ರವೀಂದ್ರ ಬಹುಷಃ ಏನನ್ನಾದರೂ ಸಾಧಿಸಿಯಾರು! ಕೆಲವು ವರ್ಷಗಳ ಹಿಂದೆಯೇ ಇವರ ಇನ್ನೊಂದು ಕವನ ಸಂಕಲನ 'ಅಯ್ಲಾನ್' ಬಿಡುಗಡೆಗೆ ತಯಾರಿ ನಡೆದಿದ್ದು ಅವರ ಕವಿತೆಗಳ ರುಚಿಕಂಡವರಲ್ಲಿ ಅದೂ ಇಷ್ಟರಲ್ಲೇ ಹೊರಬಂದೀತೆಂಬ ನಿರೀಕ್ಷೆಯಿರುವುದೇನು ಸುಳ್ಳಲ್ಲ.

ಬರಹಗಳು ಸರಳ ಪದಗಳ ಪುಟ್ಟಪುಟ್ಟ ಸಾಲುಗಳಿಂದ ಲಯ ಪ್ರಾಸಗಳಿಂದ ಶೋಭಿಸಿವೆ. ಹಾಡಿಗೂ ಒಗ್ಗುವ ಸಾಕಷ್ಟಿವೆ. ಹೀಗಿದ್ದೂ ಇವನ್ನು ಶಿಶುಗೀತೆಗಳೆನ್ನಲಾಗದು ಕವಿಯೇ ನಿರ್ಧರಿಸಿರುವಂತೆ ತೋರುವುದು ಅಚ್ಚರಿಯೇ ಸರಿ. ಹಿತವಾಗುವಂತೆ ಲಯಬದ್ಧವಾಗಿ ಓದಬಹುದಾದ ಹಾಗೂ ವಾಗಿ ಹಾಡಬಹುದಾದ ಅನೇಕ ಗೀತೆಗಳು ಇಲ್ಲಿರುವುದನ್ನು ಕಾಣಬಹುದು.

ಮಕ್ಕಳಿಗೆ ಪ್ರಿಯವಾಗುವ ವಸ್ತುವಿನ ಆಯ್ಕೆ, ತೆಯೆಡೆಗೆ ಓಲದ ಲಘುಪದ-ಪಾದ ವಿನ್ಯಾಸಗಳು, ರಿಗೆ ಮುದಕೊಡುವ ಪ್ರಾಸದ ಚಾತುರ್ಯ ಇಲ್ಲಿಯ ಕವಿತೆಗಳಿಗೆ ತುಂಬಿವೆಯನ್ನಬೇಕು. ಮಕ್ಕಳಿಗಾಗಿ ಬರೆದವೆಂದ ಮೇಲೆ ಶಾಲೆ-. ಪ್ರಾಣಿ-ಪಕ್ಷಿಗಳು, ತಿಂಡಿತೀರ್ಥ, ಹಬ್ಬಗಳು ಇಂಥವೆಲ್ಲವನ್ನೂ ರಿತ ನಿರೀಕ್ಷೆಯನ್ನು ಕೃತಿಯು ಈಡೇರಿಸಿರುವುದಲ್ಲದೆ ಕಥನ ನಗಳು, 'ಮಾತನಾಡಿದ ಗುಹೆ' ಸೇರಿದಂತೆ ಪಂಚತಂತ್ರದ ನಾಲ್ಕಾರು ಗಳು, ನಾಡಿನ ಸಾಂಸ್ಕೃತಿಕ ಸಿರಿಯನ್ನು ತೋರುವ, ಅರಿವನ್ನು ಸರಿಸುವ, ಎಳೆಯರಲ್ಲಿ ಸಾಮಾಜಿಕ ಕಳಕಳಿ ಬಿತ್ತುವ ಬರಹಗಳೂ ಲ್ಲಿರುವುದು ಶ್ಲಾಘನೀಯ. ಇಲ್ಲಿಯ ಮಕ್ಕಳ ಲೋಕದಲ್ಲಿ ಮಿಂಚಿರುವ ದಿ'ಯೆಂಬ ಪೋರ ಎಲ್ಲ ಮಕ್ಕಳಂತೆಯೇ ಮುದ್ದು, ತುಂಟ, ಚದುರ. ವನ ಚರ್ಯೆಗಳನ್ನು ಚಿತ್ರಿಸುವ 'ವಂಡರ್ ಬಂಡಲ್' ಲಯ ಪ್ರಾಸಗಳಿಂದ ಸೊಗಸಿದೆ. ಆದಿಗೆ ನಾಯಿ ಬೇಕು, ಆದಿಯ ಹುಟ್ಟು ಹಬ್ಬ, ಟಿಪ್ ಟಾಪ್ ಆದಿ.. ಇಂಥ ಬರಹಗಳಲ್ಲಿ ಮಕ್ಕಳಿಗೆ ಪ್ರಿಯವಾಗುವ ಅಂತ್ಯಪ್ರಾಸ ಎದ್ದು ಕಂಡರೆ, 'ಮುಂಗಾರಂದ್ರೆ ಮುಂಗಾರು' ಕವಿತೆ ಲಯದಿಂದ ಕುಣಿಸುತ್ತದೆ. ಮೈಸೂರು, ದಸರಾ ರಿತ ಕೆಲವು ಕವನಗಳಿವೆ (ಉದಾ: ದಸರಾ). 'ಗಾಂಧಿಯೆಂದರೆ' ಮಕ್ಕಳಿಗೆ, ದೊಡ್ಡವರಿಗೆ ಗಾಂಧೀಜಿಯ ನೆನಪು ಕೊಡುತ್ತದೆ. 'ಬ್ಯಾ ಬ್ಯಾ ಕಪ್ಪು ಕುರಿ' ಇಂಗ್ಲಿಷಿನಿಂದ ಸಮರ್ಥ ಪದ್ಯಾನುವಾದ. ಇನ್ನೊಂದು ಕವಿತೆಯಲ್ಲಿ 'ಪುಣ್ಯಕೋಟಿಯೆದುರು ಪ್ರಾಣಾರ್ಪಣೆ ಮಾಡಿದ ವ್ಯಾಘ್ರನ ಕತೆಯನ್ನು ಅರ್ಬುತನ ಹಾಡಾಗಿ ಹುಲಿಯ ಬಾಯಲ್ಲೇ ಹೇಳಿಸಲಾಗಿದೆ. ದೊಡ್ಡವರೂ ಓದಬೇಕಾದ 'ತಾಯಿಗೊಂದು ಹಾಡು' ಇಂಗ್ಲಿಷಿನ ವ್ಯಾಮೋಹವನ್ನು ನವಿರಾಗಿ ಚುಚ್ಚುತ್ತದೆ. 'ಸ್ಕೂಟು, ಕೊರೋನಾ

ಕಾವಳ, ಕಪ್ಪೆಗಳ ಮದುವೆ ಇಂಥ ಪದ್ಯಗಳಲ್ಲಿ ಸಾಮಾಜಿಕ ಕಳಕಳಿಯಿದೆ. ದೊಡ್ಡವರಿಗಾಗಿಯೇ ಬರೆದಿರಬಹುದಾದ ಕೆಲವು ಪದ್ಯಗಳೂ ಇಲ್ಲಿ ಸೇರಿವೆ.

ವಿಪುಲ ಮುದ್ರಣ ಸೌಕರ್ಯಗಳಿಂದ ಸಮೃದ್ಧವಾಗಿ ಪ್ರಕಟಗೊಳ್ಳುತ್ತಿರುವ ಸಾಹಿತ್ಯ ಓದುಗರನ್ನು ಮುಟ್ಟುತ್ತಿವೆಯೇ? ಎಂಬ ಸಾಮಾನ್ಯ ಪ್ರಶ್ನೆಗಿಂತ ವಿಭಿನ್ನವಾಗಿ, ನಿರ್ದಿಷ್ಟವಾಗಿ, ವಿರಳವಾಗಿ ರಚಿತವಾಗುತ್ತಿರುವ ಮಕ್ಕಳ ಸಾಹಿತ್ಯ ಮಕ್ಕಳಿಗೆ ತಲುಪುತ್ತಿವೆಯೇ? ಎಂಬ ಪ್ರಶ್ನೆಯೂ ಇದೆ. ದೊಡ್ಡವರು ಓದಿ ಮಕ್ಕಳಿಗೆ ತಲುಪಿಸುವರೆಂಬುದು ರಚಕರ ಆಶಯ. ಪುಸ್ತಕದ ವರ್ಣರಂಜಿತ ಮುಖಚಿತ್ರ ಮಕ್ಕಳನ್ನೂ, ಕವಿ ಬೊಳುವಾರರ ಬೆನ್ನುಡಿ ಪೋಷಕರನ್ನೂ ಸೆಳೆದೀತು. ಒಳಗಿನ ಹೂರಣವೂ ಹದವಾಗಿಯೇ ಇದೆಯೆಂಬುದನ್ನು ನೋಡಿದ್ದಾಗಿದೆ. 'ಆದಿಯೂ ನೆಟ್‌ನ ಪಾಠವೂ' ಶೀರ್ಷಿಕೆಯ ಈ ಪುಸ್ತಕವು ಮಕ್ಕಳ ಓದಿಗೆ ಸಿಕ್ಕು ಸಾರ್ಥಕತೆ ಪಡೆಯಲಿ. ಕವಿ, (ಈಗ) ಸಾಹಿತ್ಯ ಸಂಘಟಕ, ಸನ್ಮಿತ್ರ ರವೀಂದ್ರರ ಚಟುವಟಿಕೆಗಳು ಹೀಗೇ ಮುಂದುವರೆಯುವುದರ ಜೊತೆಜೊತೆಗೇ ಅವರ ಸಾಹಿತ್ಯ ಕೃಷಿಯೂ ಸಾರ್ಥಕವಾಗಲಿ; ಅವರ ಸೃಷ್ಟಿಯ ಸಾಹಿತ್ಯರಾಜಿಯಿಂದ ಹೀಗೇ ಸುಂದರ ಕುಸುಮಗಳು ಬೆಳಕು ಕಂಡು ಅರಳುತ್ತಿರಲಿ, ಶುಭವಾಗಲಿ.

– ಬಿ.ಎಸ್. ಚಂದ್ರಶೇಖರ್
ಕವಿ, ಬರಹಗಾರ, ಸಾಹಿತ್ಯ ಚಿಂತಕರು
ಚರವಾಣಿ : 9980071715

ಸ್ವಾಗತಿಸೋಣ "ಆದಿಯೂ ನೆಟ್‌ನ ಪಾಠವೂ"

[illegible] ನಡುವಿನ ಅಪ್ರತಿಮ ಸಂಘಟಕ, ಸ್ಕೌಟ್ ಚಳವಳಿಯ ಕ್ರಿಯಾಶೀಲ, ಸಾಹಿತ್ಯ ಚಿಂತಕ, ಕವಿ, ವಾಗ್ಮಿ ಹಾಗೂ ನನ್ನ ಕಾಲದ ಮಿತ್ರ ರವೀಂದ್ರನ ಮಕ್ಕಳ ಓದುವ ಪದ್ಯಗಳ ಸಂಕಲನ "ಆದಿಯೂ ನೆಟ್‌ನ ಪಾಠವೂ". ಹೊರಬರುತ್ತಿರುವುದು ಕಾವ್ಯಾಸಕ್ತರೆಲ್ಲರಿಗೂ ಅತೀವ ಸಂಭ್ರಮದ ವಿಷಯವೇ ಆಗಿದೆ.

1996 ರಲ್ಲಿ ಕವಿಯ "ಶೂನ್ಯವಲ್ಲದೆ ಬೇರೆ" ಕವನ ಸಂಕಲನ ಹೊರಬಂದಿತ್ತು. ಪ್ರಾಚಾರ್ಯ ಎಚ್ಚೆಸ್ಕೆಯವರ ಮೌಲಿಕ ಮುನ್ನುಡಿ ಹೊಂದಿದ್ದ ಈ ಕೃತಿಯಲ್ಲಿ ಹಲವಾರು ಚಿಂತನೆಗೆ ಗ್ರಾಸ ನೀಡುವ ಕವಿತೆಗಳಿದ್ದವು. ದೇಶ ಕಂಡ ಮಹಾನ್ ನಾಯಕಿ, ರಾಜಕಾರಣಿ, ಮುತ್ಸದ್ಧಿ ಇಂದಿರಾ ಗಾಂಧಿಯವರ ಹತ್ಯೆಯ ಸಂದರ್ಭದಲ್ಲಿ ಬರೆಯಲಾದ "ಶೂನ್ಯವಲ್ಲದೆ ಬೇರೆ" ಕವಿತೆಯಲ್ಲಿ, ಆಕೆಯ ಏಳು-ಬೀಳು, ಸಾಫಲ್ಯ-ವೈಫಲ್ಯಗಳನ್ನು ಬಹಳ ಪರಿಣಾಮಕಾರಿಯಾದ ಪದ ಹಾಗು ಭಾವಗಳ ಮೂಲಕ ಚಿತ್ರಿಸಿದ್ದು ಬ್ಯಾಂಕ್ ವಲಯದ ಕಾವ್ಯಾಸಕ್ತರನ್ನು ಸೂಜಿಗಲ್ಲಿನಂತೆ ಸೆಳೆದಿತ್ತು. ಮತ್ತೊಬ್ಬ ಎತ್ತರದ ವ್ಯಕ್ತಿ ಜೆ ಪಿ ಕುರಿತ ಕವನ, ನರ್ಮದಾ ಯೋಜನೆಯ ಸಂತ್ರಸ್ತರ ಬವಣೆ ಬಣ್ಣಿಸುವ "ಮೇಧಾ ಮಣಿಬೇಲಿ", ಹಲವಾರು ಚುಟುಕಗಳು ಇಂಥ ರಚನೆಗಳಿಂದ ಪ್ರಬಲ ಕವಿಯೊಬ್ಬನ ಆಗಮನವನ್ನು ಸಮರ್ಥವಾಗಿ ಸಾರಿತ್ತು.

ಅಲ್ಲಿಂದೀಚೆಗೆ ಸಂಕಲನ ಹೊರತರುವ ವಿಷಯದಲ್ಲಿ ದೀರ್ಘ ಮೌನವಿದ್ದಾಗ್ಯೂ ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಕವಿ ಕ್ರಿಯಾಶೀಲವಾಗೇ ಇದ್ದು ಸಮಕಾಲೀನ ಜ್ವಲಂತ ಸಮಸ್ಯೆಗಳಾದ ಅಂತರ ರಾಷ್ಟ್ರೀಯ ಭಯೋತ್ಪಾದನೆ, ಚಾರಿತ್ರಿಕ ಅಸಮಾನತೆ, ತಾರತಮ್ಯ, ರಾಜಕೀಯ ದುರಂತಗಳು ಇಂಥ ವಿಷಯಗಳಲ್ಲಿ ಕವಿಯ ಗಟ್ಟಿ ದನಿ ಕೇಳಿದೆ. "ಸಮನ್ವಯ ಸಮಿತಿ ಕನ್ನಡವೇ ಸತ್ಯ" ವೇದಿಕೆಯಲ್ಲಿ ದಿನಂಪ್ರತಿ ಬರುತ್ತಿದ್ದ ಚುರುಮುರಿ ಅಂಕಣವೂ ಜನಪ್ರಿಯವೇ ಆಗಿತ್ತು. ಬಹುಶಃ ಐದಾರು ಕವನ ಸಂಕಲನಗಳಿಗೆ ಆಗಿ

ಮಿಕ್ಕುವಷ್ಟು ಕವನಗಳು ಕವಿಯ ಬತ್ತಳಿಕೆಯಲ್ಲಿ ಇದೆಯೆಂಬುದು ನನ್ನ ಅಂದಾಜು.

ಪ್ರಸಕ್ತ ಹೊರಬರುತ್ತಿರುವ ಮಕ್ಕಳ ಓದುವ ಪದ್ಯಗಳ ಸಂಕಲನದಲ್ಲಿ ಆದಿ ಎಂಬ ಹೆಸರಿನ ಬಾಲಕನ ತುಂಟ ನಡವಳಿಕೆ, ಮಾತುಗಳು, ಬಾಲಲೀಲೆಗಳ ಸುತ್ತ ಹೆಣೆದ ಗೀತೆಗಳೇ ಅಲ್ಲದೆ ವಿಭಿನ್ನ ವಸ್ತುಗಳೂ ಮುಕ್ತ ಶೈಲಿಯಲ್ಲಿ ರಚಿತವಾಗಿದ್ದು, ಈ ಪದ್ಯಗಳು ಮಕ್ಕಳ ಮನಸ್ಸನ್ನು ಸೆಳೆಯುವುದರಲ್ಲಿ ಅನುಮಾನವಿಲ್ಲ. ಪಂಚತಂತ್ರದ ಕತೆಗಳು, ಸುಬ್ಬು ಮನೆಯ ನಯನ ಮನೋಹರ ನವರಾತ್ರಿ ಗೊಂಬೆ ಪ್ರದರ್ಶನ, ಪುರಾಣ ಪಾತ್ರವಾದ ಅನಸೂಯೆ, ಚಾರಿತ್ರಿಕ ಚೇತನ ಗಾಂಧಿ, ದಸರಾ, ಸಮಕಾಲೀನ ತಲ್ಲಣವಾದ ಕೊರೋನಾ ಹಾವಳಿ, ಹುಲಿ ಅರ್ಬುತದ ದೃಷ್ಟಿಯಲ್ಲಿ ಕಂಡ ಪುಣ್ಯಕೋಟಿ ಪದ್ಯ, ಬಾಲಕರಿಗೆ ಹೊಸದೆನಿಸಿದ ನೆಟ್ ನ ಪಾಠ ಇನ್ನೂ ಹಲವಾರು ವಸ್ತುಗಳು ಪದ್ಯರೂಪ ಪಡೆದು ನಲಿದಿವೆ. ಆರಂಭದ "ಪುಟ್ಟನ ಪದ್ಯಪಾಕ" ಪದ್ಯ ಕೃತಿಯ ಅವಲೋಕನಕ್ಕೆ ಸಮರ್ಥ ಪ್ರವೇಶ ಒದಗಿಸಿದೆ. ಇಲ್ಲಿನ ಶಿಶುಗೀತೆಗಳನ್ನು ಓದುವ ಪದ್ಯಗಳೆಂದು ಕವಿ ವ್ಯಾಖ್ಯಿಸಿರುವುದು ಉಚಿತವೇ ಆಗಿದೆ. ಕಾವ್ಯವನ್ನು ಓದುಗಬ್ಬ ಮತ್ತು ಹಾಡುಗಬ್ಬ ಎಂದು ವರ್ಗೀಕರಿಸಿರುವುದು ಕಾವ್ಯಚರಿತ್ರೆಯಲ್ಲೇ ಉಲ್ಲೇಖವಾಗಿರುವ ನಿದರ್ಶನವಿದೆ. ಮಕ್ಕಳು ಓದಿನಿಂದಲೇ ಸಂತಸಪಡಬಲ್ಲ ಪದ್ಯಗಳು ಇಲ್ಲಿರುವ ರಚನೆಗಳು.

ಮುಂದೆ ಕವಿ ಬಾಲಕಿಯರ ಮನೋಭೂಮಿಕೆಯನ್ನೂ ಹೆಚ್ಚು ಗಮನದಲ್ಲಿರಿಸಿಕೊಂಡು ಶಿಶುಗೀತೆಗಳ ಸಂಕಲನವೊಂದನ್ನು ಹೊರತರಲೆಂದು ನಿರೀಕ್ಷಿಸುತ್ತೇನೆ.

ಕವಿಯ ಲೇಖನಿಯಿಂದ ಮತ್ತಷ್ಟು ವಿಭಿನ್ನ ವಸ್ತು, ಶೈಲಿಯ ಕವನಗಳ ಹೊರಬಂದು ಕನ್ನಡ ಕಾವ್ಯಲೋಕವನ್ನು ಶ್ರೀಮಂತಗೊಳಿಸಲಿ ಎಂದ ಹಾರೈಸುತ್ತೇನೆ.

ಶುಭವಾಗಲಿ.

ಕೆ ಎನ್ ಮಹಾಬಲ
ಕವಿ, ಬರಹಗಾರರು
ಚರವಾಣಿ : 9449811177

ರವೀಂದ್ರರ ಮಕ್ಕಳ ಕವನಗಳ ಬೆರಗು ಉಲ್ಲಾಸ

ಸುಮಾರು ಐದು ವರ್ಷಗಳ ಹಿಂದೆ 'ಸಮನ್ವಯ ಸಮಿತಿ ಕನ್ನಡವೇ ಸತ್ಯ' ವೇದಿಕೆಯ ಮೂಲಕ ನನಗೆ ಪರಿಚಯವಾದವರು ಶ್ರೀ ಬೆಂ.ಶ್ರೀ.ರವೀಂದ್ರ ಅವರು. ಅವರ ಬಗ್ಗೆ ನನ್ನ ಭಾವ ಶ್ರೀ ವೆಂಕಟಸುಬ್ಬಯ್ಯನವರು ಹೇಳುತ್ತಿದ್ದುದನ್ನು ಕೇಳುತ್ತಿದ್ದ ನನಗೆ ರವೀಂದ್ರ ಅವರನ್ನು ಮುಖತಃ ಭೇಟಿಯಾಗುವ ಸುಯೋಗ ಸಮನ್ವಯ ಸಮಿತಿ ವೇದಿಕೆಯು ನಡೆಸುವ 'ಸಾಹಿತ್ಯ ದಾಸೋಹ' ದಲ್ಲಿ ಪ್ರಾಪ್ತವಾಯಿತು. ಅತ್ಯುತ್ತಮ ಸಂಘಟಕರೂ, ನಾಯಕರೂ ಆದ ರವೀಂದ್ರರ ಪ್ರಸ್ತುತಿಗಳನ್ನು ವೇದಿಕೆಯಲ್ಲಿ ಓದುತ್ತಾ ಹೋದಂತೆ ಅವರ ಸಹೃದಯತೆ, ಧೀಶಕ್ತಿ, ಅಪಾರ ಕನ್ನಡ ಪ್ರೇಮ, ಕವಿಹೃದಯದ ಅಗಾಧತೆಯ ಪರಿಚಯವಾದದ್ದು.

ಸೃಜನಶೀಲ ಕವಿಯೂ, ಲೇಖಕರೂ ಆದ ಇವರು ಕಾರ್ಮಿಕ ನಾಯಕರಾಗಿ ಬಹಳಷ್ಟು ಮೈಲುಗಲ್ಲುಗಳನ್ನು ಸ್ಥಾಪಿಸಿದ ಕನ್ನಡದ ಕಟ್ಟಾಳು, ಕನ್ನಡ ಪರ ಹೋರಾಟಗಾರ, ಅದ್ಭುತ ಸಂಘಟಕ, ಶಿಸ್ತಿನ ಸಿಪಾಯಿ. ಆದರೆ ಅಪಾರವಾದ ಮಾನವೀಯ ಕಳಕಳಿಯುಳ್ಳ ಸ್ನೇಹಮಯಿ ವ್ಯಕ್ತಿತ್ವ ಅವರದು. ಹೃದಯ ತಲ್ಲಣಗೊಳಿಸುವ ಯಾವುದೇ ಘಟನೆ ವಿಶ್ವದ ಯಾವುದೇ ಮೂಲೆಯಲ್ಲಿ ನಡೆದರೂ ತಕ್ಷಣಕ್ಕೆ ಅವರು ತಮ್ಮ ಕವನದ ಮೂಲಕ ಅದಿನ್ನೆಷ್ಟು ಕಳಕಳಿಯಿಂದ (ಅವಶ್ಯವಿದ್ದಲ್ಲಿ ಸಾತ್ವಿಕ ಆಕ್ರೋಶದಿಂದ) ಅದಿನ್ನೆಷ್ಟು ಪರಿಣಾಮಕಾರಿಯಾಗಿ ಪ್ರತಿಕ್ರಯಿಸುತ್ತಾರೆಂದರೆ ಬಹಳಷ್ಟು ಕಾಲ ಅವು ನಮ್ಮನ್ನು ಕಾಡುತ್ತಾ, ಸುದೀರ್ಘಕಾಲ ಮನಸ್ಸಿನಲ್ಲಿ ಉಳಿದುಬಿಡುತ್ತವೆ. ಅಂತಹ ತೀಕ್ಷ್ಣವಾದ ಸಾಮಾಜಿಕ ಕಳಕಳಿಯ ಕವನಗಳನ್ನು ಅವರು ಮಾತ್ರ ಬರೆಯಬಲ್ಲರೇನೋ ಎಂದು ನನಗೆ ಹಲವಾರು ಬಾರಿ ಅನಿಸುತ್ತಿರುತ್ತದೆ. ಅವರ ಕವನಗಳಲ್ಲಿನ ಧ್ವನಿ ಬಹಳ ಸಶಕ್ತ. ಪ್ರತಿಮೆಗಳು ರೂಪಕಗಳು ಹಾಸುಹೊಕ್ಕಾಗಿ, ಸರಳತೆಯೊಳಗೆ ಸಂಕೀರ್ಣತೆಯನ್ನೂ ಕೋದುಕೊಂಡು ಕಾವ್ಯ ಪ್ರೇಮಿಗಳಿಗೆ ರಸಾಸ್ವಾದವನ್ನು ನೀಡುವುದರೊಂದಿಗೆ ಚಕಿತಗೊಳಿಸುತ್ತಿರುತ್ತದೆ. ಬೆಂ.ಶ್ರೀ, ರವೀಂದ್ರ ಅವರು ಮಕ್ಕಳ ಸಾಹಿತಿಯಾಗಿ ಬಹಳ ಸೊಗಸಾದ ಶಿಶುಗೀತೆಗಳನ್ನೂ ರಚಿಸಿ ನಮ್ಮನ್ನು ರಂಜಿಸಿದ್ದಾರೆ. ರವೀಂದ್ರ ಅವರ ಈ ಮಕ್ಕಳ

ಕವನಸಂಕಲನ 'ಆದಿಯೂ ನೆಟ್‌ನ ಪಾಠವೂ'. 70 ವೈವಿಧ್ಯಮಯ ವಸ್ತುಗಳನ್ನು ಒಳಗೊಂಡು ಮಕ್ಕಳ ಜೊತೆಗೇ ದೊಡ್ಡವರನ್ನೂ ರಂಜಿಸುತ್ತದೆ. ಮಕ್ಕಳ ಮನಸ್ಸಿನೊಳಗೆ ಇಳಿದು, ಅವರ ಬೇಕು ಬೇಡಗಳನ್ನು, ಆಸೆ ಆಕಾಂಕ್ಷೆಗಳನ್ನು ಮಗುವಾಗಿಯೇ ಪರಿಭಾವಿಸಿ ರಚಿಸಿರುವ ಕವನಗಳು ಇವು. "ಆದಿ" ರವೀಂದ್ರರ ಕವನಗಳ ಪುಟ್ಟ ನಾಯಕ. ಅವನ ತುಂಟಾಟ ಚೇಷ್ಟೆಗಳು, ಅವನ ಬೇಡಿಕೆಗಳು, ಅವನ ಬೆರಗಿನ ನೋಟಗಳು, ಎಲ್ಲವೂ ಪುಟ್ಟ ಬಾಲಕನ ದೃಷ್ಟಿಯಲ್ಲಿಯೇ ಇಲ್ಲಿ ಅಭಿವ್ಯಕ್ತಿಗೊಂಡಿವೆ. ಜೊತೆಜೊತೆಗೇ ಸಮಕಾಲೀನ ವಿಷಯಗಳು, ವೈಜ್ಞಾನಿಕ ದೃಷ್ಟಿಕೋನ, ನಮ್ಮ ಹಬ್ಬಗಳ ಆಚರಣೆಯ ಸೊಗಸು, ಪ್ರವಾಸದ ಉತ್ಸಾಹ, ಉಲ್ಲಾಸ, ಸಂಭ್ರಮ, ಅವುಗಳನ್ನು ನೋಡುವ, ಪಾಲ್ಗೊಳ್ಳುವ ಬಾಲಕನ ವಿಸ್ಮಯ ಮುಗ್ಧತೆ ಎಲ್ಲವನ್ನೂ ಇಲ್ಲಿ ಹಲವಾರು ಸುಂದರ ಕವನಗಳ ಮೂಲಕ ದಾಖಲಿಸುತ್ತಾ ಹೋಗುತ್ತಾರೆ. ಈಗಿನ ವ್ಯಾವಹಾರಿಕ ಕನ್ನಡದಲ್ಲಿ ಬೆರೆತು ಹೋಗಿರುವ ಇಂಗ್ಲೀಷ್ ಹಿಂದಿ ಪದಗಳೂ ಅಲ್ಲಲ್ಲಿ ಬಳಕೆಯಾಗಿರುವುದು ತೀರಾ ಸಹಜವಾಗಿದೆ. ಇಲ್ಲದಿದ್ದರೆ ಮಕ್ಕಳ ಕವನಗಳು ಪರಿಣಾಮಕಾರಿಯಾಗಿ ಸಂವಹನಗೊಳ್ಳುವುದೆಂತು?

ಮಳೆ ಕೈಕೊಟ್ಟು ಜನ ತಲ್ಲಣಿಸುವಂತಾದಾಗ ವರುಣನ ಕೃಪೆಗಾಗಿ ನಡೆಸುವ ಆಚರಣೆಯ ವಸ್ತುವನ್ನೊಳಗೊಂಡ 'ಕಪ್ಪೆಗಳ ಮದುವೆ' ಬಹಳ ಲವಲವಿಕೆಯಿಂದ ಓದಿಸಿಕೊಂಡು ಹೋಗುವ ಕವನ. ಅಂತ್ಯವೂ ಕುತೂಹಲಕಾರಿಯಾಗಿ ನಗೆ ತರಿಸದೆ ಹೋಗುವುದಿಲ್ಲ. 'ಕೋಮಲವಲ್ಲಿಯ ಚೆಲ್ಲಾಟಗಳು' ಸುಂದರವಾದ ಹೆಸರಿರಿಸಿಕೊಂಡಿರುವ ಸಾಕುಬೆಕ್ಕಿನ ಚೆಲ್ಲಾಟಗಳ ವರ್ಣನೆಯನ್ನು ಓದಿಯೇ ಸವಿಯಬೇಕು.

'ಗೋವಿನ ಹಾಡು' ಕನ್ನಡದ ಜನಮನಗಳನ್ನು ಎಂದಿನಿಂದಲೂ ಸೂರೆಗೊಂಡಿರುವ ಖಂಡ ಕಾವ್ಯ. ಆ ಹಾಡನ್ನು ಕೇಳಿ ಪುಣ್ಯಕೋಟಿ ಹಸುವಿನ ಸತ್ಯದ ನಡೆಗಾಗಿ, ತಬ್ಬಲಿಯಾಗಿ ಬಿಡುತ್ತೇನೆಂದು ಕರುಳು ಕರಗುವಂತೆ ದುಃಖಿಸುವ ಅದರ ಕಂದನಿಗಾಗಿ ಮಕ್ಕಳು ಈಗಲೂ ಕಂಬನಿ ಮಿಡಿಯುತ್ತಾರೆ. ಈ ಕಥನ ಕವನವನ್ನು ಹುಲಿಯ ಹಾಗೂ ಹುಲಿಯ ಮರಿಗಳ ದೃಷ್ಟಿಕೋನದಿಂದ ನೋಡಿ ಪುನಾರಚಿಸಿರುವ

ಕವನ 'ಅರ್ಬುತನ ಹಾಡು' ಚಂಡವ್ಯಾಘ್ರ ಹಾಗೂ ಅದರ ಮರಿಗಳ ಬಗ್ಗೆಯೂ ಅನುಕಂಪ ಹುಟ್ಟಿಸುತ್ತದೆ. ಸಂವೇದನಾಶೀಲನಾದ ಕವಿ ಏಕಕಾಲದಲ್ಲೇ ಎರಡು ವಿರುದ್ಧ ಭಾವಗಳನ್ನೂ ನೋಡಿ ಅನುಭವಿಸಬಲ್ಲ ಎಂಬುದು ಈ ಕವನದಿಂದ ವಿದಿತವಾಗುತ್ತದೆ.

'ಮುಂಗಾರೆಂದ್ರೆ ಮುಂಗಾರು' ಮಳೆಗಾಲದ ಮಳೆಯ ಆರ್ಭಟವನ್ನು ಅದಕ್ಕೊಪ್ಪುವ ಲಯದಲ್ಲಿ ಮೂಡಿಸಿರುವ ಪರಿ ಸೊಗಸಾಗಿದೆ. ಪಂಚತಂತ್ರದ ಐದು ಕತೆಗಳೂ(ಗುರುವಿನ ಮೇಕೆ, ಹಾಳೂರ ಕೊಂಪೆ, ಕಪಟಿ ಬೆಕ್ಕು, ದೊಡ್ಡವರ ಮಾತು, ಮಾತನಾಡಿದ ಗುಹೆ) ಇಲ್ಲಿ ಕವನವಾಗಿ ಮೈದಳೆದಿವೆ. ಅನೀರೀಕ್ಷಿತ ಅಂತ್ಯವನ್ನು ಕಾಣುವ 'ಇಲಿಯ ಬೇಟೆ' ಬೆರಗು ಮೂಡಿಸುತ್ತದೆ. 'ಇಲ್ಲಿ ಬಾರೆ ಪುಟ್ಟಿ' ಚಕಚಕನೆ ಸಾಗುವ ಲಯದ ಸುಂದರ ಶಿಶುಗೀತೆ. 'ದಸರೆ' ನಾಡ ಹಬ್ಬದ ಸಂಭ್ರಮ ಮತ್ತು ಅದು ಒಳಗೊಳ್ಳುವ ಚಟುವಟಿಕೆಗಳನ್ನು ಸರಸರನೆ ಬಿಚ್ಚಿಡುವ ಕವನ.

'ತಾಯಿಗೊಂದು ಹಾಡು' ಕನ್ನಡವನ್ನು ಕಡೆಗಣಿಸಿ ಮಕ್ಕಳಿಗೆ ಇಂಗ್ಲೀಷನ್ನು ತುರುಕುವ ತಾಯಂದಿರ ಇಂಗ್ಲೀಷ್ ವ್ಯಾಮೋಹವನ್ನು ಮಗುವೇ ಪ್ರಶ್ನಿಸುವ ಕವನ, ಎಲ್ಲರೂ ಗಮನಿಸಬೇಕಾದದ್ದು. ಪ್ರಪಂಚವನ್ನೆಲ್ಲ ಅಲ್ಲೋಲಕಲ್ಲೋಲಗೊಳಿಸಿರುವ ಕೊರೋನೋದ ಪರಿಣಾಮವಾಗಿ ಶಾಲೆಯಲ್ಲಿ ಓದಿ, ಕಲಿತು, ಆಡಿ, ನಲಿದು, ಕುಣಿಯುವ ಸಂತೋಷವಿಲ್ಲದೆ ಮನೆಯೊಳಗೇ ಕುಳಿತು ಆನ್‌ಲೈನ್ ಪಾಠ ಕೇಳಬೇಕಾದಂಥಹ ಮಕ್ಕಳ ಸ್ಥಿತಿಯನ್ನು ಅವರ ಬೇಸರವನ್ನು ಸಮರ್ಥವಾಗಿ ಕಟ್ಟಿಕೊಡುವ, ಈ ಸಂಕಲನದ ಶೀರ್ಷಿಕೆಯೂ ಆದ "ಆದಿಯೂ ನೆಟ್‌ನ ಪಾಠವೂ' ಕವನ ಮಕ್ಕಳ ಸದ್ಯದ ಪರಿಸ್ಥಿತಿಯ ಬಗ್ಗೆ ಮರುಕ ಹುಟ್ಟಿಸುತ್ತದೆ. ತ್ರಿಮೂರ್ತಿಗಳ ತಾಯಿಯಾದ ಅನಸೂಯಾದೇವಿಯ ಮಹಿಮೆಯ ಕತೆಯನ್ನು ಮಕ್ಕಳಿಗಾಗಿ ಕವನರೂಪದಲ್ಲಿ ಹೇಳುತ್ತದೆ 'ಮೆಲುನಕ್ಕಳು ಅನಸೂಯೆ.' ಅಂದೂ ಇಂದೂ ಎಂದೆಂದಿಗೂ ಭಾರತೀಯರಿಗೆ ಅಷ್ಟೇಕೆ ಇಡೀ ವಿಶ್ವದ ಯುವಜನರಿಗೆ ಮಾದರಿಯಾದ ಸ್ವಾಮಿ ವಿವೇಕಾನಂದರ ಬಗೆಗಿನ ಗೀತೆ 'ಬಿಲೆ'.

ಯುದ್ಧದಲ್ಲಿ ನಾಡಿಗಾಗಿ ಪ್ರಾಣತ್ಯಾಗ ಮಾಡಿದ ಯೋಧನ ಪುತ್ರಿ ಅಮಾಯಕ ಎಳೆಯ ಬಾಲಕಿ ಅಳುತ್ತಿರುವ ತಾಯಿಯನ್ನು ಮುಗ್ಧತೆಯಿಂದ ಪ್ರಶ್ನಿಸುತ್ತಾ ಹೋಗುವ ಕವನ 'ಯಾಕಳತಾಕುಂತಿ'. ಇದರಲ್ಲಿ ಮಡುಗಟ್ಟಿರುವ ಶೋಕ ಓದುಗರ ಎದೆಯನ್ನು ತಲ್ಲಣಗೊಳಿಸುತ್ತದೆ. ಹೀಗೆ ಮಕ್ಕಳಿಗಾಗಿ ಪಾಠವನ್ನೂ ನೀತಿಯನ್ನೂ, ಮನೋರಂಜನೆಯನ್ನೂ ಕೊಡುವಂತಹ ವೈವಿಧ್ಯಮಯವಾದ ಕವನಗಳ ವಸ್ತು, ಕವಿಯ ಚಿಂತನ ವ್ಯಾಪ್ತಿಗೆ, ಪ್ರತಿಭೆಗೆ ಸಾಕ್ಷಿಯಾಗಿವೆ. ಮಕ್ಕಳಿಗಾಗಿ ಓದುವ ಕವನಗಳು ಎಂದು ಕವಿ ರವೀಂದ್ರರು ಹೇಳಿದ್ದರೂ ಹಾಡಿಗೆ ಒಗ್ಗುವ ಹಲವಾರು ಕವನಗಳಿವೆ. ಮಕ್ಕಳ ಸಾಹಿತ್ಯಕ್ಕೆ ಉತ್ತಮ ಕೊಡುಗೆಯಾಗಬಲ್ಲ ಈ ಕವನಗಳನ್ನು ದೊಡ್ಡವರೂ ಅವಲೋಕಿಸಲಿ. ಮಕ್ಕಳು ಓದಿ, ಹಾಡಿ ನಲಿಯಲಿ.

– ರತ್ನಾಮೂರ್ತಿ
ಕವಿ, ಕತೆ, ಕಾದಾಂಬರಿಗಾರ್ತಿ
ಮುಂಡಿಗೆಗಳ ರಚಕರು ಮತ್ತು
ಸಾಮಾಜಿಕ ಕಾರ್ಯಕರ್ತರು
ಚರವಾಣಿ : 9845148248

ಬೆಂ.ಶ್ರೀ.ರವೀಂದ್ರ ಎನ್ನುವ ಅದ್ಭುತ ಶಕ್ತಿ, ವ್ಯಕ್ತಿ

ಶ್ರೀ. ಬೆಂ. ಶ್ರೀ. ರವೀಂದ್ರರನ್ನು ಪರಿಚಯಿಸುವುದು ಒಂದು ಸವಾಲಿನ ಕೆಲಸವೇ ಸರಿ. ಒಬ್ಬ ವ್ಯಕ್ತಿಗೆ ಹಲವು ರಂಗಗಳಲ್ಲಿ ಆಸಕ್ತಿಯಿದ್ದು ಕ್ರಿಯಾಶೀಲನಾಗಿರಬಹುದು. ಆದರೆ ತೊಡಗಿಸಿಕೊಂಡ ಎಲ್ಲ ರಂಗಗಳಲ್ಲೂ ತಾದಾತ್ಮ್ಯ ಭಾವದಿಂದ ಇದೇ ಇವರ ಆದ್ಯತೆಯ ವಿಷಯವಾಗಿರಬಹುದು ಎನ್ನುವಂತೆ ತೊಡಗಿಕೊಳ್ಳುವುದು ರವೀಂದ್ರರಿಂದ ಮಾತ್ರಾ ಸಾಧ್ಯವೇನೋ. ಇವರು ಕನ್ನಡ ಸಂಘಟನೆಗಳ ನಾಯಕರೇ? ಸಮಾಜದ ಕನ್ನಡಿಯಾದ ಕವಿಯೇ? ನಿರರ್ಗಳ ವಾಗ್ಮಿಯೇ? ಕಾರ್ಮಿಕ ನೇತಾರರೇ? ಸಾಹಿತ್ಯ, ಕಲೆಗಳ ಸಹೃದಯರೇ? ಸಮಾನತೆಯ ಹರಿಕಾರರೇ? ಅನನ್ಯ ಭಾವಜೀವಿಯೇ? ಮಹಿಳಾಪರ ಚಿಂತಕರೇ? ಮಮತೆಯ ಮಹಾಪೂರವೇ? ಕರ್ತವ್ಯ ಕಿಂಕರರೇ? ಬ್ಯಾಂಕಿನ ಸೇವೆಯಲ್ಲಿದ್ದವರೇ?... ಹೀಗೆ ಕೇಳಿಕೊಳ್ಳುತ್ತಾ ಹೋಗುವ ಪ್ರತಿಯೊಂದು ಪ್ರಶ್ನೆಗೂ ಸಕಾರಾತ್ಮಕ ಉತ್ತರವಾಗಿ ನಿಲ್ಲುವ ರವೀಂದ್ರರು ಬಹುಮುಖ ಪ್ರತಿಭಾಸಂಪನ್ನರು. ಸುಲಭವಲ್ಲ ಇವರನ್ನು ಪರಿಚಯಿಸುವ ಕೆಲಸ!.

1954ರಲ್ಲಿ ಜನಿಸಿದ ರವೀಂದ್ರರು ಕೋಟೆಯ ಪ್ರಾಥಮಿಕ, ಮಾಧ್ಯಮಿಕ ಶಾಲೆಯಲ್ಲಿನ ಶಿಕ್ಷಣ, ಬೆಂಗಳೂರು ಹೈಸ್ಕೂಲಿನ ಓದಿನ ನಂತರ ಬಿ.ಎಸ್ಸಿ. ಪದವಿಯನ್ನು ಪಡೆದುಕೊಂಡಿದ್ದು ವಿಜಯಾ ಕಾಲೇಜಿನಿಂದ. ಬೆಳೆವ ಸಿರಿ ಮೊಳಕೆಯಲ್ಲಿ ಎಂಬಂತೆ ಶಾಲಾ ದಿನಗಳಿಂದಲೇ ಕನ್ನಡ ಪರ ಹಾಗೂ ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾ ಸ್ಪರ್ಧೆಗಳಲ್ಲಿ ತಮ್ಮ ವಿದ್ಯಾಲಯಕ್ಕೆ ಅನೇಕ ಬಹುಮಾನಗಳನ್ನು ತಂದಿತ್ತವರು. ಅಂದಿನಿಂದಲೇ ಶಾಲಾ, ಕಾಲೇಜು ಪತ್ರಿಕೆಗಳಲ್ಲಿ ಬರೆಯಲು ತೊಡಗಿಸಿಕೊಂಡವರು. ಚರ್ಚಾ ಸ್ಪರ್ಧೆಗಳಲ್ಲಿ ಅಪೂರ್ವ ಪ್ರಭುತ್ವವನ್ನು ಪಡೆದುಕೊಂಡು ಅತ್ಯುತ್ತಮ ವಾಗ್ಮಿಯಾಗಿ ಹೊರಹೊಮ್ಮಿದವರು.

1973ರಲ್ಲಿ ಭಾರತೀಯ ಸ್ಟೇಟ್ ಬ್ಯಾಂಕಿನೊಳಗೆ ಪಾದಾರ್ಪಣೆ ಮಾಡಿದವರು, 1979ರಲ್ಲಿ ಅಧಿಕಾರಿಯಾಗಿ ಬಡ್ತಿಹೊಂದಿ, 2013 ರಲ್ಲಿ

ಬ್ಯಾಂಕಿನ ಸೇವೆಯಿಂದ ನಿವೃತ್ತಿ ಹೊಂದಿದರು. ಈ 40 ವರ್ಷಗಳ ಅವಧಿಯಲ್ಲಿ ಅವರು ಸಾಂಸ್ಕೃತಿಕವಾಗಿ, ಸಂಘಟನಾ ಚತುರರಾಗಿ, ಅಧಿಕಾರಿಗಳ ಸಂಘದ ನಾಯಕನಾಗಿ, ಕನ್ನಡಪರ ಕಾರ್ಯಗಳಲ್ಲಿ ತೊಡಗಿಸಿಕೊಂಡು ಮಾಡಿದ ಸಾಧನೆ ಅಸಾಮಾನ್ಯವಾದದ್ದು.

ಭಾರತೀಯ ಸ್ಟೇಟ್ ಬ್ಯಾಂಕಿನಲ್ಲಿದ್ದ ಅನ್ಯ ಭಾಷಿಕರ ದಬ್ಬಾಳಿಕೆಯನ್ನು ವಿರೋಧಿಸಿ ಬೆಂಗಳೂರು ವೃತ್ತವನ್ನು ಸ್ಥಾಪಿಸುವಲ್ಲಿ ಸಮಾನ ಮನಸ್ಕರೊಂದಿಗೊಡಗೂಡಿ ಪ್ರಮುಖ ಪಾತ್ರವನ್ನು ವಹಿಸಿದರು. ಹಲವು ಶಾಖೆಗಳಲ್ಲಿ ಕನ್ನಡ ಸಂಘಗಳನ್ನು ಸ್ಥಾಪಿಸಿ, ಸಮನ್ವಯ ಸಮಿತಿಯ ಮೂಲಕ ಕನ್ನಡಕ್ಕೆ ಪ್ರಾಶಸ್ತ್ಯವನ್ನು ತಂದುಕೊಟ್ಟು ಕನ್ನಡಿಗರನ್ನು ಸಂಘಟಿಸಿದರು. ಪ್ರಾಚಾರ್ಯ ಎಚ್ಚೆಸ್ಕೆಯವರ ಪ್ರಿಯ ಶಿಷ್ಯನಾಗಿ, ಅವರ ನೇತೃತ್ವದಲ್ಲಿ 1980ರಿಂದ ಬ್ಯಾಂಕಿಂಗ್ ಪ್ರಪಂಚ ತ್ರೈಮಾಸಿಕ ಪತ್ರಿಕೆಯ ಪ್ರಕಟಣೆ, 1982ರಿಂದ 1997ರವರೆಗೆ ಬ್ಯಾಂಕಿಂಗ್ ಕಮ್ಮಟಗಳ ಆಯೋಜನೆ, 1985ರಲ್ಲಿ ಬ್ಯಾಂಕಿಂಗ್ ನಿಘಂಟುವಿನ ಸಂಪಾದನೆ ಎಲ್ಲದರಲ್ಲೂ ತಮ್ಮ ಹೆಜ್ಜೆಗುರುತನ್ನು ಮೂಡಿಸಿದ್ದು ಸಾಮಾನ್ಯ ಸಂಗತಿಯಲ್ಲ. "ಬ್ಯಾಂಕಿಂಗ್ ನಲ್ಲಿ ಕನ್ನಡ; ಕನ್ನಡದಲ್ಲಿ ಬ್ಯಾಂಕಿಂಗ್" ಎನ್ನುವುದು ಅವರಿಗೆ ಬರಿಯ ಘೋಷಣೆಯ ವಾಕ್ಯವಾಗಿರಲಿಲ್ಲ, ಆಚರಣೆಯ ಮಂತ್ರವಾಗಿತ್ತೆಂದರೆ ಅತಿಶಯೋಕ್ತಿಯೇನಲ್ಲ. ಕನ್ನಡ ಭಾಷೆಯ ಅನುಷ್ಠಾನಕ್ಕೆ ಪೂರಕವಾದ ವಾತಾವರಣವನ್ನು, ಸನ್ನಿವೇಶವನ್ನೂ ನಿರ್ಮಿಸಲು ಹೋರಾಟ ನಡೆಸಿದವರಲ್ಲಿ ಪ್ರಮುಖರಾಗಿದ್ದರು.

ಭಾಷೆಗಾಗಿ ಹೋರಾಡಿದ್ದು ಒಂದು ಮುಖವಾದರೆ, 1973ರಲ್ಲಿ ಬ್ಯಾಂಕ್ ಸೇರಿದಾಗಿನಿಂದ ಕಾರ್ಮಿಕ ಸಂಘಟನೆಯಲ್ಲಿ ತೊಡಗಿಕೊಂಡಿದ್ದು ಅವರ ಸಾಧನೆಯ ಇನ್ನೊಂದು ಪ್ರಮುಖ ಮಗ್ಗಲು. ಬ್ಯಾಂಕಿನ ಅಧಿಕಾರಿಗಳ/ ನೌಕರರ ಸಂಘಟನೆಯ ನಾಯಕತ್ವವನ್ನು ಯಶಸ್ವಿಯಾಗಿ ನಿರ್ವಹಿಸುತ್ತಾ ಭಾರತೀಯ ಸ್ಟೇಟ್ ಬ್ಯಾಂಕ್ ಅಧಿಕಾರಿಗಳ ಸಂಘ (ಕ)ದ ಅಧ್ಯಕ್ಷ, ಪ್ರಧಾನ ಕಾರ್ಯದರ್ಶಿ, ಅಖಿಲ ಭಾರತ ಸ್ಟೇಟ್ ಬ್ಯಾಂಕ್ ಅಧಿಕಾರಿಗಳ ಒಕ್ಕೂಟದ ಹಿರಿಯ ಉಪಾಧ್ಯಕ್ಷ, ಅಖಿಲ ಭಾರತ ಬ್ಯಾಂಕ್ ಅಧಿಕಾರಿಗಳ ಮಹಾ ಒಕ್ಕೂಟದ ಕರ್ನಾಟಕ ಘಟಕದ ಕಾರ್ಯದರ್ಶಿ ಹಾಗೂ ಬ್ಯಾಂಕ್ ಕಾರ್ಮಿಕ ಸಂಘಗಳ ಸಂಯುಕ್ತ ವೇದಿಕೆಯ ಕರ್ನಾಟ

ಘಟಕದ ಸಂಚಾಲಕರಾಗಿ, ಚಳುವಳಿಗಳ ನೇತಾರರಾಗಿ ಹಲವು ದಶಕಗಳ ಕಾಲ ಮುನ್ನಡೆಸಿದ್ದು ಅವರ ನಾಯಕತ್ವದ ಪ್ರಬಲ ಗುಣವನ್ನು ಎತ್ತಿ ತೋರುವಂತದ್ದು. ಇಷ್ಟಲ್ಲದೆ ಕಾರ್ಮಿಕ ಸಂಘಟನೆಗಳ ನಾಯಕರಿಗೆ ಅಗತ್ಯವಾದ ತರಬೇತಿ ಶಿಬಿರಗಳನ್ನು ಪ್ರಾಯೋಜಿಸಿ ನಾಳಿನ ಉತ್ತಮ ನಾಯಕರು ಸಾಗಬೇಕಾದ ದಾರಿಯನ್ನು ತೋರಿದ ಮಾರ್ಗದರ್ಶಕ ರವೀಂದ್ರರು ಆಚಾರ್ಯಮುಷ್ಠಿಯಿಲ್ಲದ ಗುರು.

1996ರಲ್ಲಿ ಪ್ರಥಮ ಸಂಕಲನ "ಶೂನ್ಯವಲ್ಲದೆ ಬೇರೆ" ಪ್ರಾಚಾರ್ಯ ಎಚ್ಚೆಸ್ಕೆಯವರಿಂದ ಮುನ್ನುಡಿಯಿಂದ ಬಿಡುಗಡೆಯಾಯಿತು. 1999ರಿಂದ ಸಮನ್ವಯ ಸಮಿತಿಯ ಕಾರ್ಯಕ್ರಮವಾಗಿ ಆರಂಭವಾದ ಪ್ರತಿ ತಿಂಗಳ ಸಾಹಿತ್ಯ ದಾಸೋಹದಲ್ಲಿ ತಮ್ಮ ಕೃತಿಗಳನ್ನು ಪ್ರಸ್ತುತ ಪಡಿಸುತ್ತಿದ್ದರೂ, ವಾಟ್ಸಾಪ್ ಹಾಗೂ ಫೇಸ್ಬುಕ್ ಜಾಲತಾಣಗಳಲ್ಲಿ ಸಕ್ರಿಯವಾಗಿ ಬರೆಯುತ್ತಾ ಹಲವು ಪುಸ್ತಕಗಳ ಪ್ರಕಟಣೆಗೆ ಸಾಕಾಗುವಷ್ಟು ಕೃಷಿಯನ್ನು ನಡೆಸಿದ್ದರೂ, ಅದೇಕೋ ಪ್ರಕಟಣೆಯ ಮನಸ್ಸು ಮಾಡಿರಲಿಲ್ಲ. ಈಗ ಪ್ರಾಚಾರ್ಯ ಎಚ್ಚೆಸ್ಕೆಯವರ ಜನ್ಮ ಶತಾಬ್ದಿಯ ಅಂಗವಾಗಿ ಎಚ್ಚೆಸ್ಕೆ ಅಕ್ಷರ ನಮನ ಕಾರ್ಯಕ್ರಮದಡಿಯಲ್ಲಿ "ಆದಿಯೂ ನೆಟ್‌ನ ಪಾಠವೂ" ಎನ್ನುವ ಮಕ್ಕಳ ಓದುವ ಪದ್ಯಗಳ ಸಂಕಲನವನ್ನು ಹೊರತರುತ್ತಿದ್ದಾರೆ. ಇದಕ್ಕೆ ಶುಭವನ್ನು ಹಾರೈಸುತ್ತಿರುವಂತೆಯೇ ಅವರು ಸಹೃದಯರಿಗಾಗಿ ಬರೆದಿರುವ ಇತರ ಕೃತಿಗಳೂ ಪುಸ್ತಕ ರೂಪದಲ್ಲಿ ಆದಷ್ಟು ಬೇಗನೇ ಹೊರಬರಲಿ ಎನ್ನುವ ಸದಾಶಯ ನನ್ನದು.

ಟಿ. ಎಸ್. ಶ್ರವಣ ಕುಮಾರಿ.
ಕಥೆ, ಪ್ರಬಂಧ, ವೈಚಾರಿಕ ಲೇಖನಗಳ ಬರಹಗಾರರು
ಚರವಾಣಿ : 9886723505

ಕವನದ ಹೆಸರು	ಚಿತ್ರ ರಚನೆ
1. ಪುಟ್ಟನ ಪಾಕ	ವೈ.ಸುದರ್ಶನ
2. ಗುಬ್ಬಚ್ಚಿ ಪಾಪಚ್ಚಿ	ವೈ.ಸುದರ್ಶನ
3. ಕೋಮಲವಲ್ಲಿಯ ಚೆಲ್ಲಾಟಗಳು	ಎಂ.ಆರ್.ಶ್ರೀರಂಗರಾಜನ್
4. ಜೊಯಂತಾ ನಾಯಿ	ವೈ.ಸುದರ್ಶನ
5. ಶುನಕ ನಾಮಕರಣ	ವೈ.ಸುದರ್ಶನ
6. ಮುಂಗಾರಂದ್ರೆ ಮುಂಗಾರು	ಎಂ.ಆರ್.ಶ್ರೀರಂಗರಾಜನ್
7. ಗುರುವಿನ ಮೇಕೆ (ಪಂಚ ತಂತ್ರ)	ವೈ.ಸುದರ್ಶನ
8. ಹಾಳೂರ ಕೊಂಪೆ (ಪಂಚತಂತ್ರ)	ವೈ.ಸುದರ್ಶನ
9. ಕಪಟಿ ಬೆಕ್ಕು (ಪಂಚತಂತ್ರ)	ಎಂ.ಆರ್.ಶ್ರೀರಂಗರಾಜನ್
10. ದೊಡ್ಡವರ ಮಾತು (ಪಂಚತಂತ್ರ)	ವೈ.ಸುದರ್ಶನ
11. ಮಾತನಾಡಿದ ಗುಹೆ(ಪಂಚತಂತ್ರ)	ವೈ.ಸುದರ್ಶನ
12. ವಂಡರ್ ಬಂಡಲ್	ವೈ.ಸುದರ್ಶನ
13. ಆದಿಯ ವರಾತ	ವೈ.ಸುದರ್ಶನ
14. ಆದಿಯ ಬೇಸಿಗೆ ದಿನಚರಿ	ವೈಷ್ಣವಿ ಗೋಪಿನಾಥ್
15. ಆದಿಯ ಹೋಳಿ	ಎಂ.ಆರ್.ಶ್ರೀರಂಗರಾಜನ್
16. ಆದಿಗೆ ಬೆಕ್ಕು ಬೇಕು	ವೈ.ಸುದರ್ಶನ
17. ಬ್ಯಾ ಬ್ಯಾ ಕಪ್ಪು ಕುರಿ	ವೈ.ಸುದರ್ಶನ
18. ಕಾಪಾಡ್ಬೇಕು ಆದಿ	ವೈ.ಸುದರ್ಶನ
19. ಆದಿಯ ಅಪೀಲು	ವೈ.ಸುದರ್ಶನ
20. ಆದಿಗೆ ನಾಯಿ ಬೇಕು	ಎಂ.ಆರ್.ಶ್ರೀರಂಗರಾಜನ್
21. ಆದಿಯ ಬೇಸಿಗೆ ಪ್ಲಾನು	ವೈ.ಸುದರ್ಶನ
22. ಆದಿಯ ಹುಟ್ಟುಹಬ್ಬ	ವೈಷ್ಣವಿ ಗೋಪಿನಾಥ್ ಎಂ.ಆರ್.ಶ್ರೀರಂಗರಾಜನ್
23. ನಥಿಂಗ್ ಡೂಯಿಂಗ್ ಆದಿ	ವೈ.ಸುದರ್ಶನ
24. ಆದಿ ಪೋಕರಿ	ವೈ.ಸುದರ್ಶನ
25. ಇಲ್ಲಿ ಬಾರೆ ಪುಟ್ಟಿ	ವೈಷ್ಣವಿ ಗೋಪಿನಾಥ್
26. ಇಲಿಯ ಪಲ್ಟಿ	ವೈ.ಸುದರ್ಶನ
29. ಯಾಕಳತಾಕುಂತಿ	ವೈ.ಸುದರ್ಶನ
30. ಚಾರ್ಲಿಯ ಮಕ್ಕಳು	ವೈ.ಸುದರ್ಶನ
31. ಅಮ್ಮನೆಂಬ ಹುಲಿ	ವೈ.ಸುದರ್ಶನ

32. ದಸರೆಗೆ ಹೋಗೋಣ ಬಾ	ವೈ.ಸುದರ್ಶನ
33. ಕಪ್ಪೆಗಳ ಮದುವೆ	ಎಂ.ಆರ್.ಶ್ರೀರಂಗರಾಜನ್
34. ಅರ್ಜುತನ ಹಾಡು	ವೈಷ್ಣವಿ ಗೋಪಿನಾಥ್
35. ಕೊರೊನ ಜಾಗೃತಿ ಲಾವಣಿ	ವೈ.ಸುದರ್ಶನ
36. ಮೋಗ್ಲಿ ಬಂದನು ಮೈಸೂರ್ಗೆ	ವೈಷ್ಣವಿ ಗೋಪಿನಾಥ್
37. ಇಲಿಯ ಬೇಟೆ	ವೈ.ಸುದರ್ಶನ
38. ಆದಿ ಸೈಕಲ್ ಕಲಿಕೆ	ಎಂ.ಆರ್.ಶ್ರೀರಂಗರಾಜನ್ ವೈಷ್ಣವಿ ಗೋಪಿನಾಥ್
39. ಆದಿಯ ಡೌಟುಗಳು	ವೈ.ಸುದರ್ಶನ
40. ಆದಿಯ ಕಿತಾಪತಿ	ವೈ.ಸುದರ್ಶನ
41. ಟಿಪ್ ಟಾಪ್ ಆದಿ	ವೈ. ಸುದರ್ಶನ
42. ಆದಿ ಅನಾದಿ	ವೈ.ಸುದರ್ಶನ
43. ಆದಿಯೂ ನೆಟ್‌ನ ಪಾಠವೂ	ವೈ.ಸುದರ್ಶನ
44. ಹುಡ್ಗೀರು ನೋಡ್ರೊ ಕದ್ದು	ವೈ.ಸುದರ್ಶನ
45. ತಾಯಿಗೊಂದು ಹಾಡು	ವೈ.ಸುದರ್ಶನ
46. ಆದಿಯ ಪ್ರವಾಸ	ವೈ.ಸುದರ್ಶನ
47. ಅವರೆ ಅವರೆ ಯಾರವರೆ	ವೈ.ಸುದರ್ಶನ
48. ಬಲು ಚಂದ ತಂಗ್ಯವ್ವ ಬಲು ಚಂದ	ವೈ.ಸುದರ್ಶನ
49. ಚಿರತೆ ಹಾರುತಿದೆ ನೋಡಿದಿರಾ	ವೈ.ಸುದರ್ಶನ
50. ಚಿನ್ನದ ಹಕ್ಕಿ	ವೈ.ಸುದರ್ಶನ ಮತ್ತು ವೈಷ್ಣವಿ ಗೋಪಿನಾಥ್
51. ಕೊರೋನದ ಕಾವಳ	ವೈ.ಸುದರ್ಶನ
52. ಅಮ್ಮನ ಹುಟ್ಟಿದ ಹಬ್ಬ	ವೈ.ಸುದರ್ಶನ
53. ಗಾಂಧಿಯೆಂದರೆ	ವೈಷ್ಣವಿ ಗೋಪೀನಾಥ್
54, ಸುಬ್ಬುವಿನ ಮನೆ ದಸರಾ	ವೈ.ಸುದರ್ಶನ
55. ಬಂದರು ಸೈಟು ಮಕ್ಕಳು	ವೈ.ಸುದರ್ಶನ ಮತ್ತು ವೈಷ್ಣವಿ ಗೋಪಿನಾಥ್
57. ಮೆಲು ನಕ್ಕಳು ಅನಸೂಯೆ	ವೈ.ಸುದರ್ಶನ
58. ಬಿಲೆಗೆ	ವೈ.ಸುದರ್ಶನ
59. ದೋಸೆ ದೋಸ್ತಿ	ವೈ.ಸುದರ್ಶನ
60. ಕನ್ನಡ ತಾಯಿಗೆ ನಮನ	ವೈಷ್ಣವಿ ಗೋಪಿನಾಥ್
61. ರಂಗಪ್ಪ ಅವನ್ಯಾರಪ್ಪ	ವೈ.ಸುದರ್ಶನ

62. ಅಮೆಜಾನ್ಗೆ ಆರ್ಡರ್	ವೈ.ಸುದರ್ಶನ
63. ನಾಡಧ್ವಜ	ವೈ.ಸುದರ್ಶನ
67. ಚಂದದೂರಿನ ಪಾರಿವಾಳ	ಎಮ್.ಆರ್.ಶ್ರೀರಂಗರಾಜನ್
68. ಅಜ್ಜಿಯ ಸಂಚಿ	ಎಮ್.ಆರ್.ಶ್ರೀರಂಗರಾಜನ್
70. ದೀಪಗಳ ದೊರೆಯೇ	ಎಮ್.ಆರ್.ಶ್ರೀರಂಗರಾಜನ್



ಕನ್ನಡಿಗರ ದುಡ್ಡು ಲೆಕ್ಕಾಚಾರಗಳಲ್ಲಷ್ಟೇ ಮುಳುಗಿದ್ದ ಕನ್ನಡ ನಾಡಿನ ಬ್ಯಾಂಕುಗಳ ಕನ್ನಡ ವಿರೋಧಿ ನಿಲುವುಗಳಿಂದ ರೋಸಿ ಹೋಗಿ, ನಾಲ್ಕು ದಶಕಗಳಷ್ಟು ಹಿಂದೆಯೇ ಬ್ಯಾಂಕ್ ಉದ್ಯೋಗಿಗಳ 'ಸಮನ್ವಯ ಸಮಿತಿ'ಯೊಂದನ್ನು ಕಟ್ಟಿಕೊಂಡು ಕನ್ನಡ ಬ್ಯಾಂಕಿಂಗ್ ಪಾರಿಭಾಷಿಕ ಕೋಶ, ಕನ್ನಡ ಬ್ಯಾಂಕಿಂಗ್ ನಿಘಂಟು, ಕನ್ನಡದಲ್ಲಿ ಬ್ಯಾಂಕಿಂಗ್, ಬ್ಯಾಂಕುಗಳಲ್ಲಿ ಕನ್ನಡಿಗರ ಪರವಾಗಿ ಹೀಗೆ ಹೋರಾಡಿದ್ದ ಅಪರೂಪದ ಬ್ಯಾಂಕ್ ಕನ್ನಡಿಗ ಈ ಬಂ. ಶ್ರೀ. ರವೀಂದ್ರ. ಪ್ರಾಚಾರ್ಯ ಎಚ್ಚೆಸ್ಕೆಯವರ ಸಂಪಾದಕತ್ವದಲ್ಲಿ ಇವರು ಪ್ರಕಟಿಸಿದ್ದ 'ಬ್ಯಾಂಕಿಂಗ್ ಪ್ರಪಂಚ' ಎಂಬ ನಿಯತಕಾಲಿಕೆಯು ಕನ್ನಡ ಬ್ಯಾಂಕಿಂಗ್ ಪ್ರಪಂಚದಲ್ಲಿ ಎಂದಿಗೂ ಮರೆಯಬಾರದ ದಾಖಲೆ. ಕಳೆದ ಶತಮಾನದಲ್ಲಿ 'ಶೂನ್ಯವಲ್ಲದ ಬೇರೆ' ಕವನ ಸಂಕಲನದ ಮೂಲಕ 'ಬ್ಯಾಂಕ್ ಜನಾಂಗದ ಕಣ್ಣು ತೆರೆಸಿದ ಕವಿ'. ಇದೀಗ "ಭಲೇ ಭಲೇ ಅದಿ ಎಂಥಾ ಕಮಾಲು, ಪಿರಿಪಿರಿ ಆದ್ರೂ ಪ್ರೀತಿ ಮಾಲು, ಕಿರಿಕಿರಿ ಎಲ್ಲರಿಗೂ ನಿಂದೇ ಗುಲಾಲು, ಹೆಬ್ಬಾವು ಮೊಸಳೆ ಅಕ್ವೇರಿಯಂ ಮೀನು, ಮೋದಿ ತಾತನ ಬುಲೆಟ್ಟು ಟ್ರೈನು" ಇತ್ಯಾದಿ ಆಕರ್ಷಕ ಸಾಲುಗಳ ಮೂಲಕ ಈ ಶತಮಾನದ ಮಕ್ಕಳ ಕಿವಿಯರಳಿಸಲು ಮತ್ತೆ ಬಂದಿದ್ದಾರೆ. ಕನ್ನಡದ ಮಕ್ಕಳೆಲ್ಲ ಓದಿ, ಹಾಡಿ ಕುಣಿದು ನಲಿಯಬೇಕಾದ ಪದ್ಯಗಳಿವು.

– ಬೊಳುವಾರು ಮಹಮದ್ ಕುಂಞಿ

ಒಬ್ಬ ವ್ಯಕ್ತಿಗೆ ಕೆಲವು ರಂಗಗಳಲ್ಲಿ ಆಸಕ್ತಿಯಿದ್ದು ಕ್ರಿಯಾಶೀಲನಾಗಿರಬಹುದು. ಆದರೆ ಹಲವಾರು ರಂಗಗಳಲ್ಲಿ ಆಸಕ್ತಿಯಿಂದ ತೊಡಗಿಸಿಕೊಂಡು ಎಲ್ಲ ರಂಗಗಳಲ್ಲೂ ಯಶಸ್ವಿಯಾಗುವುದು ಕಠಿಣವೇ ಸರಿ. ಆದರೆ ಇದಕ್ಕೆ ಅಪವಾದವೇ ಬಂ. ಶ್ರೀ. ರವೀಂದ್ರ. ಕಾಲೇಜಿನ ದಿನಗಳಿಂದಲೂ ಕನ್ನಡಕ್ಕಾಗಿ ಹೋರಾಡಿದ ಧೀಮಂತ ವ್ಯಕ್ತಿ. ಕಾರ್ಮಿಕ ಸಂಘಟನೆಗಳಲ್ಲಿ ಸದಾ ಮುಂಚೂಣಿಯಲ್ಲಿದ್ದು, ಎಲ್ಲ ಕಾರ್ಯಗಳನ್ನೂ ಯಶಸ್ವಿಯಾಗಿ ನಿರ್ವಹಿಸಿರುವ ನಿಸ್ವಾರ್ಥಿ ನಾಯಕ. ಮಕ್ಕಳ ಕವನಗಳ ರಚನೆ ಇವರಿಗೆ ಅತ್ಯಂತ ಪ್ರಿಯವಾದ ಕ್ಷೇತ್ರ. 'ಅದಿಯೂ ನೆಟ್ಟನ ಪಾರವೂ' ಎನ್ನುವ ಮಕ್ಕಳ ಕವನ ಸಂಕಲನವು ಓದುಗರಿಗೆ ದೊರಕುತ್ತಿರುವುದು ಅತ್ಯಂತ ಸಂತೋಷದ ವಿಷಯ. ಅವರ ಈ ಕಾರ್ಯಕ್ಕೆ ಶುಭವನ್ನು ಹಾರೈಸುತ್ತೇನೆ.

– ಗುರುಪ್ರಸಾದ್ ಎಚ್ ಎಲ್